ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages : 40 / 12₹


# ಸ್ವಾಭಿಮಾನಿ ಸಹಕಾರಿ


ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 18
Issue - 02
February - 2021




2021–2022ನೇ ಸಾಲಿನ ಬಜೆಟ್ ದೇಶದ ಆರ್ಥಿಕತೆಯನ್ನ ಮೇಲೆತ್ತುವುದರ ಜೊತೆಗೆ ಜನಸಾಮಾನ್ಯರ ನಿರೀಕ್ಷೆಗಳನ್ನು ಪೂರೈಸಲಿದೆ.

–ನಿರ್ಮಲಾ ಸೀತಾರಾಮನ್,
ಕೇಂದ್ರ ಹಣಕಾಸು ಸಚಿವೆ



ಈ ಬಾರಿಯ ಬಜೆಟ್ ಭಾರತೀಯರ ಆತ್ಮ ವಿಶ್ವಾಸವನ್ನು ಹೆಚ್ಚಿಸಲಿದೆ

- ನರೇಂದ್ರ ಮೋದಿ

- ಕೊರೊನಾ ಲಸಿಕೆಗೆ ರೂ.35 ಸಾವಿರ ಕೋಟಿ.
- ರಾಷ್ಟ್ರೀಯ ಶಿಕ್ಷಣ ನೀತಿಯಡಿ 15 ಸಾವಿರಕ್ಕೂ ಹೆಚ್ಚು ಶಾಲೆಗಳ ಬಲವರ್ಧನೆ: 100 ಹೊಸ ಸೈನಿಕ ಶಾಲೆಗಳ ಸ್ಥಾಪನೆ
- ಡಿಜಿಟಲ್ ಪಾವತಿ ಉತ್ತೇಜನಕ್ಕೆ ರೂ. 1,500 ಕೋಟಿ
- ಸಂಶೋಧನಾ ಪರಿಸರ ವ್ಯವಸ್ಥೆಗೆ ಪುಷ್ಟಿ ನೀಡಲು, ದೇಶದಲ್ಲಿ ಆವಿಷ್ಕಾರ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಗೆ ಉತ್ತೇಜನ
- 2021ರ ಡಿಸೆಂಬರ್‌ನಲ್ಲಿ ಭಾರತದ ಮೊಟ್ಟ ಮೊದಲ ಮಾನವ ರಹಿತ ಗಗನಯಾನ




ಫೆಬ್ರವರಿ 21
ಅಂತರರಾಷ್ಟ್ರೀಯ ಮಾತೃಭಾಷೆ ದಿನ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5160

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1355



**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**

> ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ 20ರ ಹರೆಯ. ದಿನಾಂಕ 01.01.2001 ರಿಂದ ಕಾಯ್ದೆ ಜಾರಿಗೆ ಬಂದಿರುವ ಜ್ಞಾಪಕಾರ್ಥವಾಗಿ ಪ್ರತಿವರ್ಷ ಜನವರಿ 1 ರಂದು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸುತ್ತ ಬಂದಿರುವುದು ತಮಗೆಲ್ಲ ತಿಳಿದ ವಿಷಯ ಎಂದು ಭಾವಿಸುತ್ತೇನೆ. ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನವನ್ನು ಅತ್ಯಂತ ಉತ್ಸಾಹದಿಂದ ಆಚರಿಸಿರುವ ವರದಿಗಳು ಬಂದಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಸಾರುವ ಈ ದಿನವನ್ನು ಆಚರಿಸುವಲ್ಲಿ ಸೌಹಾರ್ದ ಸಹಕಾರಿಗಳು ತೋರಿದ ಉತ್ಸಾಹ ಅಭಿನಂದನೀಯ.

# ಸೌಹಾರ್ದ ಸಹಕಾರಿ ದಿನ ಯಶಸ್ವಿ ಆಚರಣೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ನೌಕರ ವರ್ಗದವರ ಶ್ರಮ ಶ್ಲಾಘನೀಯ.

**ಆತ್ಮೀಯರೆ,**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿ ಬಂಧುಗಳಿಗೆ ಹೃದಯಪೂರ್ವಕ ನಮನಗಳು. ಹೊಸ ವರ್ಷ ಉತ್ತಮವಾಗಿ ಹೊಸ ಆಶೋತ್ತರಗಳಿಂದ ಪ್ರಾರಂಭವಾಗಿದೆ. ಮತ್ತೊಮ್ಮೆ ಎಲ್ಲರಿಗೂ ಶುಭಹಾರೈಸುತ್ತೇನೆ.

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ 20ರ ಹರೆಯ. ದಿನಾಂಕ 01.01.2001 ರಿಂದ ಕಾಯ್ದೆ ಜಾರಿಗೆ ಬಂದಿರುವ ಜ್ಞಾಪಕಾರ್ಥವಾಗಿ ಪ್ರತಿವರ್ಷ ಜನವರಿ 1 ರಂದು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸುತ್ತ ಬಂದಿರುವುದು ತಮಗೆಲ್ಲ ತಿಳಿದ ವಿಷಯ ಎಂದು ಭಾವಿಸುತ್ತೇನೆ. ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನವನ್ನು ಅತ್ಯಂತ ಉತ್ಸಾಹದಿಂದ ಆಚರಿಸಿರುವ ವರದಿಗಳು ಬಂದಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಸಾರುವ ಈ ದಿನವನ್ನು ಆಚರಿಸುವಲ್ಲಿ ಸೌಹಾರ್ದ ಸಹಕಾರಿಗಳು ತೋರಿದ ಉತ್ಸಾಹ ಅಭಿನಂದನೀಯ.

ಸಹಕಾರಿ ಕ್ಷೇತ್ರದ ಪ್ರಗತಿಯಲ್ಲಿ ಆಡಳಿತ ಮಂಡಳಿಯವರು, ಸಿಬ್ಬಂದಿವರ್ಗ ಎಲ್ಲಕ್ಕೂ ಮೇಲಾಗಿ ಸಕ್ರೀಯ ಸದಸ್ಯರು ಪಾಲುದಾರರಾಗುತ್ತಾರೆ ಎಂಬುದು ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಎಲ್ಲರೂ ತಿಳಿಯಲೇಬೇಕಾದ ಅತ್ಯಂತ ಮಹತ್ವದ ವಿಷಯ. ಸದಸ್ಯರು ಮಾಲೀಕರು. ಆಡಳಿತ ಮಂಡಳಿಯವರು ಈ ಸಹಕಾರ ರಥವನ್ನು ಸರಿಯಾಗಿ ನಡೆಸುವ ಜವಾಬ್ದಾರಿಯವರು. ಸಿಬ್ಬಂದಿವರ್ಗದವರು ವ್ಯವಸ್ಥೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಈ 3 ವರ್ಗದವರೆಲ್ಲ ಸೇರಿ ಈ ಸಹಕಾರಿ ರಥವನ್ನು ಸರಿಯಾದ ಪಥದಲ್ಲಿ ನಡೆಸುವ ಮಹತ್ವದ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹವಾಗಿದೆ. ಹೀಗಾಗಿ ಈ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರೆಲ್ಲರೂ ಉತ್ತರದಾಯಿತ್ವವನ್ನು ಹೊಂದಿದ್ದಾರೆ ಎಂಬುದು ಗಮನಾರ್ಹ.

ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳೆಲ್ಲವೂ ಉತ್ತಮವಾಗಿ ನಡೆಯಬೇಕು. ಸಾರ್ವಜನಿಕರಿಂದ ಹಾಗೂ ಸರಕಾರದ ಹಂತದಲ್ಲಿ ಸೌಹಾರ್ದ ಸಹಕಾರ ಕ್ಷೇತ್ರದ ಬಗ್ಗೆ ಯಾವುದೇ ಟೀಕೆ ಟಿಪ್ಪಣಿಗಳು ಬಾರದಂತೆ ಸದಸ್ಯರ ಆಶಯಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಮಾನಸಿಕತೆ ಹಾಗೂ ಬದ್ಧತೆಯನ್ನು ರೂಢಿಸಿಕೊಳ್ಳೋಣ, ನ್ಯೂನತೆಗಳಿಗೆ ಕಡಿವಾಣ ಹಾಕೋಣ ಪ್ರಗತಿಯತ್ತ ದಾಪುಗಾಲು ಹಾಕೋಣ ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕಾರ್ಯಪ್ರವೃತ್ತರಾಗುವಿರಾಗಿ ಆಶಿಸುತ್ತೇನೆ.

ವಿಶೇಷವಾಗಿ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ನೌಕರ ವರ್ಗದವರು ಹೆಚ್ಚಿನ ಆಸಕ್ತಿ ಹಾಗು ಬದ್ಧತೆಯಿಂದ ಉತ್ತಮ ಸಾಧನೆಯನ್ನು ಮಾಡುವ ಮಾನಸಿಕತೆಯಿಂದ ಕಾರ್ಯನಿರ್ವಹಿಸಬೇಕೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಅಪೇಕ್ಷಿಸುತ್ತದೆ. ಈ ನಿಟ್ಟಿನಲ್ಲಿ ತಾವುಗಳೆಲ್ಲ ಸಹಕರಿಸುವಿರಾಗಿ ಆಶಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜಿ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 5-19
ಸಂಯುಕ್ತ ಸಹಕಾರಿ ಪ್ರಕಟಣೆ ಪುಸ್ತಕಗಳ ವಿವರ ........................................ 20
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 22-31
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-9) ................................ 37-38
ಸ್ವ-ಸಹಾಯ ಗುಂಪುಗಳು ಪರಿಕಲ್ಪನೆ ಏಕೆ ? ಹೇಗೆ ? .................................. 39-40

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳು ಆರ್ಥಿಕ ಸಬಲತೆಯ ಮಾನದಂಡಗಳ ಹಾಗೂ ಶಾಖಾ ಅನುಮತಿ ಸುತ್ತೋಲೆಗಳ ಪಾಲನೆಯ ಅಗತ್ಯತೆ

ದಿನಾಂಕ 19.12.2020 ರಂದು ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯ ವಿಷಯ 19 ರಲ್ಲಿ ಅನುಮೋದಿತವಾಗಿರುವಂತೆ 01.01.2021 ರಿಂದ ಅನ್ವಯವಾಗುವಂತೆ ಜಾರಿಗೆ ಕೊಡಲಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯ ನಡೆ ಗುಣಮಟ್ಟದ ಕಡೆ ಎಂಬ ಘೋಷಣೆಯನ್ನು ಪರಿಣಾಮಕಾರಿಯಾಗಿಸುವಲ್ಲಿ ಇದು ಅತ್ಯಂತ ಮಹತ್ವದ ವಿಷಯ ಮತ್ತು ಮಹತ್ವದ ಹೆಜ್ಜೆ ಕೂಡ ಇದಾಗಿದೆ ಎಂಬುದಾಗಿ ರಾಜ್ಯದ ಸೌಹಾರ್ದ ಸಹಕಾರಿಗಳು ತಿಳಿಯಬೇಕಾದುದು ಅವಶ್ಯಕ.

ಸಂಸ್ಥೆಯ ಪ್ರಗತಿ ಆರ್ಥಿಕ ಸ್ಥಿತಿಗತಿಗಳ ಮೇಲೆ ಅವಲಂಬಿಸಿರುತ್ತದೆ. ಷೇರು ಬಂಡವಾಳ ಸಂಗ್ರಹ, ಠೇವಣಿಗಳ ಸಂಗ್ರಹ, ನಿಧಿಗಳ ಹೂಡಿಕೆ, ಗುಣಾತ್ಮಕ ಸಾಲಗಳ ನೀಡುವಿಕೆ, ಸಾಲ ವಸೂಲಾತಿ ಪ್ರಮಾಣ, ದ್ರವ್ಯಾಸ್ತಿಗಳ ಪ್ರಮಾಣ ಹಾಗೂ ಒಟ್ಟಾರೆ ಸಹಕಾರಿಯ ಆಸ್ತಿ ಹಾಗೂ ಜವಾಬ್ದಾರಿಗಳನ್ನು ಅವಲಂಬಿಸಿರುತ್ತದೆ. ಯಾವುದೇ ಕಾರಣಕ್ಕೂ ಇವುಗಳ ಪ್ರಮಾಣದಲ್ಲಿ ವ್ಯತ್ಯಾಸವಾಗಕೂಡದು ಇವು ವ್ಯತ್ಯಾಸವಾದಾಗ ಸಹಕಾರಿಯ ಹಣಕಾಸಿನ ವ್ಯವಸ್ಥೆಗಳಲ್ಲಿ ಏರುಪೇರುಗಳಾಗಿ ಸಹಕಾರಿಯು ರೋಗಗ್ರಸ್ತವಾಗುತ್ತದೆ. ಸದಸ್ಯರ ಆಶಯಗಳಿಗೆ ಸ್ಪಂದಿಸಲು ವಿಫಲವಾಗುತ್ತದೆ. ಸಾಮಾಜಿಕವಾಗಿ ವಿಶೇಷವಾಗಿ ಸಹಕಾರಿ ಕ್ಷೇತ್ರದಲ್ಲಿ ಕೆಟ್ಟ ಹೆಸರು ಬರಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ಬಗ್ಗೆ ಸೌಹಾರ್ದ ಸಹಕಾರಿಗಳು ಗಮನವಿಟ್ಟು ಕಾರ್ಯನಿರ್ವಹಿಸುವುದು ಅಗತ್ಯ.

ಅದರಂತೆ ರಾಜ್ಯದಲ್ಲಿ ಕೆಲವೇ ಕೆಲವು ಸೌಹಾರ್ದ ಸಹಕಾರಿಗಳು ಅವರುಗಳ ವೈಯಕ್ತಿಕ ಆಶೋತ್ತರಗಳ ಈಡೇರಿಕೆಗಾಗಿ ತಮಗೆ ಬೇಕಾದಂತೆ ಶಾಖೆಗಳನ್ನು ತೆರೆಯುತ್ತಿರುವುದು ನಂತರ ಸಹಕಾರಿಯ ಆರ್ಥಿಕ ಶಿಸ್ತು ಉಲ್ಲಂಘಿಸುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾರಕವಾಗುತ್ತದೆ. ಬೇರೆ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತದೆ. ಸಹಕಾರಿಗಳ ಮಾನಸಿಕತೆ ಕದಡುತ್ತದೆ. ಸೌಹಾರ್ದ ಸಹಕಾರಿಗಳು ಶಾಖೆ ಪ್ರಾರಂಭಿಸುವಾಗ ಆಡಳಿತ ಮಂಡಳಿಯು ಆ ಶಾಖೆಯ ಸ್ಥಳದ ಬಗ್ಗೆ ಪೂರ್ಣ ಮಾಹಿತಿ ಹಾಗೂ ವ್ಯವಹಾರ ಅಭಿವೃದ್ಧಿಗೆ ಪೂರಕವೇ ಎಂಬ ಬಗ್ಗೆ ಅಧ್ಯಯನ ನಡೆಸಬೇಕು. ಸಹಕಾರ ಸಂಸ್ಥೆಗಳ ಮಧ್ಯೆ ಸೌಹಾರ್ದಯುತ ಸ್ಪರ್ಧೆ ಇರಬೇಕು ವಿನಃ ಹೆಚ್ಚಿನ ಬಡ್ಡಿ ನಿಯಮಗಳನ್ನು ತೋರಿಸಿ ಠೇವಣಿ ಸಂಗ್ರಹಣೆ ಮಾಡಬಾರದು.

ಹೀಗಾಗದಂತೆ ಎಚ್ಚರ ವಹಿಸುವ ದೃಷ್ಟಿಯಿಂದ ಕಳೆದ 2-3 ವರ್ಷಗಳಿಂದ ಹಲವು ವೇದಿಕೆಗಳಲ್ಲಿ ಹಲವು ಬಾರಿ ಚರ್ಚಿತವಾಗಿರುವ ಹಾಗೂ ಇದಕ್ಕಿರುವ ಒತ್ತಾಸೆಯನ್ನು ಗಮನಿಸಿದ ಸಂಯುಕ್ತ ಸಹಕಾಯ ಆಡಳಿತ ಮಂಡಳಿಯವರು ಅಗತ್ಯ ಮಾನದಂಡಗಳನ್ನು ಸಿದ್ಧಪಡಿಸಿ ನಂತರ ವಾರ್ಷಿಕ ಮಹಾಸಭೆಯು ಈ ಮಾನದಂಡಗಳನ್ನು ಅನುಮೋದಿಸಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಈ ಸುತ್ತೋಲೆಯನ್ನು ಕಳುಹಿಸಿದೆ. ಎಲ್ಲ ಸೌಹಾರ್ದ ಸಹಕಾರಿಗಳು ಕಟ್ಟು ನಿಟ್ಟಾಗಿ ಪಾಲಿಸುವುದು ಅಗತ್ಯ. ಈ ಸುತ್ತೋಲೆಗಳ ಉಲ್ಲಂಘನೆ ಸೌಹಾರ್ದ ಸಹಕಾರಿ ಕ್ಷೇತ್ರದ ಯಶಸ್ಸಿಗೆ ಹಿನ್ನಡೆಯಾಗುತ್ತದೆ ಸೌಹಾರ್ದ ಸಹಕಾರಿಗಳು ಈ ಬಗ್ಗೆ ಹೆಚ್ಚು ಗಮನ ವಹಿಸುವುದು ಅಗತ್ಯವಿದೆ.

## "ಜನ್ಮ ತಾಳಿದ ಪ್ರತಿ ವಸ್ತು, ವ್ಯಕ್ತಿಗೂ ನಾಶವಿದ್ದೇ ಇದೆ"

ಅವ್ಯಕ್ತನಾಗಿದ್ದರೂ ವಿಶಾಲ ವಿಶ್ವದ ಮೂಲ ಸೃಷ್ಟಿಗೆ ಕಾರಣನೆನಿಸಿರುವ ಭಗವಂತನನ್ನು ವಿವಿಧ ಹೆಸರುಗಳಿಂದ ದಾತ, ವಿಧಾತ, ಬ್ರಹ್ಮ, ವಿಧಿ ಹಾಗೂ ಸರಬ್ರಹ್ಮ ಎಂಬತ್ಯಾದಿ ನಾಮಧ್ಯೇಯಗಳಿಂದ ಕರೆಯಲ್ಪಡುವ ದೇವರು ಮೂಲಶಕ್ತಿ ಹಾಗೂ ಸರ್ವನಿಯಂತ್ರಕ, ಸೃಷ್ಟಿ, ಸ್ಥಿತಿ, ಲಯ ಕರ್ತವ್ಯಗಳನ್ನು ಕರಾರುವಾಕ್ಕಾಗಿ ನಿರ್ವಹಿಸುವ ಸರ್ವೇಶ್ವರನು ಯಾರಿಗೂ ಭೇದಭಾವ ತೋರಿಸದೇ ಸರ್ವಸಮಾನವಾಗಿ ಪ್ರತಿ ಜೀವಿಗೂ ನೀಡುತ್ತಾ ಋಷಿ ಮುನಿಗಳು, ಶ್ರೇಷ್ಠಮಠಾಧೀಶ್ವರರು, ಉತ್ತಮೋತ್ತಮವೈದ್ಯರು, ದಕ್ಷ ಆಡಳಿತಗಾರರು, ಚತುರವಿಜ್ಞಾನಿ, ವಿಶ್ವವಿಖ್ಯಾತ ಕುಸ್ತಿಪಟು ಮತ್ತು ಕ್ರೀಡಾಪಟುಗಳೆಂಬ ವ್ಯತ್ಯಾಸ ತೋರದೇ ಸರ್ವರಿಗೂ ನಿರ್ದಿಷ್ಟ ವಯೋಮಾನದ ನಂತರ ಸಾವನ್ನು ನೀಡುತ್ತಿದ್ದು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಈ ಸಾವಿನ ಪ್ರಕ್ರಿಯೆಯನ್ನು ಸವಿಸ್ತಾರವಾಗಿ ವೀಕ್ಷಿಸಿ ಈ ಜಗತ್ತಿನಲ್ಲಿ ಹುಟ್ಟು ಬಂದ ನಮ್ಮನ್ನೆಲ್ಲಾ ಭಗವಂತನು ಗಾಣದಣ್ಣೆಯ ಎಳ್ಳು ಕಾಳೆಂತಲೂ, ನಮ್ಮೆಲ್ಲರನ್ನು ತಪ್ಪದೇ ಅರೆಯುವ ಗಾಣದ ಪ್ರಕ್ರಿಯೆಯನ್ನು ಈ ಕೆಳಗಿನ ಪದ್ಯದಲ್ಲಿ ಶೃತ ಪಡಿಸಿದ್ದಾರೆ.

ದಾತನೆಣ್ಣೆಯ ಗಾಣದೆಳ್ಳು ಕಾಳಲೆ ನೀನು
ಆತನೆಲ್ಲರನರೆವನ : ಆರನುಂ ಬಿಡನು
ಆತುರಂಗೊಳದೆ ವಿಸ್ಮೃತಿಬಡದುಪೇಕ್ಷಿಸದೆ
ಘಾತಿಸುವನೆಲ್ಲರನು – ಮಂಕುತಿಮ್ಮ ॥ 357 ॥

ಶ್ರೇಣಿ 58



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ತಾಕಿಕ ಜಗತ್ತಿನಲ್ಲಾದರೆ ಯಾವುದೇ ಒಂದು ಶಿಕ್ಷೆಯನ್ನು ನೀಡುವ ಪ್ರಕ್ರಿಯೆಯಲ್ಲಿ ಶಿಕ್ಷೆ ನೀಡಬಲ್ಲ ಪ್ರಾಧಿಕಾರಗಳು ಪರಪಕ್ಷ ಧೋರಣೆ ತಳೆದು ಕೆಲವರಿಗೆ ದಾಕ್ಷಿಣ್ಯ ಮುಲಾಜ ತೋರುತ್ತದುಂಟು. ಆದರೆ ವಿಶ್ವದೊಡೆಯನಾದ ಭಗವಂತನು ಜೀವಿಗಳನ್ನು ಸಾವಿಗೊಳಪಡಿಸುವ ಪ್ರಕ್ರಿಯೆಯಲ್ಲಿ ವ್ಯತ್ಯಾಸೀಕರಣ ತೋರದೆ, ಮರೆಯದೇ, ಆತರುಪಡದೇ ಆತನ ಗಾಣದ ಎಳ್ಳು ಕಾಳುಗಳಾಗಿರುವ ನಮ್ಮನ್ನು ಅರೆದು ಘಾಸಿಗೊಳಿಸುತ್ತಾನೆಂಬ ಸಾರ್ವತ್ರಿಕ ಸತ್ಯವನ್ನು ಪ್ರಕಟಪಡಿಸಲಾಗಿದೆ. ಹೊರ ಜಗತ್ತಿನ ಬಿರುದು ಬಾವಲಿಗಳು ಉದ್ಯೋಗ ನಾಮಗಳು, ಹೊಂದಿರುವ ದೇಹ ಸೌಂದರ್ಯ, ಹಣಬಲ, ಸ್ಥಿರಸಂಪತ್ತು ಇವ್ಯಾವನ್ನು ಪರಿಗಣಿಸದೇ ನಾಶಪಡಿಸುವ ನಿರಂತರ ಪ್ರಕ್ರಿಯೆಯನ್ನು ಮನದಲ್ಲಿರಿಸಿಕೊಂಡು, ಸರ್ವಾತ್ಮರುಗಳನ್ನು ವಿಶ್ವದೇವನ ಮಕ್ಕಳೆಂಬ ವಿಶಾಲ ದೃಷ್ಟಿಯಿಂದ ಸಹಕಾರ ಮನೋಭಾವ ತಳೆದು ಬಾಳಿ ನಿಮ್ಮ ಬದುಕನ್ನು ಸಾರ್ಥರಪಡಿಸಿಕೊಳ್ಳಿರೆಂಬದೇ ಈ ಪದ್ಯದ ಸಾರವಾಗಿದೆ.

**ನಿನಗಾಗಿ ಮಾತ್ರ ಬದುಕುವುದಕ್ಕಿಂತ ಇತರರಿಗಾಗಿ ಬದುಕಲು ಕಲಿ.**
**ನಿನ್ನನ್ನು ಸರ್ವಕಾಲಕ್ಕೂ ಸ್ಮರಿಸುವರು.**

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 15,698 ಆಗಿರುತ್ತದೆ. ಇವುಗಳ ಪೈಕಿ 8437 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,261.

**ಜನವರಿ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 301, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 327.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,621 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 250 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,210 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1007 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 103 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 434 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜನವರಿ ತಿಂಗಳಿನಲ್ಲಿ 47 ಪ್ರಕರಣ ದಾಖಲಾಗಿರುತ್ತವೆ.



## ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರಾದ ಶ್ರೀ ಮುರುಗೇಶ ನಿರಾಣಿ ಇವರಿಗೆ ಅಭಿನಂದನೆ

**ಬೆಂಗಳೂರು :** ಕರ್ನಾಟಕ ಸರ್ಕಾರದ ನೂತನ ಸಚಿವರಾದ ಗಣಿ ಮತ್ತು ಭೂ ವಿಜ್ಞಾನ ಸಚಿವರಾದ ಶ್ರೀ ಮುರುಗೇಶ ನಿರಾಣಿ ಇವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭೇಟಿ ನೀಡಿ ಅಭಿನಂದನೆ ಸಲ್ಲಿಸಿದರು.

## ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್

### ತರಬೇತಿ ಅಭಿವೃದ್ಧಿಗಾಗಿ ಹೂಡಿಕೆ, ತರಬೇತಿ ಇಲ್ಲದಿರುವುದು ಅವ್ಯವಸ್ಥೆಯ ಅತಿವೆಚ್ಚಕ್ಕೆ ದಾರಿ – ಶ್ರೀಮತಿ ರಮಾಕುಮಾರಿ, ಉಪಪ್ರಧಾನ ವ್ಯವಸ್ಥಾಪಕರು, ಆರ್.ಬಿ.ಐ. ಬೆಂಗಳೂರು.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನೇತೃತ್ವದಲ್ಲಿ ರಾಜ್ಯದ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನ ಉದ್ಘಾಟನೆ ಮಾಡಿದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಉಪಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ರಮಾಕುಮಾರಿ ಇವರು ಮಾತನಾಡಿ ತರಬೇತಿ ಬ್ಯಾಂಕಿನ ಅಭಿವೃದ್ಧಿಗಾಗಿ ವ್ಯವಸ್ಥಿತವಾದ ಹೂಡಿಕೆಯಾದರೆ, ತರಬೇತಿ ನೀಡದಿರುವುದು ಅವ್ಯವಸ್ಥೆಯತ್ತ ಸಾಗುವುದಲ್ಲದೆ ಹೆಚ್ಚಿನ ವೆಚ್ಚವನ್ನು ಸಹ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಶ್ರೀ ಇಳಂಗೋವನ ಇವರು ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ವಿಶೇಷವಾಗಿ ಸಹಕಾರ ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು ತಮ್ಮ ಸಂಸ್ಥೆಯ ಬಗ್ಗೆ ಪೂರ್ಣ ಮಾಹಿತಿ ಹೊಂದಿರುವುದು ಅಗತ್ಯ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಅಭಿವೃದ್ಧಿಗಾಗಿ ಹಾಗೂ ಆರೋಗ್ಯಕರ ಬೆಳವಣಿಗೆಗಾಗಿ ಶಿಕ್ಷಣ ತರಬೇತಿ ಹಾಗೂ ಪ್ರಚಾರ ಕಾರ್ಯಕ್ರಮಗಳನ್ನು ಉತ್ತಮವಾಗಿ ಪರಿಣಾಮಕಾರಿಯಾಗಿ ನಿರ್ವಹಿಸುತ್ತ ಬಂದಿದೆ. ಉತ್ತಮ ವಿಷಯಗಳನ್ನು ಆಯ್ಕೆಮಾಡಿ ಅನುಭಾವಿ ಉಪನ್ಯಾಸಕರುಗಳನ್ನು ಬರಮಾಡಿಕೊಂಡು ಅದರ ಜೊತೆಗೆ ಹಲವಾರು ಪೂರಕ ವಿಷಯಗಳನ್ನು ಅಳವಡಿಸಿ ತರಬೇತಿ ನೀಡಲಾಗುತ್ತದೆ. ಶಿಬಿರಾರ್ಥಿಗಳು ಸಕ್ರೀಯವಾಗಿ ಭಾಗವಹಿಸಿ ಇದರ ಪ್ರಯೋಜನ ಪಡೆದು ಬ್ಯಾಂಕಿಂಗ್ ಉತ್ತಮ ಕ್ರಿಯಾಶೀಲ ಸಿಬ್ಬಂದಿಯಾಗಬೇಕೆಂದು ಕರೆ ನೀಡಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರ ಶ್ರೀ ಶರಣಗೌಡ ಜಿ. ಪಾಟೀಲ ಇವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳುತ್ತ ಸೌಹಾರ್ದ ಸಹಕಾರಿ ಬ್ಯಾಂಕುಗಳಿಗಾಗಿ ಸಂಯುಕ್ತ ಸಹಕಾರಿಯಲ್ಲಿ ಪ್ರತಿ ವರ್ಷ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಕೋರ್ಸ್ ನಡೆಸುತ್ತ ಬಂದಿದೆ. ಇದು 5ನೇ ತಂಡ ಕಳೆದ 2 ವರ್ಷಗಳಿಂದ ಈ ಕೋರ್ಸ್ ಅನ್ನು ಸಟೀಫಿಕೇಟ್ ಕೋರ್ಸ್‌ನ್ನಾಗಿ ಮಾಡಲಾಗಿದೆ. ಪಠ್ಯಕ್ರಮವನ್ನು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವವಿರುವ ನುರಿತರೊಂದಿಗೆ ಚರ್ಚಿಸಿ ಸಿದ್ದಪಡಿಸಲಾಗಿದೆ. ಅದಕ್ಕನುಗುಣವಾಗಿ ಅಧ್ಯಯನ ಸಾಹಿತ್ಯವನ್ನು ಸಿದ್ದಪಡಿಸಿದೆ ಎಂದು ತಿಳಿಸಿದರು. ತರಬೇತಿ ಅಧಿಕಾರಿ ಶ್ರೀ ವಿ.ಜೆ ಕಾರಕೂನ್ ರವರು ವಂದನಾರ್ಪಣೆ ನೇರವೇರಿಸಿದರು.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಕೊಪ್ಪಳ :** ದಿನಾಂಕ 23.01.2021 ರಂದು ರಾಯಚೂರು, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗಾಗಿ/ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಸಿ.ಬಿ.ಎಸ್ ಕಲ್ಯಾಣ ಮಂಟಪ, ಗಂಗಾವತಿ ಕೊಪ್ಪಳದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಿ.ಬಿ.ಎಸ್ ಬ್ಯಾಂಕಿನ ನಿರ್ದೇಶಕರು ಹಾಗೂ ಹಿರಿಯ ಸಹಕಾರಿಗಳು ಮತ್ತು ಗಂಗಾವತಿಯ ಮಾನ್ಯ ಶಾಸಕರಾದ ಶ್ರೀ ಪರಣ್ಣ ಮುನವಳ್ಳಿರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಆರ್ ತಿಮ್ಮಯ್ಯ ಶೆಟ್ಟಿ ಮತ್ತು ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ. ರಾಜಶೇಖರ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯದ ಮಾನ್ಯ ಉಪನಿಬಂಧಕರಾದ ಶ್ರೀ ಮಂಜುನಾಥ ಸಿಂಗ್, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯದ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರ, ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ಗಿರಿಯಪ್ಪ ಹೊಸಕೇರಿ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ , ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್.ಎಚ್, ಸಹಕಾರ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವನಗೌಡ ಪಾಟೀಲರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ, ಶ್ರೀ ಪವನ ಎಮ್.ಆರ್, ಶ್ರೀ ರವಿಕುಮಾರವರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮಂಜುನಾಥ ಸಿಂಗ್, ಮಾನ್ಯ ಉಪನಿಬಂಧಕರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ ನ್ಯಾಯಾಲಯ ಬೆಂಗಳೂರು ಇವರು "ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರಿಯೆ" ಕುರಿತು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಸಿ..ಎ.ಯರ್ರಿಸ್ವಾಮಿ, ಮಾನ್ಯ ಸನ್ನದು ಲೆಕ್ಕಪರಿಶೋಧಕರು ಹಾಗೂ ವೃತ್ತಿಪರ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹೊಸಪೇಟೆ, ಬಳ್ಳಾರಿ ಇವರು "ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಹಾಗೂ ಎನ್.ಐ ಕಾಯ್ದೆಯ ಇತ್ತೀಚಿನ ತಿದ್ದುಪಡಿಯ ಕುರಿತು "ಉಪನ್ಯಾಸ ನೀಡಿದರು. ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಆದಾಯ ತೆರಿಗೆಗೆ ಸಂಬಂಧಿಸಿದ ಸಹಕಾರಿಗಳ ಕುರಿತು ಇತ್ತೀಚಿನ ಸರ್ವೋಚ ನ್ಯಾಯಾಲಯಗಳು ನೀಡಿರುವ ಇತ್ತೀಚಿನ ತೀರ್ಪುಗಳ ಕುರಿತು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಮೂರು ಜಿಲ್ಲೆಗಳಿಂದ 470 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಕಲಬುರಗಿ :** ದಿನಾಂಕ 28.01.2021 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಗೆ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರುಗಳಿಗೆ "ವಿಷಯಾಧಾರಿತ ತರಬೇತಿ" ಯನ್ನು ಹೋಟೆಲ್ ಸಪ್ತಗಿರಿ ಆರೆಂಜ, ಕಲ್ಯಾಣಿ ಕಲ್ಯಾಣ ಮಂಟಪ ಹತ್ತಿರ, ಟ್ಯಾಂಕ್ ಬಂಡ ಬ್ರಹ್ಮಪುರ ಕಲಬುರಗಿ. ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ನೇರವೇರಿಸಿದರು. ವೇದಿಕೆಯ ಮೇಲೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಬಸವೇಶ್ವರ ಸುದ್ದಿ ಮಾಧ್ಯಮದ ಮಹಾಮಂಡಳದ ನಿರ್ದೇಶಕರಾದ ಎಸ್.ಎಸ್. ಪಾಟೀಲ್, ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ.ರಾಜಶೇಖರ, ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ರಾಜಶೇಖರ ಹೂಗಾರ ಉಪಸ್ಥಿತರಿದ್ದರು.

ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವೈ.ವಿ ಗುಂಡುರಾವ ಸಹಕಾರ ತರಬೇತುದಾರರು, ಇವರು "ಸ್ಪರ್ಧಾತ್ಮಕ ಯುಗದಲ್ಲಿ ಸೌಹಾರ್ದ ಸಹಕಾರಿಗಳು ರಚನಾತ್ಮಕವಾಗಿ ಇರುವುದು ಹೇಗೆ " ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಶಶಿಶೇಖರ ರೆಡ್ಡಿ, ಸರಕಾರಿ ಪದವಿ ಪ್ರಥಮ ದರ್ಜೆ ಕಾಲೇಜು, ಕಲಬುರಗಿ. ಇವರು ಬದಲಾದ ಸನ್ನಿವೇಶದಲ್ಲಿ ಸಹಕಾರಿಗಳ ಬೆಳವಣಿಗೆಯಲ್ಲಿ ಆಡಳಿತ ಮಂಡಲಿಯ ಹಾಗೂ ಷೇರು ಸದಸ್ಯರ ಪಾತ್ರದ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

# ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು

**ಬೆಳಗಾವಿ :** ದಿನಾಂಕ 12 ಜನವರಿ 2021 ರಂದು ಸವದತ್ತಿ, ರಾಮದುರ್ಗ ಮತ್ತು ಯರಗಟ್ಟಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಸಭಾಭವನ, ಶ್ರೀ ರಾಮಲಿಂಗೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಹತ್ತಿರ, ಆನಿ ಅಗಸಿ. ಸವದತ್ತಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರಿ ಶ್ರೀಕಾಂತ್ ಬರುವೆ ಹಾಗೂ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರಿಂದ ಉಪನ್ಯಾಸವನ್ನು ನೀಡಲಾಯಿತು. ಸಭೆಯಲ್ಲಿ 32 ಸಹಕಾರಿಗಳಿಂದ 50 ಪ್ರತಿನಿಧಿಗಳು ಭಾಗವಹಿಸಿದ್ದರು. ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರು ಆದ ಶ್ರೀ ಬಸವರಾಜ ಹೊಂಗಲರವರು ಸಭೆಯನ್ನು ನಡೆಸಿದರು.

ದಿನಾಂಕ 13 ಜನವರಿ 2021 ರಂದು ಬೈಲಹೊಂಗಲ ಮತ್ತು ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೊಟೇಲ್ ತೇಜಸ್ ರೆಸಿಡೆನ್ಸಿ, ಚನ್ನಮ್ಮ ಸರ್ಕಲ್, ಬೆಳಗಾವಿ ರೋಡ್, ವಿದ್ಯಾನಗರ, ಬೈಲಹೊಂಗಲ ಇಲ್ಲಿ ಆಯೋಜಿಸಲಾಗಿತ್ತು. ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರಿಂದ ಉಪನ್ಯಾಸವನ್ನು ನೀಡಲಾಯಿತು. ಸಭೆಯಲ್ಲಿ 35 ಸಹಕಾರಿಗಳಿಂದ 54 ಪ್ರತಿನಿಧಿಗಳು ಭಾಗವಹಿಸಿದ್ದರು. ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರು ಆದ ಶ್ರೀ ಬಸವರಾಜ ಹೊಂಗಲರವರು ಸಭೆಯನ್ನು ನಡೆಸಿದರು.

**ಧಾರವಾಡ :** ದಿನಾಂಕ 30 ಜನವರಿ 2021 ರಂದು ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ರೇವಣಕರ ಕಂಫರ್ಟ್ಸ್, ಟಿ.ಬಿ.ರೋಡ(ಸರ್ಕಿಟ್ ಹೌಸ್) ಕೋರ್ಟ ಸರ್ಕಲ್ ಹತ್ತಿರ, ಹುಬ್ಬಳ್ಳಿ. ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಬಸವಶ್ರೀ ಸೌಹಾರ್ದ ಸಹಕಾರಿ ವಿಜಯಪುರ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸಂಗಮೇಶ ಬಬಲೇಶ್ವರ ಇವರು ಹಾಗೂ ಉದ್ಘಾಟಕರಾಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆಯವರು ಭಾಗವಹಿಸಿದ್ದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರಿ ಶ್ರೀಕಾಂತ್ ಬರುವೆ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರಿಂದ ಉಪನ್ಯಾಸವನ್ನು ನೀಡಲಾಯಿತು. ಸಭೆಯಲ್ಲಿ 55 ಸಹಕಾರಿಗಳಿಂದ 68 ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರು ಆದ ಶ್ರೀ ಬಸವರಾಜ ಎಸ್. ರವರು ಸಭೆಯನ್ನು ನಡೆಸಿದರು.



**ಉತ್ತರಕನ್ನಡ :** ದಿನಾಂಕ 18 ಜನವರಿ 2021 ರಂದು ಉತ್ತರಕನ್ನಡ ಜಿಲ್ಲೆಯ ಅಂಕೋಲಾ, ಭಟ್ಕಳ, ಹೊನ್ನಾವರ, ಕಾರವಾರ ಹಾಗೂ ಜೋಯಿಡಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೋಟಲ್ ಕಾಮತ್ ಪ್ಲಸ್, ಡಾ॥ ದಿನಕರ ದೇಸಾಯಿ ರೋಡ, ಅಂಕೋಲಾ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿಯವರು ಉದ್ಘಾಟಕರಾಗಿ ಶ್ರೀ ಕೆ ವಿ ನಾಯಕ, ಮಾನ್ಯ ಉಪಾಧ್ಯಕ್ಷರು ಉತ್ತರಕನ್ನಡ ಜಿಲ್ಲಾ ಸಹಕಾರ ಒಕ್ಕೂಟ ಇವರು ಭಾಗವಹಿಸಿದ್ದರು. ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಗ್ರಾಹಕ ಸಂಬಂಧ ನಿರ್ವಹಣೆ ವಿಷಯದ ಕುರಿತು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾಜಿ ಉಪಾಧ್ಯಕ್ಷರು, ಕೆ.ಡಿ.ಸಿ.ಸಿ ಬ್ಯಾಂಕ್, ಶಿರಸಿ ಇವರಿಂದ ಉಪನ್ಯಾಸವನ್ನು ನೀಡಲಾಯಿತು. ಸಭೆಯಲ್ಲಿ 60 ಸಹಕಾರಿಗಳಿಂದ 70 ಪ್ರತಿನಿಧಿಗಳು ಭಾಗವಹಿಸಿದ್ದರು. ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರು ಆದ ಶ್ರೀ ಗಂಗಾರಾಮ ಕೋಳಾಪ್ಟೆಯವರು ಹಾಗೂ ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರು ಆದ ಶ್ರೀ ಬಸವರಾಜ ಹೊಂಗಲ ಸಭೆಯನ್ನು ನಡೆಸಿದರು.

ದಿನಾಂಕ 19 ಜನವರಿ 2021 ರಂದು ಉತ್ತರಕನ್ನಡ ಜಿಲ್ಲೆಯ ಶಿರಸಿ, ಸಿದಾಪೂರ, ಮುಂಡಗೋಡ, ಯಲ್ಲಾಪುರ, ಹಳಿಯಾಳ, ದಾಡೆಲಿ ಹಾಗೂ ಕುಮುಟಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಟಿ.ಎಂ.ಎಸ್. ಸಭಾಭವನ, ಮಾರ್ಕೆಟ್ ಯಾರ್ಡ, ಶಿರಸಿ. ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿಯವರು ಉದ್ಘಾಟಕರಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಭಾಗವಹಿಸಿದ್ದರು. ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಗ್ರಾಹಕ ಸಂಬಂಧ ನಿರ್ವಹಣೆ ವಿಷಯದ ಕುರಿತು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾಜಿ ಉಪಾಧ್ಯಕ್ಷರು, ಕೆ.ಡಿ.ಸಿ.ಸಿ ಬ್ಯಾಂಕ್, ಶಿರಸಿ ಇವರಿಂದ ಉಪನ್ಯಾಸವನ್ನು ನೀಡಲಾಯಿತು. ಸಭೆಯಲ್ಲಿ 48 ಸಹಕಾರಿಗಳಿಂದ 60 ಪ್ರತಿನಿಧಿಗಳು ಭಾಗವಹಿಸಿದ್ದರು. ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರು ಆದ ಶ್ರೀ ಗಂಗಾರಾಮ ಕೋಳಾಪ್ಟೆಯವರು ಸಭೆಯನ್ನು ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರು ಆದ ಶ್ರೀ ಬಸವರಾಜ ಹೊಂಗಲ ಸಭೆಯನ್ನು ನಡೆಸಿದರು.



**ಗದಗ :** ದಿನಾಂಕ 31 ಜನವರಿ 2021 ರಂದು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಐ.ಎಂ.ಎ. ಸಭಾಂಗಣ, ವಕೀಲ ಚಾಳ, ಗದಗ–ಬೆಟಗೇರಿ ನಗರಸಭೆ ಎದುರಿಗೆ, ಗದಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್.ಎನ್. ದೇಶಪಾಂಡೆ ಇವರು ಹಾಗೂ ಉದ್ಘಾಟಕರಾಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆಯವರು ಭಾಗವಹಿಸಿದ್ದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯಾ ಹಿರೇಮಠ ಇವರಿಂದ ಉಪನ್ಯಾಸವನ್ನು ನೀಡಲಾಯಿತು. ಸಭೆಯಲ್ಲಿ 30 ಸಹಕಾರಿಗಳಿಂದ 42 ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರು ಆದ ಶ್ರೀ ಬಸವರಾಜ ಎಸ್. ರವರು ಸಭೆಯನ್ನು ನಡೆಸಿದರು.

## “ದಾವಾ ದಾಖಲಾತಿ ಹಾಗೂ ಸಾಲಾ ವಸೂಲಾತಿ ಪ್ರಕ್ರಿಯೆ” ಕುರಿತು ತರಬೇತಿ ಕಾರ್ಯಕ್ರಮ



**ಶಿವಮೊಗ್ಗ :** ದಿನಾಂಕ 02.01.2021 ರ ಶನಿವಾರ ಬೆಂಗಳೂರು ಪ್ರಾಂತ ಹಾಗೂ ಸಹ್ಯಾದ್ರಿ ಸಹಕಾರಿಗಳ ಒಕ್ಕೂಟ ನಿ., ಶಿವಮೊಗ್ಗ ಇವರ ಸಂಯುಕ್ತಾಶ್ರಯದಲ್ಲಿ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ “ದಾವಾ ದಾಖಲಾತಿ ಹಾಗೂ ಸಾಲಾ ವಸೂಲಾತಿ ಪ್ರಕ್ರಿಯೆ” ಕುರಿತು ತರಬೇತಿ ಕಾರ್ಯಕ್ರಮವನ್ನು ಸರ್ಕಾರಿ ನೌಕರರ ಸಭಾಂಗಣ, ಆರ್‌ಟಿಓ ರಸ್ತೆ, ಶಿವಮೊಗ್ಗ, ಇಲ್ಲಿ ಆಯೋಜಿಸಲಾಗತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿ ರವರು ನೇರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ನಾಗೇಶ್ ಡೊಂಗ್ರೆ, ಸಹಕಾರಿಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ನಿದೇಶಕರು ಹಾಗೂ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರು ಆದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರು ವಹಿಸಿದ್ದರು. ಕಾರ್ಯಕ್ರಮದ ಉಪನ್ಯಾಸಕರಾಗಿ ಶ್ರೀ ಮಂಜುನಾಥ್ ಸಿಂಗ್ ರವರು, ಪೀಠಾಧಿಕಾರಿಗಳು, ದಾವಾ ಪಂಚಾಯತಿ ನ್ಯಾಯಾಲಯ, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು ಇವರು ಭಾಗವಹಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ರವಿಕುಮಾರ್, ಮಾಜಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ ಇವರು ನಡೆಸಿಕೊಟ್ಟರು. ನಿರೂಪಣೆಯನ್ನು ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ 122 ಸೌಹಾರ್ದ ಸಹಕಾರಿಗಳಿಂದ 194 ಪ್ರತಿನಿಧಿಗಳು ಭಾಗವಹಿಸಿದ್ದರು.

## “ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ” ದ ರಚನೆಗಾಗಿ ಆನ್‌ಲೈನ್ ಪೂರ್ವಭಾವಿ ಸಭೆ

**ಚಾಮರಾಜನಗರ :** ದಿನಾಂಕ: 12.01.2021ರಂದು “ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ”ದ ರಚನೆಗಾಗಿ ಆನ್‌ಲೈನ್ ಪೂರ್ವಭಾವಿ ಸಭೆಯಲ್ಲಿ ಚಾಮರಾಜನಗರ ಜಿಲ್ಲೆಗಳ 20 ಸೌಹಾರ್ದ ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ಸಭೆಯಲ್ಲಿ ಶ್ರೀ ಎಸ್. ಕೆ ಮಂಜುನಾಥರವರು, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಚಾಮರಾಜನಗರ ಜಿಲ್ಲೆಗಳಲ್ಲಿ ಇನ್ನೂ ಹೆಚ್ಚಿನ ಸಹಕಾರಿಗಳು ನೊಂದಣಿಯಾಗುವಂತೆ ಕ್ರಮವಿಡಲು ತಿಳಿಸಿ “ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ”ದ ನೋಂದಣಿಯ ಪ್ರಸ್ತುತತೆ ಮತ್ತು ಪ್ರಕ್ರಿಯೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ನಂತರದಲ್ಲಿ ಸಹಕಾರಿಗಳ ಅಧ್ಯಕ್ಷರ ಮತ್ತು ನಿರ್ದೇಶಕರ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

ಸಭೆಯ ಪ್ರಾರಂಭದಲ್ಲಿ ಶ್ರೀ ಶಿವಕುಮಾರ್ ಬಿರಾದರ್, ಪ್ರಾಂತೀಯ ವ್ಯವಸ್ಥಾಪಕರು ಸ್ವಾಗತ & ಪರಿಚಯವನ್ನು ಮಾಡಿದರು. ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಸಭೆಯ ನಿರೂಪಣೆ ಮಾಡಿ ವಂದನಾರ್ಪಣೆ ನಡೆಸಿಕೊಟ್ಟರು. ಶ್ರೀಮತಿ ರೇಣುಕಾ ರವರು ತಾಂತ್ರಿಕ ವ್ಯವಸ್ಥೆಯನ್ನು ಮಾಡಿದರು.

## ಸಂವಾದ ಕಾರ್ಯಕ್ರಮ

**ಶಿವಮೊಗ್ಗ :** ದಿನಾಂಕ 21.01.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲೆಯ ನಿರ್ದೇಶಕರಾದ ಮಾನ್ಯ ಶ್ರೀ ಪ್ರಸನ್ನ ಕುಮಾರ್ ರವರ ಉಪಸ್ಥಿತಿಯಲ್ಲಿ ಶಿಕಾರಿಪುರ ತಾಲೂಕು ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಭ್ರಾಂತೇಶ್ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು. ಶಿವಮೊಗ್ಗ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಭಾಗವಹಿಸಿದ್ದರು.

# ಕ್ಲಸ್ಟರ್ ತರಬೇತಿ ಕಾರ್ಯಕ್ರಮಗಳು

| ಕ್ರ.ಸಂ | ಜಿಲ್ಲೆ | ದಿನಾಂಕ | ತರಬೇತಿಯ ಹೆಸರು | ಫಲಾನುಭವಿಗಳು | ಸಂಪನ್ಮೂಲ ವ್ಯಕ್ತಿಗಳು |
|---|---|---|---|---|---|
| 1 | ಬೆಳಗಾವಿ | 04 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಕುರಿತು ಮಾಹಿತಿ | ಂಬಂವಂಕನವಂರಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಶ್ರೀ ವೃಷಭನಾಥ ಪರಪ್ಪನವರ |
| 2 | ವಿಜಯಪುರ | 05 ಜನವರಿ 2021 | ಆರ್ಥಿಕ ಸಬಲತೆಯ ಮಾನದಂಡಗಳು, ಕಲಂ 34, ಜಿ.ಎಸ್.ಟಿ. ಕುರಿತು ಮಾಹಿತಿ | ಬಸವನ ಬಾಗೇವಾಡಿ ತಾಲ್ಲೂಕಿನ ಆಯ್ದ ಸಹಕಾರಿಗಳು | ಶ್ರೀ ಶಿವಕಾಂತ ಎನ್ |
| 3 | ವಿಜಯಪುರ | 06 ಜನವರಿ 2021 | ಆರ್ಥಿಕ ಸಬಲತೆಯ ಮಾನದಂಡಗಳು, ಕಲಂ 34, ಜಿ.ಎಸ್.ಟಿ. ಕುರಿತು ಮಾಹಿತಿ | ಚಡಚಣ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಶ್ರೀ ಶಿವಕಾಂತ ಎನ್ |
| 4 | ಬೆಳಗಾವಿ | 07 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಕುರಿತು ಮಾಹಿತಿ | ಗೋಕಾಕ ನಗರ, ಗೊಡಚಿನಮಲ್ಕಿ ಮತ್ತು ಮೇಲ್ಮನಹಟ್ಟಿ | ಶ್ರೀ ಸುಜಯ ಬೆಳವಿ |
| 5 | ವಿಜಯಪುರ | 08 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡೆ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಮತ್ತು ದಾವಾ ದಾಖಲಾತಿ ಕುರಿತು ಮಾಹಿತಿ | ಕೋಲ್ಹಾರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಶ್ರೀ ಶಿವಕಾಂತ ಎನ್ |
| 6 | ವಿಜಯಪುರ | 12 ಜನವರಿ 2021 | ಆರ್ಥಿಕ ಸಬಲತೆಯ ಮಾನದಂಡಗಳು, ಕಲಂ 34, ಜಿ.ಎಸ್.ಟಿ. ಕುರಿತು ಮಾಹಿತಿ | ಇಂಡಿ ತಾಲ್ಲೂಕಿನ ಆಯ್ದ ಸೌಹಾರ್ದ ಸಹಕಾರಿಗಳು | ಶ್ರೀ ಶಿವಕಾಂತ ಎನ್ |
| 7 | ಬೆಳಗಾವಿ | 12 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಕುರಿತು ಮಾಹಿತಿ | ಹುಕ್ಕೇರಿ ಪಟ್ಟಣ ಹಾಗೂ ಸುತ್ತಮುತ್ತಲಿನ ಸೌಹಾರ್ದ ಸಹಕಾರಿಗಳು | ಶ್ರೀ ವೃಷಭನಾಥ ಪರಪ್ಪನವರ |
| 8 | ಬೆಳಗಾವಿ | 13 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಕುರಿತು ಮಾಹಿತಿ | ಮೂಡಲಗಿ ತಾಲ್ಲೂಕಿನ ಮತ್ತು ಸುತ್ತಮುತ್ತಲಿನ ಸೌಹಾರ್ದ ಸಹಕಾರಿಗಳು | ಶ್ರೀ ಸುಜಯ ಬೆಳವಿ |
| 9 | ಬಾಗಲಕೋಟ | 15 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಕುರಿತು ಮಾಹಿತಿ | ಬೀಳಗಿ ನಗರದ ಸೌಹಾರ್ದ ಸಹಕಾರಿಗಳು | ಶ್ರೀ ನಾಗರಾಜ ಜಿ.ಹೆಚ್ |
| 10 | ಬೆಳಗಾವಿ | 19 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ, ಜಿ.ಎಸ್.ಟಿ. ಕುರಿತು ಮಾಹಿತಿ | ಮೂಡಲಗಿ ತಾಲ್ಲೂಕಿನ ಕುಲಗೋಡ, ಹುನಶ್ಯಾಳ ಗ್ರಾಮದ ಸೌಹಾರ್ದ ಸಹಕಾರಿಗಳು | ಶ್ರೀ ಸುಜಯ ಬೆಳವಿ |
| 11 | ಬೆಳಗಾವಿ | 19 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ ಶಿಕ್ಷಣ ನಿಧಿ, ಜಿ.ಎಸ್.ಟಿ. ಆರ್ಥಿಕ ಸಬಲತೆಯ ಮಾನದಂಡಗಳು ಕುರಿತು ಮಾಹಿತಿ | ನಿಪ್ಪಾಣಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದ ಸೌಹಾರ್ದ ಸಹಕಾರಿಗಳು | ಶ್ರೀ ಜವಾಹರ ಮುಗ್ಗನವರ |

| | | | | | |
|---|---|---|---|---|---|
| 12 | ಬೆಳಗಾವಿ | 19 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ, ಜಿ.ಎಸ್.ಟಿ. ಆರ್ಥಿಕ ಸಬಲತೆಯ ಮಾನದಂಡಗಳು ಕುರಿತು ಮಾಹಿತಿ | ನಿಪ್ಪಾಣಿ ತಾಲ್ಲೂಕಿನ ಐನಾಪೂರ ಗ್ರಾಮದ ಸೌಹಾರ್ದ ಸಹಕಾರಿಗಳು | ಶ್ರೀ ಜವಾಹರ ಮುಗ್ಗನವರ |
| 13 | ಬಾಗಲಕೋಟ | 27 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ, ಜಿ.ಎಸ್.ಟಿ. ಆರ್ಥಿಕ ಸಬಲತೆಯ ಮಾನದಂಡಗಳು ಕುರಿತು ಮಾಹಿತಿ | ಬಾಗಲಕೋಟ ತಾಲ್ಲೂಕಿನ ಗದ್ದನಕೇರಿ ಗ್ರಾಮದ ಸೌಹಾರ್ದ ಸಹಕಾರಿಗಳು | ಶ್ರೀ ನಾಗರಾಜ ಜಿ.ಹೆಚ್ |
| 14 | ಬಾಗಲಕೋಟ | 28 ಜನವರಿ 2021 | ಕಾಯ್ದೆ ಕಲಂ 34, ಉಪವಿಧಿ ತಿದ್ದುಪಡಿ, ಚುನಾವಣಾ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ, ಜಿ.ಎಸ್.ಟಿ. ಆರ್ಥಿಕ ಸಬಲತೆಯ ಮಾನದಂಡಗಳು ಕುರಿತು ಮಾಹಿತಿ | ಮುಧೋಳ ನಗರದ ಸೌಹಾರ್ದ ಸಹಕಾರಿಗಳು | ಶ್ರೀ ನಾಗರಾಜ ಜಿ.ಹೆಚ್ |

## ಭೇಟಿ

**ಕೊಪ್ಪಳ :** ದಿನಾಂಕ 23.01.2021 ರಂದು ದಿ ಗಂಗಾವತಿ ಸಮೃದ್ಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ ಈ ಸಹಕಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಆರ್ ತಿಮ್ಮಯ್ಯ ಶೆಟ್ಟಿಯವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅದರ ಅಭಿವೃದ್ಧಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಘವೇಂದ್ರ ಮಂಗಳೂರು ಆಡಳಿತ ಮಂಡಲಿ ನಿರ್ದೇಶಕರು, ಜಿಲ್ಲಾ ಸಂಯೋಜಕರಾದ ಶ್ರೀ ಪವನ ಎಮ್.ಆರ್, ಸಿ.ಬಿ.ಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜಿ ಜವಳಿ, ದಿ ಗಂಗಾವತಿ ಸಮೃದ್ಧಿ ಸೌಹಾರ್ದ ಸಹಕಾರಿಯ ಸಿಬ್ಬಂದಿ ವರ್ಗದವರು, ಮುಖ್ಯಕಾರ್ಯನಿರ್ವಹಕರಾದ ಶ್ರೀ ಮೈಲಾರ ರಾವ್‌ರವರು ಉಪಸ್ಥಿತರಿದ್ದರು. ಸಹಕಾರಿಯ ವತಿಯಿಂದ ಮಾನ್ಯ ನಿರ್ದೇಶಕರುಗಳಿಗೆ ಸನ್ಮಾನಿಸಲಾಯಿತು.

**ಕೊಪ್ಪಳ :** ದಿನಾಂಕ 23.01.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಹಾಗೂ ಕೊಪ್ಪಳ ಜಿಲ್ಲಾ ಸಂಪರ್ಕ ಕಛೇರಿ ಗಂಗಾವತಿಗೆ ಭೇಟಿ ನೀಡಿ ಒಕ್ಕೂಟದ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಸೂಕ್ತ ಸಲಹೆ, ಸೂಚನೆ ಹಾಗು ಮಾರ್ಗದರ್ಶನವನ್ನು ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಒಕ್ಕೂಟದ ನಿರ್ದೇಶಕರುಗಳಾದ ಶ್ರೀ ಪ್ರಾಣೇಶರಾವ್ ದೇಸಾಯಿ ಮತ್ತು ಶ್ರೀ ಕುಮಾರೆಪ್ಪ ಸಿಂಗನಾಳ ಮುಖ್ಯಕಾರ್ಯನಿರ್ವಾಕರಾದ ಶ್ರೀ ಶಾಂತಮೂರ್ತಿರವರು, ಕಲಬುರಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಮತ್ತು ಕೊಪ್ಪಳ ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

## ಉದ್ಘಾಟನೆ

**ಬೆಂಗಳೂರು :** ದಿನಾಂಕ 22.01.2021 ರಂದು ಅಮೃತ್ ಸೌಹಾರ್ದ ಸಹಕಾರಿ ನಿ., ಇದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ನಿರ್ದೇಶಕರಾದ ಮಾನ್ಯ ಶ್ರೀ ಬಿ.ಎಸ್. ಗುಂಡೂರಾವ್ ರವರು ಭಾಗವಹಿಸಿ ಸೂಕ್ತ ಮಾರ್ಗದರ್ಶನ ನೀಡಿದರು. ಬೆಂಗಳೂರು ನಗರ ಹಾಗೂ ರಾಮನಗರ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಂ ರವರು ಉಪಸ್ಥಿತರಿದ್ದರು.

## ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ

**ಚಿಕ್ಕಮಂಗಳೂರು :** ದಿನಾಂಕ 17-11-2020ರಂದು ಕೊಪ್ಪದಲ್ಲಿ ನಡೆದ 67ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಧಾತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ ಚಿಕ್ಕಮಗಳೂರು ಜಿಲ್ಲೆಯ ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) 3ನೇ ತಂಡದ ಸಂಪರ್ಕ ವರ್ಗದ ಕೇಂದ್ರಗಳು ಹಾಗೂ ಹೆಚ್ಚಿನ ವಿವರಗಳು

ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) ಡಿ.ಸಿ.ಬಿ.ಎಮ್ ಕೋರ್ಸ 3ನೇ ತಂಡದಲ್ಲಿ 375 ಅಭ್ಯರ್ಥಿಗಳು ನೋಂದಣೆಯಾಗಿದೆ. ಈ ಬಾರಿ 8 ಕೇಂದ್ರಗಳನ್ನಾಗಿ ವಿಂಗಡಿಸಿದೆ. ಈ ಕೇಂದ್ರಗಳಲ್ಲಿ ಸಂಪರ್ಕವರ್ಗಗಳನ್ನು (ಕಂಟ್ಯಾಕ್ಟ ಕ್ಲಾಸಗಳು) ನಡೆಸಲಾಗುವುದು.

| ಕ್ರ.ಸಂ. | ಕೇಂದ್ರದ ಹೆಸರು | | ಅಭ್ಯರ್ಥಿಗಳು |
|---|---|---|---|
| 1 | 1ನೇ ತಂಡದ ಕೇಂದ್ರಗಳು | ಬೆಂಗಳೂರು ಕೇಂದ್ರ | 60 |
| 2 | | ಬೆಳಗಾವಿ ಕೇಂದ್ರ | 56 |
| 3 | | ಅಂಕೋಲಾ ಕೇಂದ್ರ | 41 |
| 4 | | ಮುಧೋಳ ಕೇಂದ್ರ | 49 |
| 5 | 2ನೇ ತಂಡದ ಕೇಂದ್ರಗಳು | ಶಿವಮೊಗ್ಗ ಕೇಂದ್ರ | 43 |
| 6 | | ಉಡುಪಿ ಕೇಂದ್ರ | 51 |
| 7 | | ಎಕ್ಸಂಬ ಕೇಂದ್ರ | 35 |
| 8 | | ಗಂಗಾವತಿ ಕೇಂದ್ರ | 40 |

1. **ಮೊದಲನೇಯ ಸಂಪರ್ಕ ವರ್ಗ** : 1ನೇ ತಂಡ – ಫೆಬ್ರವರಿ ಮೂರನೇ ಶನಿವಾರ ಹಾಗೂ ಭಾನುವಾರ.
   2ನೇ ತಂಡ – ಫೆಬ್ರವರಿ ನಾಲ್ಕನೇ ಶನಿವಾರ ಹಾಗೂ ಭಾನುವಾರ.
2. **ಎರಡನೇಯ ಸಂಪರ್ಕ ವರ್ಗ** : 1ನೇ ತಂಡ – ಏಪ್ರಿಲ್ ಎರಡನೇ ಶನಿವಾರ ಹಾಗೂ ಭಾನುವಾರ.
   2ನೇ ತಂಡ – ಏಪ್ರಿಲ್ ನಾಲ್ಕನೇ ಶನಿವಾರ ಹಾಗೂ ಭಾನುವಾರ.
3. **ಮೂರನೇಯ ಸಂಪರ್ಕ ವರ್ಗ** : 1ನೇ ತಂಡ – ಜೂನ್ ಎರಡನೇ ಶನಿವಾರ ಹಾಗೂ ಭಾನುವಾರ.
   2ನೇ ತಂಡ – ಜೂನ್ ಮೂರನೇ ಶನಿವಾರ ಹಾಗೂ ಭಾನುವಾರ
4. **ಅಂತಿಮ ಪರೀಕ್ಷೆಗಳು** – ಎಲ್ಲಾ 8 ಕೇಂದ್ರಗಳಲ್ಲಿ ಏಕ ಕಾಲಕ್ಕೆ ದಿನಾಂಕ 25,26,27, ಜೂನ್ 2021 ಕ್ಕೆ (3 ದಿನಗಳು) ನಡೆಸಲಾಗುವುದು.
5. ಅಧ್ಯಯನ ಸಾಹಿತ್ಯವನ್ನು ಮೊದಲನೇಯ ಸಂಪರ್ಕ ವರ್ಗದ ಪ್ರಾರಂಭದಲ್ಲಿ ವಿತರಿಸಲಾಗುವುದು
6. ಸಂಪರ್ಕ ಸಭೆಗಳಿಗೆ ಅಭ್ಯರ್ಥಿಗಳಿಗೆ ಹಾಜರಾತಿ ಕಡ್ಡಾಯ. ಪ್ರತಿ ಹಾಜರಾತಿಗೆ 20 ಅಂಕಗಳನ್ನು ನೀಡಲಾಗುವುದು. 3 ಸಂಪರ್ಕ ಸಭೆಗಳಿಗೆ ಹಾಜರಾತಿಯಿಂದ 60 ಅಂಕಗಳು
7. ಅಧ್ಯಯನ ವರದಿ ಸಿದ್ಧಪಡಿಸಿ ಸಲ್ಲಿಸುವುದಕ್ಕೆ 40 ಅಂಕಗಳು. (ಅಧ್ಯಯನ ವರದಿಗಾಗಿ ನಿಮ್ಮ ಹತ್ತಿರದ ಯಾವುದಾದರೊಂದು ಸಹಕಾರಿ ಅಥವಾ ಸಹಕಾರ ಸಂಸ್ಥೆ ಆಯ್ಕೆ ಮಾಡಿ ಅಧ್ಯಯನ ಮಾಡಿ ವರದಿ ಸಲ್ಲಿಸುವುದು. ಅಧ್ಯಯನ ವರದಿ ಮಾದರಿಯನ್ನು 1ನೇ ಸಂಪರ್ಕ ವರ್ಗದಲ್ಲಿ ಕೊಡಲಾಗುವುದು. 2ನೇ ಸಂಪರ್ಕವರ್ಗದ ಒಳಗಾಗಿ ಅಧ್ಯಯನ ವರದಿಯನ್ನು ಸಲ್ಲಿಸುವುದು.
8. ಒಟ್ಟಾರೆ 6 ವಿಷಯಗಳು. ಪ್ರತಿ ವಿಷಯಗಳಿಗೆ ಉತ್ತೀರ್ಣರಾಗಲು ಕನಿಷ್ಠ 40 ಅಂಕಗಳನ್ನು ಪಡೆಯಬೇಕು.

**ಮಾಹಿತಿಗಾಗಿ ಸಂಪರ್ಕ ವ್ಯಕ್ತಿಗಳು :**

**ಶ್ರೀ ವಿ.ಜೆ. ಕಾರಕೂನ, ತರಬೇತಿ ವ್ಯವಸ್ಥಾಪಕರು : 8884466710**

**ಶ್ರೀ ಕವಿತಾ ಆರ್, ಕಿರಿಯ ವ್ಯವಸ್ಥಾಪಕಿ : 8884466722**

**ಶ್ರೀ ಮಲ್ಲಿನಾಥ, ಕಿರಿಯ ಸಹಾಯಕ : 8884466734**

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

## ಪ್ರಸ್ತಾವನೆ

ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಚರ್ಚೆಗಳು ನಡೆದಿರುತ್ತವೆ. ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚಿಸುವ ದೃಷ್ಟಿಯಿಂದ ಸಹಕಾರ ಇಲಾಖೆಯೊಂದಿಗಿನ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದೊಂದಿಗಿನ ಸಭೆಗಳಲ್ಲಿ ಕೂಡ ಸಲಹೆ/ಅಭಿಪ್ರಾಯಗಳನ್ನು ಪಡೆಯಲಾಗಿದೆ. ಸಹಕಾರ ತಜ್ಞರ, ಸನ್ನದು ಲೆಕ್ಕಪರಿಶೋಧಕರ, ಬ್ಯಾಂಕಿಂಗ್ ತಜ್ಞರ, ನ್ಯಾಯವಾದಿಗಳ, ಪ್ರಮುಖ ಸಹಕಾರಿ ಸಂಸ್ಥೆಗಳ ಅಭಿಪ್ರಾಯಗಳನ್ನು ಪಡೆದು ಸೌಹಾರ್ದ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರಚಿಸಲಾಗಿದೆ. ಸಂಯುಕ್ತ ಸಹಕಾರಿಯು ಈ ಹಿಂದೆ ನೀಡಿದ್ದ – ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ, ಲಾಭಾಂಶ ವಿಲೇವಾರಿ ಮಾರ್ಗಸೂಚಿ, ನಿಧಿಗಳ ಹೂಡಿಕೆ ಕುರಿತ ಮಾರ್ಗಸೂಚಿ, ಪತ್ತಿನ ಸಹಕಾರಿಗಳ ಆರ್ಥಿಕ ಸಬಲತೆ ಮಾನದಂಡಗಳು – ಈ ಸುತ್ತೋಲೆಗಳಲ್ಲಿನ ಅಂಶಗಳನ್ನು ಅಗತ್ಯ ಬದಲಾವಣೆಗಳೊಂದಿಗೆ ಏಕೀಕೃತಗೊಳಿಸಿ ಈ ಸುತ್ತೋಲೆಯಲ್ಲಿ ಸೇರ್ಪಡೆ ಮಾಡಲಾಗಿದೆ.

ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯ ಕರಡು ಸಿದ್ಧಪಡಿಸಿ ಸಲಹೆ/ಅಭಿಪ್ರಾಯ/ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಿ ಆಗಸ್ಟ್ ಮಾಹೆಯ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಸ್ವೀಕೃತವಾದ ಸಲಹೆ/ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಗಣಿಸಿ ಸಿದ್ಧಪಡಿಸಲಾದ ಅಂತಿಮ ಕರಡನ್ನು ದಿನಾಂಕ: 18 ನವೆಂಬರ್ 2020 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ವಿಷಯ 05ರಲ್ಲಿ ಅನುಮೋದಿಸಿ ನಿರ್ಣಯಿಸಲಾಗಿದೆ. ಹಾಗೂ ದಿನಾಂಕ: 19 ಡಿಸೆಂಬರ್ 2020ರಂದು ನಡೆದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯನ್ನು ಸಾಮಾನ್ಯ ಸಭೆಯು ವಿಷಯ 19ರಲ್ಲಿ ಅನುಮೋದಿಸಿದ್ದು 01 ಜನವರಿ 2021ರಿಂದ ಅನ್ವಯವಾಗುವಂತೆ ನಿರ್ಣಯಿಸಲಾಗಿದೆ.

## ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ

### ಕಾಯ್ದೆ ಕಲಂ.53(7)(ಹೆಚ್) ರಡಿಯ ಪ್ರಾವಧಾನದಂತೆ

**ಸಂಖ್ಯೆ : ಸಂಸ/ಆಸು–01/2020–21** **ದಿನಾಂಕ : 01.01.2021**

**ಎ. ನಿಧಿಗಳ ಸಂಗ್ರಹ ಮಿತಿ :**

1. ಸಹಕಾರಿಯು ಸ್ವೀಕರಿಸಬಹುದಾದ ಠೇವಣಿ ಮತ್ತು ಸಾಲದ ಮೊತ್ತವು ಸಹಕಾರಿಯ ಪಾವತಿಯಾದ ಶೇರು ಬಂಡವಾಳ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಗಳ ಒಟ್ಟು ಮೊತ್ತದ ಐವತ್ತು ಪಟ್ಟು ಮೊತ್ತದಿಂದ ಕ್ರೋಢೀಕೃತ ನಷ್ಟವನ್ನು ಕಳೆದಾಗ ಬರುವ ಮೊತ್ತವನ್ನು ದಾಟುವಂತಿಲ್ಲ. (ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ 3(4)(ಸಿ).

**ಬಿ. ದ್ರವ್ಯಾಸ್ತಿ ನಿರ್ವಹಣೆ :**

1. ಸಹಕಾರಿಯ ಸಂಗ್ರಾಹಿತ ಠೇವಣಿಯ ಕನಿಷ್ಠ ಶೇಕಡಾ 20 ಅನ್ನು ದ್ರವ್ಯಾಸ್ತಿಯಾಗಿ ನಿರ್ವಹಿಸತಕ್ಕದ್ದು. ಇದರಲ್ಲಿ, ಶಾಸನಬದ್ಧ ಮೀಸಲು ನಿಧಿ ಶೇ.25ನ್ನು ಹೊರತುಪಡಿಸಿ ಹೂಡಿಕೆ ಮಾಡಲಾದ ಉಳಿದೆಲ್ಲ ನಿಧಿಗಳನ್ನು ದ್ರವ್ಯಾಸ್ತಿಯಾಗಿ ಪರಿಗಣಿಸಬಹುದು.

   ಪರಂತು, ಸಹಕಾರಿಯ ನೋಂದಣಿಯಾಗಿ ಮೊದಲ ಐದು ವರ್ಷಗಳವರೆಗೆ ಅಥವಾ ಸಹಕಾರಿಯು ಸಂಗ್ರಹಿಸಿದ ಒಟ್ಟೂ ಠೇವಣಿ ಒಂದು ಕೋಟಿ ರೂಪಾಯಿ ಆಗುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ದ್ರವ್ಯಾಸ್ತಿ ಶೇ.20ರ ಬದಲು ಕನಿಷ್ಠ ಶೆ.10 ರಷ್ಟು ನಿರ್ವಹಿಸತಕ್ಕದ್ದು.
2. ದ್ರವ್ಯಾಸ್ತಿ ಉದ್ದೇಶಕ್ಕೆ ಹಿಂದಿನ ತ್ರೈಮಾಸಿಕದ ಅಂತ್ಯಕ್ಕೆ ಇರುವ ಒಟ್ಟೂ ಠೇವಣಿಯ ಮೊತ್ತವನ್ನು ಪರಿಗಣಿಸಿ ಅಗತ್ಯ ದ್ರವ್ಯಾಸ್ತಿಯನ್ನು ಲೆಕ್ಕಾಚಾರ ಮಾಡಿ ನಿರಂತರ ನಿರ್ವಹಿಸತಕ್ಕದ್ದು.
3. ನಗದನ್ನು ಹೊರತುಪಡಿಸಿ ಉಳಿದ ದ್ರವ್ಯಾಸ್ತಿ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ಅಥವಾ ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18ರ ಪ್ರಾವಧಾನದಡಿ ಪ್ರತ್ಯೇಕವಾಗಿ ತಕ್ಷಣಕ್ಕೆ ನಗದು ಲಭ್ಯತೆಯಾಗುವ ಹೂಡಿಕೆಗಳನ್ನು ಮಾಡತಕ್ಕದ್ದು.

4. ದ್ರವ್ಯಾಸ್ತಿ ಹೂಡಿಕೆಯ ಆಧಾರದಲ್ಲಿ ಯಾವುದೇ ಸಾಲ ಪಡೆಯುವಂತಿಲ್ಲ. ಪರಂತು, ಠೇವಣಿ ಹಿಂಪಾವತಿಗೆ ಅಗತ್ಯ ನಗದು ಲಭ್ಯವಿಲ್ಲದಿದ್ದಲ್ಲಿ ಆರು ತಿಂಗಳ ಅವಧಿ ಮೀರದಂತೆ ದ್ರವ್ಯಾಸ್ತಿ ಹೂಡಿಕೆಯ ಗರಿಷ್ಠ ಶೇ.80ರವರೆಗೆ ಓವರ್ ಡ್ರಾಫ್ಟ್ ಸಾಲವನ್ನು ಪಡೆಯಬಹುದು, ಆದರೆ ಇದನ್ನು ಠೇವಣಿ ಹಿಂಪಾವತಿ ಹೊರತುಪಡಿಸಿ ಉಳಿದ ಕಾರಣಗಳಿಗೆ ಬಳಸತಕ್ಕದ್ದಲ್ಲ. ಆದಾಗ್ಯೂ ಓವರ್ ಡ್ರಾಫ್ಟ್ ಸಾಲವನ್ನು ಆದ್ಯತೆಯ ಮೇರೆಗೆ ಮರುಪಾವತಿ ಮಾಡತಕ್ಕದ್ದು.

5. ಸಹಕಾರಿಯ ಆಡಳಿತ ಮಂಡಲಿಯು ತಮ್ಮ ವ್ಯವಹಾರದ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು, ಶಾಖಾವಾರು ನಗದು ಮಿತಿಯನ್ನು ನಿಗದಿಗೊಳಿಸತಕ್ಕದ್ದು. ಪರಂತು, ಸಹಕಾರಿಯ ಕ್ರೋಢೀಕೃತ ನಗದು ಮಿತಿಯು ದುಡಿಯುವ ಬಂಡವಾಳದ ಶೇಕಡಾ 3ನ್ನು ಮೀರತಕ್ಕದ್ದಲ್ಲ.

6. ಸಹಕಾರಿಯು ಸ್ವೀಕರಿಸಿದ ಠೇವಣಿಯನ್ನು ಸಾಲ ನೀಡಿಕೆ ಅಥವಾ ಕಲಂ.18ರಡಿ ಹೂಡಿಕೆ ಅಥವಾ ದ್ರವ್ಯಾಸ್ತಿಯಾಗಿ ಮಾತ್ರ ಉಪಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಠೇವಣಿಯ ಶೇ.10ಕ್ಕಿಂತ ಹೆಚ್ಚಿನ ಮೊತ್ತವನ್ನು ಸಹಕಾರಿಯ ಆಸ್ತಿಗಳಲ್ಲಿ ಹೂಡಿಕೆ ಮಾಡುವಂತಿಲ್ಲ ಹಾಗೂ ಪತ್ತೇತರ ಚಟುವಟಿಕೆಗಳಿಗೆ ಬಳಸುವಂತಿಲ್ಲ.

**ಸಿ. ಬಡ್ಡಿದರ, ಠೇವಣಿ ಸ್ವೀಕೃತಿ ಕುರಿತಂತೆ ಮಾರ್ಗದರ್ಶಿಗಳು**

1. ಯಾವುದೇ ಸಹಕಾರಿಯು ನಾಮಮಾತ್ರ ಸದಸ್ಯರಿಂದ ಹಾಗೂ ಸದಸ್ಯೇತರರಿಂದ ಠೇವಣಿಯನ್ನು ಸಂಗ್ರಹಿಸಲು ಅವಕಾಶವಿಲ್ಲ. ಹಾಗು ಠೇವಣಿ ಸಂಗ್ರಹದ ಉದ್ದೇಶಕ್ಕಾಗಿ ಸದಸ್ಯರಲ್ಲಿ ಆಂತರಿಕ ಪ್ರಸಾರ ಹೊರತುಪಡಿಸಿ ಯಾವುದೇ ಸ್ವರೂಪದ ಜಾಹೀರಾತುಗಳನ್ನು ನೀಡತಕ್ಕದ್ದಲ್ಲ.

2. ಯಾವುದೇ ಓರ್ವ ಸದಸ್ಯ, ಓರ್ವ ಸದಸ್ಯನ ಕುಟುಂಬ, ಸದಸ್ಯನ ಹಾಗೂ ಸದಸ್ಯನ ಕುಟುಂಬದ ಮಾಲಿಕತ್ವದಲ್ಲಿರುವ ಸಂಸ್ಥೆಗಳು ಸೇರಿದಂತೆ ಸ್ವೀಕರಿಸಬಹುದಾದ ಒಟ್ಟೂ ಠೇವಣಿಯು, ಸಹಕಾರಿಯ ದುಡಿಯುವ ಬಂಡವಾಳದ ಶೇ.10ನ್ನು ಮೀರುವಂತಿಲ್ಲ.

ಪರಂತು, ಸಹಕಾರಿಯ ನೋಂದಣಿಯಾಗಿ ಮೊದಲ ಐದು ವರ್ಷಗಳವರೆಗೆ ಅಥವಾ ಸಹಕಾರಿಯ ದುಡಿಯುವ ಬಂಡವಾಳ ಒಂದು ಕೋಟಿ ರೂಪಾಯಿ ಆಗುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈ ಅಂಶ ಅನ್ವಯವಾಗತಕ್ಕದ್ದಲ್ಲ.

– ಸದಸ್ಯನಿಗೆ ಸಂಬಂಧಿಸಿದಂತೆ "ಕುಟುಂಬ" ಎಂದರೆ ಸದಸ್ಯನ/ಳ ಗಂಡ/ಹೆಂಡತಿ, ಮತ್ತು ಅವನ/ಳ ಅವಲಂಬಿತ ಮಕ್ಕಳು, ಅವಲಂಬಿತ ತಂದೆ ಮತ್ತು ತಾಯಿ, ಅವಲಂಬಿತ ಸಹೋದರ/ಸಹೋದರಿಯರನ್ನು ಒಳಗೊಳ್ಳುತ್ತದೆ.

3. ಪಿಗ್ಮಿ ಠೇವಣಿ ಹೊರತುಪಡಿಸಿ, ಯಾವುದೇ ಅವಧಿ ಠೇವಣಿಗಳ ಸಂಗ್ರಹಕ್ಕಾಗಿ ಏಜೆಂಟರುಗಳನ್ನು ನೇಮಕ ಮಾಡತಕ್ಕದ್ದಲ್ಲ ಹಾಗೂ ಠೇವಣಿ ಸಂಗ್ರಹಿಸಲು ಕಮೀಷನ್/ಇನ್ಸೆಂಟೀವ್/ಗಿಫ್ಟ್/ಇನ್ಯಾವುದೇ ಸ್ವರೂಪದ ಆಮೀಷ ಒಡ್ಡತಕ್ಕದ್ದಲ್ಲ ಹಾಗೂ ವೆಚ್ಚ ಮಾಡತಕ್ಕದ್ದಲ್ಲ. ಪಿಗ್ಮಿ ಸಂಗ್ರಾಹಕರಿಗೆ ನೀಡುವ ಕಮಿಷನ ದರವು ಶೇ.3ನ್ನು ಮೀರತಕ್ಕದ್ದಲ್ಲ.

4. ಯಾವುದೇ ಸಹಕಾರಿಯು 10 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಯನ್ನು ಸ್ವೀಕರಿಸತಕ್ಕದ್ದಲ್ಲ.

5. ಯಾವುದೇ ಠೇವಣಿದಾರನು ಅವಧಿಗೆ ಮುಂಚಿತವಾಗಿ ಯಾವುದೇ ಅವಧಿ ಠೇವಣಿ ಮರುಪಾವತಿ ಕೋರಿದಲ್ಲಿ, ಸದರಿ ಠೇವಣಿಯ ಮರುಪಾವತಿ ಪೂರ್ವದ ಒಟ್ಟು ಅವಧಿಗೆ ಅನ್ವಯವಾಗುವ ಬಡ್ಡಿದರದಲ್ಲಿ ಗರಿಷ್ಠ ಶೇ.2ನ್ನು ಕಡಿತಗೊಳಿಸಬಹುದು. ಯಾವುದೇ ಕಾರಣಕ್ಕೂ ಠೇವಣಿಯ ಅಸಲನ್ನು ಕಡಿತಗೊಳಿಸತಕ್ಕದ್ದಲ್ಲ. ಪರಂತು, ಮೇಲಿನ ಲೆಕ್ಕಾಚಾರದನುಸಾರ ಪಾವತಿ ಮಾಡಬೇಕಾದ ಬಡ್ಡಿಗಿಂತ ಹೆಚ್ಚುವರಿ ಮೊತ್ತವನ್ನು ಈಗಾಗಲೇ ಪಾವತಿಸಿದ್ದಲ್ಲಿ ಅದನ್ನು ಹಿಂಪಡೆಯಬಹುದು. ಆದರೆ ಈ ನಿಯಮ ಪಿಗ್ಮಿ ಠೇವಣಿಗೆ ಅನ್ವಯವಾಗತಕ್ಕದ್ದಲ್ಲ.

**ಡಿ. ನಿವ್ವಳ ಲಾಭ ಗುರುತಿಸುವಿಕೆ.**

**1. ಸಹಕಾರಿಯ ನಿವ್ವಳ ಲಾಭವನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡತಕ್ಕದ್ದು –**

1) ಠೇವಣಿಗೆ ಪಾವತಿಸಬೇಕಾದ ಬಡ್ಡಿಗೆ ಪೂರ್ಣ ಪ್ರಮಾಣದಲ್ಲಿ ಪ್ರಾವಧಾನ ಮಾಡಿರತಕ್ಕದ್ದು.

2) ಎಲ್ಲಾ ರೀತಿಯ ಸ್ಥಿರಾಸ್ತಿಗಳಿಗೆ ಆದಾಯ ತೆರಿಗೆ ಕಾಯ್ದೆಯನ್ವಯ ಸವಕಳಿಯನ್ನು ಲೆಕ್ಕಾಚಾರ ಮಾಡಿ ವೆಚ್ಚದ ಬಾಬ್ತಿಗೆ ಸೇರಿಸತಕ್ಕದ್ದು.

3) ಆರ್ಥಿಕ ವರ್ಷದಲ್ಲಿ ವೆಚ್ಚವಾಗಿರುವ ಆದರೆ ಪಾವತಿ ಮಾಡಿರದ ಪ್ರಕರಣಗಳಿಗೆ ಹಾಗೂ ಸದರಿ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವೆಚ್ಚಕ್ಕೆ ಅಗತ್ಯ ಪ್ರಾವಧಾನ ಮಾಡತಕ್ಕದ್ದು.

4) ಬಾಡಿಗೆ, ವೇತನ, ವಿಮೆ ಸೇರಿದಂತೆ ಪಾವತಿಯಾಗಿರದ ಎಲ್ಲ ಆಡಳಿತಾತ್ಮಕ ವೆಚ್ಚಗಳಿಗೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.

5) ಯಾವುದೇ ಶಾಸನಾತ್ಮಕ ಪಾವತಿಗಳಿಗೆ ಸಂಬಂಧಿಸಿದಂತೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.

6) ನೀಡಿರುವ ಸಾಲಗಳಿಗೆ ಸಂಬಂಧಿಸಿದಂತೆ, ಸ್ವೀಕೃತವಾದ ಬಡ್ಡಿಯನ್ನು ಆದಾಯಕ್ಕೆ ಪರಿಗಣಿಸತಕ್ಕದ್ದು.

**ಇ. ಲಾಭಾಂಶ ವಿಲೇವಾರಿ**

1. ಸೌಹಾರ್ದ ಸಹಕಾರಿ ಕಾಯ್ದೆ ಕಲಂ 10(2)(xxi) ರಡಿ ನಿಧಿಗಳಿಗೆ ನಿವ್ವಳ ಲಾಭ ವಿಲೇವಾರಿ ಮಾಡುವಾಗ ನೇರ ಪದ್ಧತಿಯಲ್ಲಿಯೇ (Straight Line Method) ಲಾಭ ಹಂಚಿಕೆ ಮಾಡತಕ್ಕದ್ದು. ಇಳಿಕೆ ಪದ್ಧತಿಯನ್ನು (Diminishing Method) ಬಳಸತಕ್ಕದ್ದಲ್ಲ.
2. ನಿವ್ವಳ ಲಾಭದ ಶೇ.2 ರಷ್ಟು ಶಿಕ್ಷಣ ನಿಧಿಯನ್ನು, ಸಾಮಾನ್ಯ ಸಭೆ ನಡೆದ ದಿನಾಂಕದಿಂದ 30 ದಿನಗಳೊಳಗೆ ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು, ಶಿಕ್ಷಣ ನಿಧಿಗೆ ಪಾವತಿ ಮಾಡದ ಸದಸ್ಯರಿಗೆ ಲಾಭಾಂಶ (ಡಿವಿಡೆಂಡ್) ಸಂದಾಯ ಮಾಡತಕ್ಕದ್ದಲ್ಲ.
3. ಉಪವಿಧಿ/ಸಾಮಾನ್ಯ ಸಭೆಯಲ್ಲಿ ಇನ್ನಾವುದೇ ನಿಧಿಗಳನ್ನು ರಚಿಸುವ ಸಂದರ್ಭದಲ್ಲಿ, ನಿಧಿಯ ರಚನೆಯ ಉದ್ದೇಶ, ಶೇಕಡಾವಾರು ಹಂಚಿಕೆಯ ಪ್ರಮಾಣ, ನಿಧಿಯ ಅವಧಿ ಹಾಗೂ ನಿಧಿಯ ಬಳಕೆಯ ಬಗ್ಗೆ ಸ್ಪಷ್ಟ ನಿಮಯಮಗಳನ್ನು ರೂಪಿಸಿಕೊಳ್ಳತಕ್ಕದ್ದು.

**ಎಫ್. ಹೂಡಿಕೆ ಕುರಿತ ಮಾರ್ಗಸೂಚಿ :**

1. ಸೌಹಾರ್ದ ಸಹಕಾರಿಗಳು ತಕ್ಷಣದ ಬಳಕೆಗೆ ಅಗತ್ಯವಿರದ ನಿಧಿಗಳನ್ನು ಹಾಗೂ ಮೀಸಲು ನಿಧಿಯನ್ನು ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18 ರಂತೆ, ಸರ್ಕಾರದಿಂದ ಅನುಮೋದಿತವಾದ ಭದ್ರತೆಗಳಲ್ಲಿ ಅಥವಾ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕ್‌ನಲ್ಲಿ ಮಾತ್ರ ಹೂಡಿಕೆ ಮಾಡತಕ್ಕದ್ದು.
2. ಸಹಕಾರಿಗಳು ಹೆಚ್ಚಿನ ಮೊತ್ತವನ್ನು ಒಂದೇ ಬ್ಯಾಂಕ್/ಸರ್ಕಾರಿ ಭದ್ರತೆಯಲ್ಲಿ ಹೂಡಿಕೆ ಮಾಡುವ ಬದಲು ಬೇರೆ ಬೇರೆ ಬ್ಯಾಂಕ್/ಸರ್ಕಾರಿ ಭದ್ರತೆಗಳಲ್ಲಿ ಒಟ್ಟೂ ಹೂಡಿಕೆಯ ಶೇ.20 ಕ್ಕಿಂತ ಕಡಿಮೆ ಮೊತ್ತವನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡುವುದು ಸೂಕ್ತವಾಗಿರುತ್ತದೆ. ಹೂಡಿಕೆಯ ಬಗ್ಗೆ ಸೂಕ್ತ ನಿಯಮಗಳನ್ನು ಆಡಳಿತ ಮಂಡಳಿಯು ರಚಿಸಿಕೊಂಡು ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಳ್ಳತಕ್ಕದ್ದು.
3. ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ಸಹಕಾರ ಸಂಘ/ಸಕ್ಕರೆ ಕಾರ್ಖಾನೆ ಸೇರಿದಂತೆ ಅಂತಹ ಯಾವುದೇ ಸಂಸ್ಥೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ/ಮ್ಯೂಚುವಲ್ ಫಂಡ್/ಬಿಟ್ ಕಾಯಿನ್/ಕ್ರಿಪ್ಟೊ ಕರೆನ್ಸ್/ಯುಲಿಫ್ ಲಿಂಕ್ಡ್ ಸೇರಿದಂತೆ, ಅಸಲು ಮತ್ತು ನಿಶ್ಚಿತ ಬಡ್ಡಿಗೆ ಖಾತರಿ ಇಲ್ಲದ ಯೋಜನೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
5. ಸೌಹಾರ್ದ ಸಹಕಾರಿಗಳ ಹೂಡಿಕೆಯಿಂದ ಆದಾಯ ಅಥವಾ ನಷ್ಟ ಉಂಟಾದಲ್ಲಿ ಅದನ್ನು ಆದಾಯ/ವೆಚ್ಚ ತಃಖ್ತೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

**ಜಿ. ಸಾಲದ ಕುರಿತು ಮಾನದಂಡಗಳು :**

1. ಓರ್ವ ಸದಸ್ಯನಿಗೆ ನೀಡುವ ಸಾಲದ ಒಟ್ಟು ಮೊತ್ತವು ಸಹಕಾರಿಯ ಒಟ್ಟು ದುಡಿಯುವ ಬಂಡವಾಳದ ಶೇಕಡಾ 5 ಅನ್ನು ದಾಟುವಂತಿಲ್ಲ.
2. ಸಹಕಾರಿಯ ನಿರ್ದೇಶಕರು ಹಾಗೂ ಅವರ ಸಂಬಂಧಿಕರಿಗೆ ನೀಡಿದ ಸಾಲದ ಒಟ್ಟು ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10 ಅನ್ನು ದಾಟುವಂತಿಲ್ಲ.

– 'ಸಂಬಂಧಿ' ಎಂದರೆ ಗಂಡ/ಹೆಂಡತಿ, ಸಹೋದರ ಮತ್ತು ಸಹೋದರಿ, ಸಹೋದರ/ಸಹೋದರಿಯ ಗಂಡ/ಹೆಂಡತಿ, ತಂದೆ ಮತ್ತು ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳು ಇವರನ್ನೆಲ್ಲ ಒಳಗೊಂಡಿರುತ್ತದೆ.

3. ಏಕ ಮಾಲಿಕತ್ವದ ಸಂಸ್ಥೆ ಹೊರತುಪಡಿಸಿ, ಸಹಕಾರಿಯ ನಿರ್ದೇಶಕರು ಪಾಲ್ಗೊಂಡಿರುವ ಸಂಸ್ಥೆಗಳಿಗೆ ಭದ್ರತಾ ಸಾಲವನ್ನು ನೀಡಬಹುದಾಗಿದ್ದು, ಇಂತಹ ಸಾಲದ ಒಟ್ಟೂ ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10ನ್ನು ಮೀರತಕ್ಕದ್ದಲ್ಲ.
4. ಸದಸ್ಯನು ಹೊಂದಿರುವ ಠೇವಣಿ ಅಥವಾ ಬಂಗಾರ ಅಡಮಾನ ಸೇರಿದಂತೆ ತಕ್ಷಣ ನಗದೀಕರಣಗೊಳ್ಳಬಹುದಾದ ಭದ್ರತೆಗಳ ಆಧಾರದ ಮೇಲೆ ನೀಡಿದ ಸಾಲವನ್ನು ಮೇಲಿನ ಮೂರು ಪ್ರಕರಣಗಳಿಗೆ ಪರಿಗಣಿಸತಕ್ಕದ್ದಲ್ಲ.
5. ಯಾವುದೇ ಸದಸ್ಯನು ಪಡೆದ ಅಥವಾ ಜಾಮೀನುದಾರನಾದ ಚಾಲ್ತಿ ಸಾಲ ಸುಸ್ತಿಯಾಗಿದ್ದಲ್ಲಿ ಅದೇ ವ್ಯಕ್ತಿಗೆ ಹೊಸ ಸಾಲ ನೀಡುವಂತಿಲ್ಲ.
6. ಠೇವಣಿ ಆಧಾರದ ಸಾಲ ನೀಡಿಕೆ ಸಂದರ್ಭದಲ್ಲಿ ಸಾಲದ ಮೊತ್ತವು, ಕ್ರೋಢೀಕೃತ ಬಡ್ಡಿಯನ್ನು ಸೇರಿದಂತೆ ಠೇವಣಿ ಮೊತ್ತದ (ಸರೆಂಡರ್ ವ್ಯಾಲ್ಯೂ) ಶೇಕಡಾ 90ನ್ನು ಮೀರುವಂತಿಲ್ಲ. ಯಾವುದೇ ಹಂತದಲ್ಲಿ ಸಾಲ ಮತ್ತು ಸಾಲದ ಬಡ್ಡಿಯ ಮೊತ್ತವು ಠೇವಣಿ ಮೊತ್ತವನ್ನು (ಸರೆಂಡರ್ ವ್ಯಾಲ್ಯೂ) ಮೀರುತ್ತಿದ್ದಲ್ಲಿ, ತಕ್ಷಣ ಅಂತಹ ಸಾಲವನ್ನು ಅಗತ್ಯ ಪ್ರಕಿಯೆ ಮೂಲಕ ಠೇವಣಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮುಕ್ತಾಯಗೊಳಿಸತಕ್ಕದ್ದು.
7. ಯಾವುದೇ ಸದಸ್ಯನಿಗೆ ನೀಡುವ ಆಧಾರ ರಹಿತ ಸಾಲದ ಗರಿಷ್ಠ ಮೊತ್ತವು, ಸಹಕಾರಿಯ ಸ್ವಂತ ಬಂಡವಾಳ ಐವತ್ತು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ರೂ.50,000/– ಮೀರತಕ್ಕದ್ದಲ್ಲ ಹಾಗೂ ಸಹಕಾರಿಯ ಸ್ವಂತ ಬಂಡವಾಳ ಐವತ್ತು ಲಕ್ಷ ಮೀರಿದ್ದಲ್ಲಿ ಸಹಕಾರಿಯ ಸ್ವಂತ ಬಂಡವಾಳದ ಶೇ.1 ಅಥವಾ ರೂ.3,00,000/– ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೀರುವಂತಿಲ್ಲ.

ಪರಂತು, ಸಂಪೂರ್ಣವಾಗಿ ವೇತನ ಆಧಾರಿತ ಸಾಲ ನೀಡುತ್ತಿರುವ ನೌಕರರ ಸೌಹಾರ್ದ ಸಹಕಾರಿಗಳಿಗೆ ಈ ನಿಯಮ ಅನ್ವಯವಾಗತಕ್ಕದ್ದಲ್ಲ.

8. ಆಧಾರ ರಹಿತ ಸಾಲ ನೀಡುವಾಗ ಕನಿಷ್ಠ ಇಬ್ಬರ ಜಾಮೀನಿನೊಂದಿಗೆ ಸಾಲ ನೀಡತಕ್ಕದ್ದು, ಯಾವುದೇ ಸದಸ್ಯನು ಮೂರಕ್ಕಿಂತ ಹೆಚ್ಚಿನ ಸದಸ್ಯರಿಗೆ ಜಾಮೀನು ನೀಡುವಂತಿಲ್ಲ.

**ಹೆಚ್. ಆರ್ಥಿಕ ಸಂಕಷ್ಟ ಎಂದು ಪರಿಗಣನೆ :**

1. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳದ ಶೇಕಡಾ 50 ಕ್ಕಿಂತ ಹೆಚ್ಚಾದಲ್ಲಿ.

ವಿವರಣೆ : 'ಸ್ವಂತ ಬಂಡವಾಳ' ಎಂದರೆ ಪಾವತಿಯಾದ ಒಟ್ಟೂ ಷೇರು ಬಂಡವಾಳ ಹಾಗೂ ಎಲ್ಲಾ ಮೀಸಲು ನಿಧಿಗಳ ಮೊತ್ತದಲ್ಲಿ ಸಂಚಿತ ನಷ್ಟವನ್ನು ಕಳೆದಾಗ ಬರುವ ಮೊತ್ತ.

2. ಸಹಕಾರಿಯ ಒಟ್ಟು ಠೇವಣಿಗಳ ಶೇಕಡಾ 5 ಕ್ಕಿಂತ ಕಡಿಮೆ ದ್ರವ್ಯಾಸ್ತಿ ಇರುವ ಸಹಕಾರಿ.

3. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಒಟ್ಟು ಸಾಲಕ್ಕೆ ಶೇಕಡಾ 20 ದಾಟಿದಲ್ಲಿ.

ಅಂತಹ ಸಹಕಾರಿಗಳನ್ನು ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ಆರ್ಥಿಕವಾಗಿ ಸಬಲರಾಗುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಐ. ತೀವ್ರ ನಿಗಾ ಇರಿಸಲಾಗುವ ಸಹಕಾರಿಗಳು :**

1. ಸಹಕಾರಿಯ ನೋಂದಣಿಯ ನಂತರದ ಮೂರು ಸಹಕಾರ ವರ್ಷಗಳ ಅವಧಿಯನ್ನು ಹೊರತುಪಡಿಸಿ, ಸತತ ಮೂರು ವರ್ಷಗಳು ನಷ್ಟದಲ್ಲಿರುವ ಸಹಕಾರಿ
2. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳಕ್ಕಿಂತ ಹೆಚ್ಚಾದಲ್ಲಿ.
3. ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಯು ಸತತ ಮೂರು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.
4. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಶೇಕಡಾ 40 ದಾಟಿದಲ್ಲಿ.

ಅಂತಹ ಸಹಕಾರಿಗಳನ್ನು ತೀವ್ರ ನಿಗಾದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ತೀವ್ರ ನಿಗಾದಿಂದ ಹೊರಬರುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

– ನೂತನವಾಗಿ ನೋಂದಾಯಿತವಾದ ಸಹಕಾರಿಗಳ ಸಂದರ್ಭದಲ್ಲಿ ಮೊದಲ ಎರಡು ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಹೆಚ್ ಹಾಗೂ ಐ ಕಂಡಿಕೆಗಳು ಅನ್ವಯವಾಗತಕ್ಕದ್ದಲ್ಲ.

**ಜೆ. ದುರ್ಬಲ ಸಹಕಾರಿ**

1. ಅ. ನೂತನ ಸಹಕಾರಿಯು ಐದನೇ ಆರ್ಥಿಕ ವರ್ಷಾಂತ್ಯಕ್ಕೆ ಲಾಭ ಗಳಿಸದಿದ್ದಲ್ಲಿ.

ಆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಚಟುವಟಿಕೆಯನ್ನು ನಡೆಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಪರಿವರ್ತಿತಗೊಂಡ ಯಾವುದೇ ಸಹಕಾರಿಯು ಪರಿವರ್ತನೆಯ ನಂತರ ಸತತ ಮೂರು ವರ್ಷ ನಷ್ಟವನ್ನು ಅನುಭವಿಸಿದಲ್ಲಿ.

ಇ. ತೀವ್ರ ನಿಗಾದಲ್ಲಿರುವ ಸಹಕಾರಿಯು ಸತತ ಎರಡು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.

ಈ. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಶೇಕಡಾ 60 ದಾಟಿದಲ್ಲಿ.

– ಅಂತಹ ಸಹಕಾರಿಗಳನ್ನು ದುರ್ಬಲದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ದುರ್ಬಲ ಸಹಕಾರಿಗಳು ದುರ್ಬಲತೆಯಿಂದ ಹೊರಬರಲು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಕೆ. ಇತರೆ ಅಂಶಗಳು :**

1. ಸಹಕಾರಿಯು ಲಾಭ ಗಳಿಸಿದಾಗ ಸದಸ್ಯರಿಗೆ ನೀಡುವ ಲಾಭಾಂಶವು, ಶೇಕಡಾ 25ನ್ನು ಮೀರುವಂತಿಲ್ಲ.
2. ಸಹಕಾರಿಯ ನೋಂದಣಿಯಾಗಿ ಮೊದಲ ಮೂರು ಸಹಕಾರ ವರ್ಷಗಳನ್ನು ಹೊರತುಪಡಿಸಿ ನಂತರದ ಸಹಕಾರ ವರ್ಷಗಳಲ್ಲಿ ಸಹಕಾರಿಯ ಒಟ್ಟು ಆಡಳಿತಾತ್ಮಕ ವೆಚ್ಚವು ದುಡಿಯುವ ಬಂಡವಾಳದ ಶೇ.3 ಅನ್ನು ದಾಟುವಂತಿಲ್ಲ.
3. ಸಹಕಾರಿಯು ಯಾವುದೇ ರೂಪದಲ್ಲಿ ನೀಡುವ ದೇಣಿಗೆಯ ಮೊತ್ತವು ಸಹಕಾರಿಯು ಹಿಂದಿನ ಆರ್ಥಿಕ ವರ್ಷದಲ್ಲಿ ಗಳಿಸಿದ ನಿವ್ವಳ ಲಾಭದ ಶೇ.10ನ್ನು ಮೀರತಕ್ಕದ್ದಲ್ಲ. ಪರಂತು, ಸಹಕಾರಿಯ ಲಾಭ ವಿಂಗಡಣೆಗಾಗಿ ದೇಣಿಗೆ ಉದ್ದೇಶಕ್ಕಾಗಿ ರಚಿಸಲ್ಪಟ್ಟ ನಿಧಿಯಿಂದ ಮಾಡುವ ಪಾವತಿಗಳಿಗೆ ಇದರಿಂದ ವಿನಾಯಿತಿ ಇರುತ್ತದೆ.
4. ಸಹಕಾರಿಯು ಯಾವುದೇ ರಾಜಕೀಯ ಪಕ್ಷಕ್ಕೆ, ಮತೀಯ ನಂಬಿಕೆಯ ಸಂಸ್ಥೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಗದು ಅಥವಾ ವಸ್ತುಗಳ ರೂಪದಲ್ಲಿ ಯಾವುದೇ ವಂತಿಗೆ/ದೇಣಿಗೆಯನ್ನು ನೀಡತಕ್ಕದ್ದಲ್ಲ.
5. ಸಹಕಾರಿಗೆ ಸ್ಥಿರಾಸ್ತಿ(ನಿವೇಶನ/ಕಟ್ಟಡ) ಖರೀದಿಸುವುದಿದ್ದಲ್ಲಿ/ನಿರ್ಮಾಣ ಮಾಡುವುದಾದಲ್ಲಿ ಅದಕ್ಕಾಗಿ ಸಹಕಾರಿಯ ಕಟ್ಟಡ ನಿಧಿಯನ್ನು ಉಪಯೋಗಿಸಬೇಕು. ಅಗತ್ಯವಿದ್ದಲ್ಲಿ, ಮೀಸಲು ನಿಧಿಯ ಶೇಕಡಾ 80 ಅನ್ನು ಮೀರದ ಮೊತ್ತವನ್ನು ಸಾಮಾನ್ಯ ಸಭೆಯ ಅನುಮೋದನೆಯೊಡನೆ ಬಳಸಬಹುದು. ಈ ರೀತಿ ಬಳಸಿದಲ್ಲಿ, ಸದರಿ ಮೊತ್ತವನ್ನು ಮುಂದಿನ ವರ್ಷಗಳ ಲಾಭದಿಂದ ಭರ್ತಿ ಮಾಡತಕ್ಕದ್ದು. ಸಾಮಾನ್ಯ ಸಭೆಯಲ್ಲಿ, ಪ್ರತಿವರ್ಷ ನಿವ್ವಳ ಲಾಭದಲ್ಲಿ ಲಾಭಾಂಶ ವಿಂಗಡಣೆಗೂ ಪೂರ್ವದಲ್ಲಿ ಮೀಸಲು ನಿಧಿಗೆ ವರ್ಗಾಯಿಸಬೇಕಾದ ಮೊತ್ತದ ಕುರಿತು ಸ್ಪಷ್ಟವಾಗಿ ನಿರ್ಣಯಿಸಬೇಕು.
6. ಸೌಹಾರ್ದ ಸಹಕಾರಿಗಳು, ಪ್ರತೀ ಸದಸ್ಯರ ಸದಸ್ಯತ್ವದ ಅರ್ಜಿಯೊಂದಿಗೆ ಕೆವೈಸಿ ದಾಖಲಾತಿಗಳನ್ನು ಅಂದರೆ ವಿಳಾಸದ ದಾಖಲೆ, ಇತ್ತೀಚಿನ ಫೋಟೋ, ಫೋಟೋ ಇರುವ ಗುರುತಿನ ಚೀಟಿಯ ಪ್ರತಿಯನ್ನು ಪಡೆಯತಕ್ಕದ್ದು ಹಾಗೂ ನಿಯಮಿತವಾಗಿ ಇಂದೀಕರಿಸಿಕೊಳ್ಳತಕ್ಕದ್ದು. ಪ್ಯಾನ್ ಹಾಗೂ ಆಧಾರ್ ಸಂಖ್ಯೆಯನ್ನು ಹೊಂದಿರತಕ್ಕದ್ದು.

- ಈ ಸುತ್ತೋಲೆಗೆ ಸಂಬಂಧಪಟ್ಟಂತೆ, ಯಾವುದೇ ವರ್ಗದ ಸಹಕಾರಿಗಳಿಗೆ ಅಥವಾ ಯಾವುದೇ ಸಹಕಾರಿಗೆ ಸಂಬಂಧಿಸಿದಂತೆ, ಲಿಖಿತದಲ್ಲಿ ಸೂಕ್ತ ಕಾರಣವನ್ನು ದಾಖಲಿಸಿ, ಸುತ್ತೋಲೆಯ ಯಾವುದೇ ಅಂಶಗಳಿಂದ ವಿನಾಯಿತಿ ನೀಡಲು ಅಥವಾ ಅಂಶಗಳನ್ನು ಮಾರ್ಪಡಿಸಲು ಸಂಯುಕ್ತ ಸಹಕಾ–ರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.
- ಈ ಸುತ್ತೋಲೆಯು ಪತ್ತಿನ ಚಟುವಟಿಕೆ ನಡೆಸುತ್ತಿರುವ ಬ್ಯಾಂಕೇತರ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುತ್ತದೆ. ಪತ್ತಿನ ಚಟುವಟಿಕೆಗಳೊಂದಿಗೆ ಇನ್ನಿತರ ಪತ್ತೇತರ ಚಟುವಟಿಕೆ ನಡೆಸುತ್ತಿರುವ ಸಹಕಾರಿಗಳ ಸಂದರ್ಭದಲ್ಲಿ ಪತ್ತಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಸುತ್ತೋಲೆಯು ಅನ್ವಯವಾಗುತ್ತದೆ. ಪರಂತು, ಪತ್ತಿನ ಹಾಗೂ ಪತ್ತೇತರ ಚಟುವಟಿಕೆಗಳ ಲೆಕ್ಕಗಳನ್ನು/ಹಣಕಾಸು ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸತಕ್ಕದ್ದು.
- ಸಂಯುಕ್ತ ಸಹಕಾರಿಯಿಂದ ನೀಡಿದ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಈ ಮಾನದಂಡಗಳನ್ನು ಪಾಲಿಸದಿದ್ದಲ್ಲಿ ಅಂತಹ ಸಹಕಾರಿಗಳಿಗೆ ಮೊದಲನೇ ಹಂತದಲ್ಲಿ ಸಂಯುಕ್ತ ಸಹಕಾರಿಯಿಂದ ಅಗತ್ಯ ನಿರ್ದೇಶನ ನೀಡತಕ್ಕದ್ದು ಹಾಗೂ ನಿರ್ದೇಶನವನ್ನು ಪಾಲಿಸದಿದ್ದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನುಸಾರ ಕಾನೂನು ಕ್ರಮ ಅನ್ವಯವಾಗತಕ್ಕದ್ದು.
- ಈ ಹಿಂದೆ ನೀಡಿದ್ದ – ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ, ಲಾಭಾಂಶ ವಿಲೇವಾರಿ ಮಾರ್ಗಸೂಚಿ, ನಿಧಿಗಳ ಹೂಡಿಕೆ ಕುರಿತ ಮಾರ್ಗಸೂಚಿ, ಪತ್ತಿನ ಸಹಕಾರಿಗಳ ಆರ್ಥಿಕ ಸಬಲತೆ ಮಾನದಂಡಗಳು – ಈ ಸುತ್ತೋಲೆಗಳಲ್ಲಿನ ಅಂಶಗಳನ್ನು ಅಗತ್ಯ ಬದಲಾವಣೆಗಳೊಂದಿಗೆ ಈ ಸುತ್ತೋಲೆಯಲ್ಲಿ ಸೇರ್ಪಡೆ ಮಾಡಲಾಗಿರುವುದರಿಂದ, ಸದರಿ ಸುತ್ತೋಲೆಗಳನ್ನು ಹಿಂಪಡೆಯಲಾಗಿದೆ.

**ಈ ಆರ್ಥಿಕ ಸಬಲತೆಯ ಮಾನದಂಡಗಳನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ : 01.01.2021 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.**

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಶಾಸನಬದ್ದ ಸಹಕಾರಿ ಸಂಸ್ಥೆ**

**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

**www.souharda.coop, Ph: 080–23378375–80, Email:souharda@souharda.coop**

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಗೆ ತಿದ್ದುಪಡಿಯಾಗಿದ್ದು, ದಿನಾಂಕ:11.02.2013ರಿಂದ ತಿದ್ದುಪಡಿ ಅಧಿನಿಯಮವು ಜಾರಿಗೆ ಬಂದಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, ಕಲಂ 23ಎರಂತೆ ಯಾವುದೇ ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು. ಈ ಹಿನ್ನೆಲೆಯಲ್ಲಿ ಯಾವುದೇ ಸೌಹಾರ್ದ ಸಹಕಾರಿಯು ಶಾಖೆಯನ್ನು ತೆರೆಯುವ ಪ್ರಸ್ತಾವನೆಯನ್ನು ಸಂಯುಕ್ತ ಸಹಕಾರಿಯ ಅನುಮೋದನೆಗೆ ಮಂಡಿಸುವಾಗ ಅನುಸರಿಸಬೇಕಾದ ಮಾನದಂಡಗಳು, ಶಾಖೆಗೆ ಅನುಮತಿ ನೀಡುವಾಗ ಸಂಯುಕ್ತ ಸಹಕಾರಿಯು ಪರಿಗಣಿಸುವ ಅಂಶಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತು ಸಂಯುಕ್ತ ಸಹಕಾರಿಯು ನೀಡಿರುವ ಸುತ್ತೋಲೆ ಸಂಖ್ಯೆ: ಕರಾಸೌಸಂಸನಿ/ಸುತ್ತೋಲೆ/ಆ–5/2013–14, ದಿನಾಂಕ:28.06.2013 ಕ್ಕೆ ಅಗತ್ಯ ಬದಲಾವಣೆಗಳನ್ನು ಮಾಡಿ ಪರಿಷ್ಕೃತ ಮಾನದಂಡಗಳನ್ನು ಈ ಕೆಳಗಿನಂತೆ ರೂಪಿಸಲಾಗಿದೆ.

ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳು ಸುತ್ತೋಲೆಯ ಕರಡು ಸಿದ್ಧಪಡಿಸಿ ಸಲಹೆ/ಅಭಿಪ್ರಾಯ/ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಿ ಆಗಸ್ಟ್ ಮಾಹೆಯ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಸ್ವೀಕೃತವಾದ ಸಲಹೆ/ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಗಣಿಸಿ ಸಿದ್ಧಪಡಿಸಲಾದ ಅಂತಿಮ ಕರಡನ್ನು ದಿನಾಂಕ: 18 ನವೆಂಬರ್ 2020 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ವಿಷಯ 05ರಲ್ಲಿ ಅನುಮೋದಿಸಿ ನಿರ್ಣಯಿಸಲಾಗಿದೆ. ಹಾಗೂ ದಿನಾಂಕ: 19 ಡಿಸೆಂಬರ್ 2020ರಂದು ನಡೆದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿಷಯ 19ರಲ್ಲಿ ಅನುಮೋದಿಸಿದ್ದು 01 ಜನವರಿ 2021ರಿಂದ ಅನ್ವಯವಾಗುವಂತೆ ನಿರ್ಣಯಿಸಲಾಗಿದೆ.

### ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ

**ಕ.ಸೌ.ಸ. ಅಧಿನಿಯಮ, 1997ರ ಕಲಂ 23(ಎ) ಮತ್ತು 53 (7) (ಎ) ಹಾಗೂ (ಎಚ್) ಅಡಿ**

**ಸಂಖ್ಯೆ : ಸಂಸ/ಆಸು–02/2020–21** **ದಿನಾಂಕ : 01.01.2021**

### ಶಾಖೆ ತೆರೆಯಲು ಅನುಮತಿ ನೀಡಲು ಮಾನದಂಡಗಳು

1. ಹಿಂದಿನ ಆರ್ಥಿಕ ವರ್ಷದಲ್ಲಿ ಲಾಭ ಗಳಿಸಿದ್ದು, ಪ್ರಸಕ್ತ ಸಾಲಿನ ಸಹಕಾರಿಯ ವ್ಯವಹಾರವು ಹಿಂದಿನ ವರ್ಷದ ವ್ಯವಹಾರಕ್ಕಿಂತ ಹೆಚ್ಚಿರಬೇಕು.
2. ಈಗಾಗಲೇ ಶಾಖೆಗಳಿದ್ದಲ್ಲಿ ಶೇ.20ಕ್ಕಿಂತ ಹೆಚ್ಚು ಶಾಖೆಗಳು ನಷ್ಟದಲ್ಲಿರಬಾರದು.
3. ಸುಸ್ತಿ ಸಾಲದ ಪ್ರಮಾಣವು ನೀಡಿದ ಸಾಲ ಮತ್ತು ಮುಂಗಡಗಳ ಶೇ.15ನ್ನು ಅಥವಾ ಸ್ವಂತ ಬಂಡವಾಳದ ಶೇ.50 ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಮೀರತಕ್ಕದ್ದಲ್ಲ.
4. ಪ್ರಸ್ತುತ ಇರುವ ಲಾಭವು ಪ್ರಸ್ತಾವಿತ ಶಾಖೆಯ ವೆಚ್ಚವನ್ನು ಭರಿಸಲು ಶಕ್ತವಾಗಿರಬೇಕು.
5. ಯಾವುದೇ ವಿಚಾರಣೆ ಬಾಕಿ ಇರಬಾರದು.
6. ಶಾಸನಬದ್ಧ ಕರ್ತವ್ಯಗಳನ್ನು ನಿಗದಿತ ಸಮಯದಲ್ಲಿ ಪೂರೈಸಿರಬೇಕು. (ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಚುನಾವಣೆ, ನಿಬಂಧಕರಿಗೆ/ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸುವುದು, ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ/ಶಿಕ್ಷಣ ನಿಧಿ ಸಲ್ಲಿಕೆ ಇತ್ಯಾದಿ)
7. ಶಾಖೆ ತೆರೆಯುವ ಪ್ರದೇಶದಲ್ಲಿ ಸಹಕಾರಿಯು ಕನಿಷ್ಠ 50 ಸದಸ್ಯರನ್ನು ಹೊಂದಿರತಕ್ಕದ್ದು.
8. ಸಂಯುಕ್ತ ಸಹಕಾರಿ ನೀಡಿರುವ ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯ ದ್ರವ್ಯಾಸ್ತಿ ನಿರ್ವಹಣೆ ಮತ್ತು ಸಾಲದ ಕುರಿತ ಮಾನದಂಡಗಳನ್ನು ಪಾಲಿಸಿರತಕ್ಕದ್ದು.
9. ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳ ಈ ಕೆಳಗಿನಂತಿರತಕ್ಕದ್ದು.

1) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.20 ಲಕ್ಷ,

2) ಮಹಾನಗರ ಪಾಲಿಕೆ ಹೊರತುಪಡಿಸಿದ ಜಿಲ್ಲಾ ಕೇಂದ್ರಗಳಿಗೆ ರೂ.10 ಲಕ್ಷ,

3) ಇತರೆ ಕೇಂದ್ರಗಳಿಗೆ ರೂ.5 ಲಕ್ಷ

– ಸಹಕಾರಿಯ ಈಗಾಗಲೆ ಇರುವ ಶಾಖೆಗಳಿಗೆ, ಈ ಮೇಲ್ಕಂಡಂತೆ ಸ್ವಂತ ಬಂಡವಾಳ ಹಂಚಿಕೆ ಮಾಡಿದ ನಂತರದಲ್ಲಿ ಉಳಿದ ಸ್ವಂತ ಬಂಡವಾಳವನ್ನು ಉದ್ದೇಶಿತ ಶಾಖೆಗಳಿಗೆ ಲೆಕ್ಕಾಚಾರ ಮಾಡುವುದು.

10. ಮೊದಲ ಐದು ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸಹಕಾರಿಯ ಲಾಭವನ್ನು ಪರಿಗಣಿಸತಕ್ಕದ್ದಲ್ಲ.

11. ಆರರಿಂದ ಇಪ್ಪತ್ತೈದರವರೆಗಿನ ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ, ಎಲ್ಲ ನಿಬಂಧನೆಗಳು ಯಥಾವತ್ತಾಗಿ ಅನ್ವಯವಾಗತಕ್ಕದ್ದು.

12. ಇಪ್ಪತ್ತಾರರಿಂದ ಐವತ್ತರವರೆಗಿನ ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಎಲ್ಲ ಮಾನದಂಡಗಳೊಂದಿಗೆ, ಸಂಯುಕ್ತ ಸಹಕಾರಿಯು ನೀಡಿರುವ ಆರ್ಥಿಕ ಸಬಲತೆಯ ಮಾನದಂಡಗಳನ್ನು ಪೂರ್ಣವಾಗಿ ಪಾಲಿಸಿರತಕ್ಕದ್ದು.

13. ಇ ಸ್ಟಾಂಪಿಂಗ್ ಸೇರಿದಂತೆ ಯಾವುದೇ ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರ ಆರಂಭಿಸುವ ಶಾಖೆಗಳಿಗೆ ಅನುಮತಿ ನೀಡುವಾಗ ಪ್ರಸ್ತಾವಿತ ಸೇವಾ/ಪತ್ತೇತರ ಚಟುವಟಿಕೆ ಹೊರತುಪಡಿಸಿ, ಪತ್ತಿನ ಚಟುವಟಿಕೆ ಸೇರಿದಂತೆ ಸಹಕಾರಿಯ ಇನ್ನಿತರ ಚಟುವಟಿಕೆ ನಡೆಸದಿರುವ ನಿಬಂಧನೆಯೊಂದಿಗೆ ಈ ಮಾನದಂಡಗಳಿಂದ ವಿನಾಯತಿ ಇರತಕ್ಕದ್ದು.

14. ಒಂದು ಸಹಕಾರಿಗೆ ಯಾವುದೇ ಸಹಕಾರ ವರ್ಷದಲ್ಲಿ ಐದಕ್ಕಿಂತ ಹೆಚ್ಚು ಶಾಖೆಗೆ ಅನುಮತಿ ನೀಡತಕ್ಕದ್ದಲ್ಲ ಹಾಗೂ ಸಹಕಾರಿಯ ಒಟ್ಟೂ ಶಾಖೆಗಳ ಸಂಖ್ಯೆಯು ಐವತ್ತನ್ನು ಮೀರತಕ್ಕದ್ದಲ್ಲ.

15. ಯಾವುದೇ ಪ್ರದೇಶದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಅಥವಾ ಸೌಹಾರ್ದ ಸಹಕಾರಿಯ ಶಾಖೆಗಳು ಇಲ್ಲದಿದ್ದಲ್ಲಿ, ಅಂತಹ ಪ್ರದೇಶಗಳಿಗೆ ಸಂಬಂಧಿಸಿದಂತೆ ಮೇಲಿನ ಯಾವುದೇ ನಿಬಂಧನೆಗಳಿಂದ ವಿನಾಯಿತಿ ನೀಡಿ ಶಾಖೆ ತೆರೆಯಲು ಅನುಮತಿ ನೀಡುವ ಅಧಿಕಾರ ಸಂಯುಕ್ತ ಸಹಕಾ–ರಿಯ ಆಡಳಿತ ಮಂಡಲಿಗೆ ಸಕ್ಷಮವಾಗಿರುತ್ತದೆ.

– 'ಪ್ರದೇಶ' ಎಂದರೆ ತಾಲ್ಲೂಕು ಪಂಚಾಯತಿ/ಗ್ರಾಮ ಪಂಚಾಯತಿ ವ್ಯಾಪ್ತಿ.

16. ಸಂಯುಕ್ತ ಸಹಕಾರಿಯು ಅನುಮತಿ ಪತ್ರ ನೀಡಿದ ದಿನಾಂಕದಿಂದ ಒಂದು ವರ್ಷದ ಒಳಗೆ ಕಾರ್ಯಾರಂಭ ಮಾಡದ ಶಾಖೆಗಳ ಅನುಮತಿ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು.

17. ಶಾಖಾ ವಿಲೀನ, ಸ್ಥಳಾಂತರ ಹಾಗೂ ಮುಚ್ಚುವಿಕೆಯ ಸಂದರ್ಭದಲ್ಲಿ –

1. ಶಾಖಾ ವಿಲೀನ, ಸ್ಥಳಾಂತರ ಹಾಗೂ ಮುಚ್ಚುವಿಕೆಯ ಸ್ಥಿತಿ ನಿರ್ಮಾಣವಾದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸತಕ್ಕದ್ದು ಹಾಗೂ ಸದರಿ ಶಾಖೆಯಲ್ಲಿ ವ್ಯವಹಾರ ಹೊಂದಿರುವವರಿಗೆ ಯಾವ ಶಾಖೆಯಿಂದ ಸೇವೆ ಒದಗಿಸಲಾಗುವುದು ಎನ್ನುವುದನ್ನು ಸ್ಪಷ್ಟವಾಗಿ ನಿರ್ಣಯದಲ್ಲಿ ದಾಖಲಿಸತಕ್ಕದ್ದು.

2. ಶಾಖೆಯಲ್ಲಿ ವ್ಯವಹಾರ ಹೊಂದಿರುವ ಎಲ್ಲಾ ಸದಸ್ಯರಿಗೆ ಲಿಖಿತದಲ್ಲಿ ಪ್ರಸಕ್ತ ಶಾಖೆಯ ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ಮಾಹಿತಿ ನೀಡತಕ್ಕದ್ದು ಹಾಗೂ ಮುಂದಿನ ವ್ಯವಹಾರ ನಿರ್ವಹಿಸಬೇಕಾದ ಶಾಖೆಯ ವಿವರ ಒದಗಿಸತಕ್ಕದ್ದು.

3. ಶಾಖೆಯ ಠೇವಣಿದಾರ ಬೇರೊಂದು ಶಾಖೆಯಿಂದ ವ್ಯವಹಾರ ನಡೆಸಲು ಒಪ್ಪದಿದ್ದಲ್ಲಿ ಅವನ ಠೇವಣಿಯನ್ನು ಯಾವುದೇ ಕಡಿತ ಮಾಡದೆ ಹಿಂತಿರುಗಿಸತಕ್ಕದ್ದು.

4. ಶಾಖೆ ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ಮಾಹಿತಿಯನ್ನು ಆಡಳಿತ ಮಂಡಳಿ ಸಭೆಯ ನಿರ್ಣಯದೊಂದಿಗೆ ಸಂಯುಕ್ತ ಸಹಕಾರಿಗೆ, ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ಸಹಕಾರಿಯ ತಕ್ಷಣದ/ಮುಂಬರುವ ಸಾಮಾನ್ಯ ಸಭೆಗೆ ಮಾಹಿತಿ ನೀಡತಕ್ಕದ್ದು.

**ಶಾಖೆ ತೆರೆಯಲು ಅನುಮತಿ ಕೋರುವ ಪತ್ರದ ಜೊತೆ ಸಲ್ಲಿಸಬೇಕಾದ ಮಾಹಿತಿ/ದಾಖಲೆಗಳು**

1. ಶಾಖೆ ತೆರೆಯಲು ಉದ್ದೇಶಿಸಿರುವ ಸ್ಥಳದ ವಿವರ.

2. ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆ, ಪ್ರಸ್ತಾವಿತ ಶಾಖೆಯ ಪ್ರದೇಶದಲ್ಲಿನ ಸದಸ್ಯರ ಸಂಖ್ಯೆ.

3. ಸಹಕಾರಿಯ ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧಿತ ಆಸ್ತಿ–ಜವಾಬ್ದಾರಿ ತಃಖ್ತೆ, ಲಾಭ–ಹಾನಿ ತಃಖ್ತೆ ಮತ್ತು ಜಮಾ–ಖರ್ಚು ತಃಖ್ತೆ (ಶೆಡ್ಯೂಲುಗಳ ಸಹಿತ).
4. ಹಿಂದಿನ ಎರಡು ವರ್ಷಗಳಲ್ಲಿ ಸದಸ್ಯರಿಗೆ ಹಂಚಿಕೆ ಮಾಡಿರುವ ಲಾಭಾಂಶ.
5. ಹಿಂದಿನ ಎರಡು ವರ್ಷಗಳ ಸುಸ್ತಿ ಸಾಲದ ಪ್ರಮಾಣ.
6. ಸ್ವಂತ ಬಂಡವಾಳ (ಪಾವತಿಯಾದ ಶೇರು ಬಂಡವಾಳ + ಎಲ್ಲಾ ರೀತಿಯ ಮೀಸಲು ನಿಧಿಗಳು – ಕೂಡಿಬಿದ್ದ ನಷ್ಟಗಳು).
7. ಯಾವುದೇ ರೀತಿಯ ವಿಚಾರಣೆ ನಡೆಯುತ್ತಿದ್ದಲ್ಲಿ ಆದೇಶ ಪತ್ರ, ನಡೆದಿದ್ದಲ್ಲಿ ವಿಚಾರಣ ವರದಿ.
8. ಈಗಿರುವ ಒಟ್ಟು ಶಾಖೆಗಳ ವಿವರ – ಪ್ರತಿ ಶಾಖೆಯ ವಿಳಾಸ, ಆರಂಭಿಸಿದ ದಿನಾಂಕ, ಹಿಂದಿನ ಎರಡು ವರ್ಷಗಳ ಲಾಭ/ನಷ್ಟ, ಒಟ್ಟು ಸಿಬ್ಬಂದಿಗಳ ಸಂಖ್ಯೆ, ಠೇವಣಿ, ಸಾಲ, ಪತ್ತೇತರ ಚಟುವಟಿಕೆಯ ವಿವರ.
9. ಪ್ರಸ್ತಾವಿತ ಶಾಖೆಯನ್ನು ಆರಂಭಿಸಲು ಅಗತ್ಯ ಬಂಡವಾಳ – ಕಛೇರಿ ಬಾಡಿಗೆ ಠೇವಣಿ, ಪೀಠೋಪಕರಣಗಳು, ಯಂತ್ರೋಪಕರಣಗಳು ಇತ್ಯಾದಿ.
10. ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷಗಳ ಅಂದಾಜು ಖರ್ಚು ವೆಚ್ಚಗಳು – ಸಿಬ್ಬಂದಿ ವೆಚ್ಚ, ಬಾಡಿಗೆ, ವಿದ್ಯುತ್, ದೂರವಾಣಿ, ಸ್ಟೇಷನರಿ ಇತ್ಯಾದಿ.
11. ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷದ ಅಂದಾಜು ವ್ಯವಹಾರ.
12. ಪ್ರಸ್ತಾವಿತ ಶಾಖೆಯ ಸ್ಥಾನದಿಂದ ಈಗಿರುವ ಹತ್ತಿರದ ಶಾಖೆಗೆ ಇರುವ ದೂರ.
13. ಶಾಖೆ ಆರಂಭಿಸಲು ಅನುಮತಿ ಪಡೆದ ಸಾಮಾನ್ಯ ಸಭೆಯ ನೋಟೀಸ್ ಮತ್ತು ನಡವಳಿಗಳ ದೃಢೀಕೃತ ಪ್ರತಿಗಳು.
14. ಪತ್ತೇತರ/ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರ ಆರಂಭಿಸುವ ಶಾಖೆಯ ಸಂದರ್ಭದಲ್ಲಿ, ಪ್ರಸ್ತಾವಿತ ಸೇವಾ ಚಟುವಟಿಕೆ ಹೊರತುಪಡಿಸಿ ಇನ್ನಿತರ ಚಟುವಟಿಕೆ ನಡೆಸದಿರುವ ಕುರಿತು ಆಡಳಿತ ಮಂಡಳಿ ನಿರ್ಣಯದೊಂದಿಗೆ ದೃಢೀಕರಣ ಪತ್ರ.

**ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳು ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ : 01.01.2021 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.**

(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕ**

## ಸಹಕಾರ ಭಾರತಿಯ ಸಂಸ್ಥಾಪನಾ ದಿನಾಚರಣೆ

ಸಹಕಾರ ಭಾರತೀಯ ಸಂಸ್ಥಾಪನಾ ದಿನವನ್ನು ಕಲಬುರಗಿ ಜಿಲ್ಲಾ ಘಟಕದ ವತಿಯಿಂದ ಇಂದು ನಗರದ ಸಪ್ತಗಿರಿ ಹೋಟೆಲನಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು "ಸಹಕಾರ ರತ್ನ "ಬಸವೇಶ್ವರ ಸುದ್ದಿ ಮಾಧ್ಯಮದ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಇವರು ಉದ್ಘಾಟಿಸಿ ದೇಶದಲ್ಲಿ ಸಹಕಾರ ಚಳುವಳಿಯಲ್ಲಿ ಸಹಕಾರ ಭಾರತೀಯ ಕೊಡುಗೆ ಕುರಿತು ವಿವರಿಸಿ, ಸಭೆಯಲ್ಲಿ ನೆರೆದಿದ್ದ ಸಹಕಾರಿಗಳಿಗೆ ತಿಳಿಸಿದರು. ದೇಶದಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಸಹಕಾರಿಗಳಿಗೆ ವಿನಾಕಾರಣ ತೊಂದರೆ ನೀಡುತ್ತಿದ್ದ ಸಂದರ್ಭದಲ್ಲಿ ಸಹಕಾರ ಭಾರತೀಯ ಮುತುವರ್ಜಿವಹಿಸಿ ಕೇಂದ್ರ ಸರಕಾರ ಜೊತೆ ಮಾತಾನಾಡಿ ಒಂದು ತಾರ್ಕಿಕ ಅಂತ್ಯವನ್ನು ಹಾಕಿದ್ದಾರೆ. ಅಲ್ಲದೇ ಸರಕಾರ ಮತ್ತು ಸಹಕಾರಿಗಳ ಮಧ್ಯ ಕೊಂಡಿಯಂತೆ ಕಾರ್ಯನಿರ್ವಹಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಹಕಾರ ಭಾರತೀಯ ಪ್ರಮುಖರಾದ ಶ್ರೀ ಬಿ. ರಾಜಶೇಖರ ಇವರು ಸಹಕಾರ ಭಾರತೀಯ ಹುಟ್ಟು ಅದರ ಕಾರ್ಯವೈಖರಿ ಬಗ್ಗೆ ಮಾತಾನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಬಸವರಾಜ ಮಲಕೂಡ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ಪ್ರಾಸ್ತಾವಿಕ ಮಾತಾನಾಡಿದರು. ಶ್ರೀ ಖೆಮಲಿಂಗ ಶೆಟ್ಟಿ ಉಪಾಧ್ಯಕ್ಷರು ಸಹಕಾರ ಭಾರತಿ, ಜಿಲ್ಲಾ ಸಹಕಾರ ಭಾರತೀಯ ಕಾರ್ಯದರ್ಶಿಯಾದ ಶ್ರೀ ಎಸ್.ಎಸ್. ಪಾಟೀಲ ಇವರು ಸ್ವಾಗತಿಸಿದರು. ಕೊನೆಯಲ್ಲಿ ಪ್ರದೀಪ ದಾಬಶೆಟ್ಟಿ ಇವರು ಸಭೆಯಲ್ಲಿದ್ದವರಿಗೆ ವಂದನೆಗಳನ್ನು ಸಲ್ಲಿಸಿದರು. ಶ್ರೀ ಖೆಮಲಿಂಗ ಶೆಟಗಾರ ಉಪಾಧ್ಯಕ್ಷರು, ಸಹಕಾರ ಭಾರತಿ ಇವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ.ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 | 100/- |
| 2 | The Karnataka Souharda Sahakari Act 1997 | 75/- |
| 3 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/- |
| 4 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/- |
| 5 | ಸೌಹಾರ್ದ ಪತ್ತಿನ ಸಹಕಾರಿ ಮಾದರಿ ಉಪವಿಧಿ | 25/- |
| 6 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/- |
| 7 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/- |
| 8 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/- |
| 9 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/- |
| 10 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಾಕರ ಕೈಪಿಡಿ | 15/- |
| 11 | ಕರ್ನಾಟಕ ರಾಜ್ಯದ ವಿಶಿಷ್ಠ ಸಹಕಾರ ಸಂಸ್ಥೆಗಳು | 40/- |
| 12 | Special Co-opearative Societies of Karnataka | 25/- |
| 13 | ಇ-ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/- |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/- |
| 15 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/- |
| 16 | Karnataka High Court Judgements Related to Co-operative Sector | 200/- |
| 17 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/- |
| 18 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಭಾಗ - 2 | 100/- |
| 19 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/- |
| 20 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀಪುಗಳು | 120/- |
| 21 | Karnataka High Court Judgements Related to Co-operative Sector Vol -2 | 400/- |
| 22 | Supreme Court Judgement Related to Co-operative Sector Volume - 1 | 150/- |
| 23 | Supreme Court Judgement Related to Co-operative Sector Volume - 2 | 500/- |
| 24 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/- |
| 25 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/- |
| 26 | ವಿಷಯ-01 - ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/- |
| 27 | ವಿಷಯ-02 - ಸಹಕಾರಿ ಪತ್ತು ನಿರ್ವಹಣೆ | 250/- |
| 28 | ವಿಷಯ-03 - ಬ್ಯಾಂಕಿಂಗ್ ಮೂಲ ಮಾಹಿತಿ | 250/- |
| 29 | ವಿಷಯ-04 - ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/- |
| 30 | ವಿಷಯ-05 - ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/- |
| 31 | ವಿಷಯ-06 - ಮಾಹಿತಿ ತಂತ್ರಜ್ಞಾನ | 250/- |
| 32 | ಸಾಲ ವಸೂಲಾತಿ ಹಾಗೂ ದಾಖಲಾತಿಗಳ ನಿರ್ವಹಣೆ ಮತ್ತು ಭಾರತದ ಸಂವಿಧಾನ, ಅರ್ಥ, ಆಶಯ ಹಾಗೂ ಪ್ರಮುಖ ಅಂಶಗಳು | 150/- |

# ಸಂಭ್ರಮದ ಗಣರಾಜ್ಯೋತ್ಸವ ಆಚರಣೆ ವರದಿಗಳು

## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 72ನೇ ಗಣರಾಜ್ಯೋತ್ಸವ ದಿನಾಚರಣೆ.

72ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ಪ್ರಾಂತೀಯ ಕಛೇರಿ, ಕಲಬುರಗಿ ಪ್ರಾಂತೀಯ ಕಛೇರಿ, ಮೈಸೂರು ಪ್ರಾಂತೀಯ ಕಛೇರಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



ಕೇಂದ್ರ ಕಛೇರಿ



ಕಲಬುರಗಿ ಪ್ರಾಂತೀಯ ಕಛೇರಿ



ಮೈಸೂರು ಪ್ರಾಂತೀಯ ಕಛೇರಿ



ಬೆಳಗಾವಿ ಪ್ರಾಂತೀಯ ಕಛೇರಿ



ಬೀದರ ಜಿಲ್ಲಾ ಸಂಪರ್ಕ ಕಛೇರಿ



ಕೋಲಾರ ಜಿಲ್ಲಾ ಸಂಪರ್ಕ ಕಛೇರಿ



ಚಿತ್ರದುರ್ಗ : ಶ್ರೀ ಕನ್ಯಾಕ ಸೌಹಾರ್ದ ಸಹಕಾರಿ ನಿ ಹಿರಿಯೂರು ಇದರ ವತಿಯಿಂದ ನಡೆದ 72ನೇ ಗಣರಾಜ್ಯೋತ್ಸವನ್ನು ಆಚರಿಸಲಾಯಿತು.



ಬಾಗಲಕೋಟ ಜಿಲ್ಲಾ ಸಂಪರ್ಕ ಕಛೇರಿ

# ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ 72ನೇ ಗಣರಾಜ್ಯೋತ್ಸವ ದಿನಾಚರಣೆ



**ಬೆಳಗಾವಿ :** ದಿನಾಂಕ 26.01.2021 ರಂದು ಶ್ರೀ ಧನಲಕ್ಷ್ಮೀ ಅರ್ಬನ್ ಸೌಹಾರ್ದ ಸಹಕಾರಿ ನಿ., ಹುಕ್ಕೇರಿಯಲ್ಲಿ 72ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೇರವೇರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮರಿಯಾಲ :** ಶ್ರೀ ಮುರುಘರಾಜೇಂದ್ರ ಸ್ವಾಮಿ ಸೌಹಾರ್ದ ಸಹಕಾರಿ ನಿ., ಮರಿಯಾಲ ಕಛೇರಿಯಲ್ಲಿ 72ನೇ ಗಣರಾಜೋತ್ಸವ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ & ಶ್ರೀ ಡಾ. ರಾಜೇಂದ್ರ ಪ್ರಸಾದ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ನಂಜುಂಡಸ್ವಾಮಿ, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಿಇಓ ಹಾಜರಿದ್ದರು.



**ಚಾಮರಾಜನಗರ :** ಶ್ರೀ ಪಾರ್ವತಿ ಸೌಹಾರ್ದ ಸಹಕಾರಿ ನಿ., ಕುದೇರು ಕಛೇರಿಯಲ್ಲಿ 72ನೇ ಗಣರಾಜೋತ್ಸವ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ & ಮಹಾತ್ಮ ಗಾಂಧಿಜೀ ರವರ ರವರ ಭಾವಚಿತ್ರಕ್ಕೆ ಪೂಜೆ ಮಾಡುವ ಮೂಲಕ ಗೌರವ ಸಲ್ಲಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹದೇವಸ್ವಾಮಿ, ನಿರ್ದೇಶಕರು ಮತ್ತು ಸಿಇಓ ಹಾಜರಿದ್ದರು.



**ಚಿತ್ರದುರ್ಗ :** ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ಲಿ., ಚಿತ್ರದುರ್ಗ ಸಹಕಾರಿಯಲ್ಲಿ 72ನೇ ಗಣರಾಜ್ಯೋತ್ಸವ ಧ್ವಜಾರೋಹಣವನ್ನು ಬ್ಯಾಂಕಿನ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್. ಲಕ್ಷ್ಮೀ ಕಾಂತ ರೆಡ್ಡಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ :** ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ ಕಛೇರಿಯಲ್ಲಿ 72ನೇ ಗಣರಾಜೋತ್ಸವ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ & ಮಹಾತ್ಮ ಗಾಂಧಿಜೀ ರವರ ರವರ ಭಾವಚಿತ್ರಕ್ಕೆ ಪೂಜೆ ಮಾಡುವ ಮೂಲಕ ಗೌರವ ಸಲ್ಲಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗಯ್ಯ, ನಿರ್ದೇಶಕರು ಸಿಇಓ ಶ್ರೀಮತಿ ಪೂರ್ಣಿಮಾ, ಸಿಬ್ಬಂದಿಗಳು ಹಾಜರಿದ್ದರು.



**ರಾಯಚೂರು :** ಶ್ರೀ ಗಂಗೋತ್ರಿ ಪಟ್ಟಣ ಸೌಹಾರ್ದ ಸಹಕಾರಿ ನಿಯಮಿತ ಸಿಂಧನೂರು ಜಿಲ್ಲಾ ರಾಯಚೂರು ಸಹಕಾರಿಯಲ್ಲಿ ದಿನಾಂಕ 26/01/2021 ರಂದು ಸಹಕಾರಿಯ ವತಿಯಿಂದ 72ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವಿರೇಶ ಅಂಗಡಿ ನೇರವೆರಿಸಿದರು. ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕ ಮಂಡಳಿಯವರು ಹಾಗೂ ಪಿಗ್ಮಿ ಸಂಗ್ರಹಕಾರರು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು



**ಬಾಗಲಕೋಟ :** ಶ್ರೀ ವೀರರುದ್ರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಸಸಾಲಟ್ಟಿ 72ನೆಯ ಗಣರಾಜ್ಯೋತ್ಸವ ದಿನದ ಧ್ವಜಾರೋಹಣವನ್ನು ಸಹಕಾರಿಯ ನಿರ್ದೇಶಕರಾದ ಅಂತ ಕಲ್ಲಪ್ಪ ಪ ಮೂರಾಬಟ್ಟಿ ಇವರು ನೆರವೇರಿಸಿದರು ಹಾಗೂ ಸಹಕಾರಿಯ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



ಪೋತ್ನಾಳ್ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದಲ್ಲಿ 72ನೇ ಗಣರಾಜ್ಯೋತ್ಸವದ ನಿಮಿತ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಮೂರ್ತಯ್ಯಾ ಶೆಟ್ಟಿ ಕೆ ಇವರು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ವಿಠೋಬಯ ಶೆಟ್ಟಿ ಪಿ. ಬ್ರಹ್ಮಾನಂದ ರೆಡ್ಡಿ. ಅಮರೇಶ್. ಸಹಕಾರಿಯ ಸಿಬ್ಬಂದಿ ಮತ್ತು ಪಿಗ್ಮಿ ಏಜೆಂಟರು ಭಾಗವಹಿಸಿದ್ದರು.



**ಕೊಪ್ಪಳ :** ದಿನಾಂಕ 26–01–2021 ರಂದು ಋಷಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಯಿಂದ 72ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಆನಂದ ಕೊಟ್ರಪ್ಪ ಅಕ್ಕಿ, ಉಪಾಧ್ಯಕ್ಷರಾದ ಶ್ರೀ ಸೋಮಶೇಖರ ಸಿಂಗನಾಳ, ನಿರ್ದೇಶಕರಾದ ಶ್ರೀ ಸಿದ್ದು ಮಸ್ಕಿ, ಶ್ರೀ ಶರಣಪ್ಪ ಸಿದ್ರಾಂಪೂರ ಮತ್ತು ಶ್ರೀ ಚಂದ್ರು ಕಾಟವಾ, ಸಹಕಾರಿಯ ಸದಸ್ಯರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



**ಕೋಲಾರ :** ದಿನಾಂಕ 01.01.2021 ರಂದು ಸ್ವರ್ಣವಿಲಾಸ್ ಸೌಹಾರ್ದ ಸಹಕಾರಿ ನಿ., ಕೆಜಿಎಫ್ ವತಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಾ. ಅಶೋಕ್ ವರ್ಧನ್, ಉಪಾಧ್ಯಕ್ಷರಾದ ಶ್ರೀ ರಮೇಶ್ ಶರ್ಮ ಹಾಗೂ ನಿರ್ದೇಶಕರು ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

**ಚಾಮರಾಜನಗರ :** ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಕಛೇರಿಯಲ್ಲಿ 72ನೇ ಗಣರಾಜೋತ್ಸವ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಲಾಗಿದೆ. ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ರೇಣುಕಾ ರವರು, ಮತ್ತು ಸಿಇಓರಾದ ಕು. ಮಾನಸ ಹಾಜರಿದ್ದರು.

**ಗದಗ :** ಭಾಗ್ಯಲಕ್ಷ್ಮೀ ವಿವಿದೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ 72ನೇ ಗಣರಾಜೋತ್ಸವ ಕಾರ್ಯಕ್ರಮದ ಧ್ವಜಾರೋಹಣವನು ಸಹಕಾರಿಯ ನಿರ್ದೇಶಕಿಯರಾದ ಶ್ರೀಮತಿ ಎಸ ವ್ಹಿ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ದಿನಾಂಕ 26/1/2021 ರಂದು ಸಹಕಾರಿಯ ಅಧ್ಯಕ್ಷರಾದ ಕೆ ಎಸ ಹೊಸಮಠ ಅವರು ನೇರವೇರಿಸಿದರರು ಈ ಸಂದರ್ಭದಲ್ಲಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು.



**ಕೊಪ್ಪಳ :** ಶ್ರೀ ವೀರರಾಣಿ ಕಿತ್ತೂರು ಚೆನ್ನಮ್ಮ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ವತಿಯಂದ ದಿನಾಂಕ 26–01–2021 ರಂದು 72ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಧ್ವಜಾರೋಹಣದ ಅಧ್ಯಕ್ಷತೆಯನ್ನು ಶ್ರೀ ಮಾರುತೇಶ ಜಾನ ಶರಭಯ್ಯ ರಾವಳಮಠ, ಶ್ರೀ ಶರಣಪ್ಪ ಹ್ಯಾಟಿ, ಸಹಕಾರಿಯ ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಪಿಗ್ಮಿ ಏಜೆಂಟರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶ್ವಸಿಗೊಳಿಸಿದರು.



**ಚಿಕ್ಕೋಡಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯಲ್ಲಿ 72ನೇ ಗಣರಾಜ್ಯೋತ್ಸವ ಸಮಾರಂಭವು ಮಂಗಳವಾರ ದಿನಾಂಕ 26.01.2020 ರಂದು ಬೆಳ್ಳಿಗ್ಗೆ 8.00 ಗಂಟೆಗೆ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ರಮೇಶ್ ಗ ಕುಡತರಕರ, ಇವರು ಪೂಜಾ ಕಾರ್ಯಕ್ರಮ ನೇರವೇರಿಸಿ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಜಗದೀಶ್ ಎಮ್ ಕವಟಗಿಮಠ, ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರು ಹಾಘೂ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಬಿ ಮೂಗೇರಿ, ನಿರ್ದೇಶಕರಾದ ಶ್ರೀ ಸಂಜಯ ಗಿಡವೀರ, ಶ್ರೀ ಯರ್‍ರಿಸ್ವಾಮಿಗೌಡ ಇಟಗೋನಿ, ಶ್ರೀ ಲೋಕಪ್ಪಾ ದುಂಬಾಳೀ, ಶ್ರೀ ಹೇಮಂತ ಹಂಪಣ್ಣವರ, ಶ್ರೀ ಪ್ರವೀಣ ಕಾಂಬಳೆ, ಶ್ರೀ ಶ್ರೀಧರ ದೀಕ್ಷಿತ್, ಶ್ರೀ ರಾಜಕುಮಾರ ಹಿರೇಮಠ, ಶ್ರೀ ಚಂದ್ರಕಾಂತ ಬುರಡ, ಶ್ರೀ ಮನೋಜಕುಮಾರ್ ಸಮ್ಮತಶೆಟ್ಟಿ, ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಮ್ ಬಿ. ಬಡಿಗೇರ ಹಾಗೂ ಸಹಕಾರಿಯ ಸಲಹಾ ಸಮಿತಿ ಸದಸ್ಯರು ಹಾಗೂ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತಿಯಲ್ಲಿ ನಡೆಯಿತು.



**ಕೊಪ್ಪಳ :** ಡಾ॥ ಅಬ್ದುಲ್ ಕಲಾಂ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ವತಿಯಂದ ದಿನಾಂಕ 26.01.2021 ರಂದು ಸಹಕಾರಿಯ ಆವರಣದಲ್ಲಿ 72ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.



**ಕೊಪ್ಪಳ :** ಶ್ರೀ ಶಿವಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ಕುಷ್ಟಗಿ, ಜಿ: ಕೊಪ್ಪಳ ಸಹಕಾರಿಯ ವತಿಯಂದ ದಿನಾಂಕ 26.01.2021 ರಂದು ಸಹಕಾರಿಯ ಆವರಣದಲ್ಲಿ 72ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.



**ಕೊಪ್ಪಳ :** ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿ ನಿ, ಹುಲಿಗಿ, ಕೊಪ್ಪಳ ಸಹಕಾರಿಯ ವತಿಯಂದ ದಿನಾಂಕ 26–01–2021 ರಂದು 72ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಸಹಕಾರಿಯ ಸದಸ್ಯರಿಗೆ ದೈಹಿಕ, ಮಾನಸಿಕ ಆರೋಗ್ಯಕ್ಕಾಗಿ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲಾಗಿತು. ಕ್ರಿಕೆಟ್ ಪಂದ್ಯಾವಳಿಯ ಕಾರ್ಯಕ್ರಮದಲ್ಲಿ ಸಹಕಾರಿಯ ಪದಾಧಿಕಾರಿಗಳು, ಆಡಳಿತ ಮಂಡಳಿ ನಿರ್ದೇಶಕರು, ಸಹಕಾರಿಯ ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಪಿಗ್ಮಿ ಏಜೆಂಟರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶ್ವಸಿಗೊಳಿಸಿದರು.



**ಮಂಡ್ಯ :** ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ವತಿಯಿಂದ ನಡೆದ 104ನೇ "ಮನೆ ಮನೆಗೆ ಸೌಹಾರ್ದ ಬಸವ ಜ್ಯೋತಿ" ಕಾರ್ಯಕ್ರಮದ ದಿವ್ಯ ಸಾನಿಧ್ಯ ಮತ್ತು ಉದ್ಘಾಟನೆಯನ್ನು ಪರಮಪೂಜ್ಯ ನಿ.ಪ್ರ.ಸ್ವ. ಶ್ರೀ ಶ್ರೀ ಇಮ್ಮಡಿ ಸದಾಶಿವಸ್ವಾಮಿಗಳು, ತೋಂಟದಾರ್ಯ ಮಠ, ದುಡೇನಹಳ್ಳಿ, ಮದ್ದೂರು ತಾಲ್ಲೂಕು ಇವರು ವಹಿಸಿದ್ದರು. ಶರಣ ಶಿವಕುಮಾರ್, ಆರ್ ಸಂಶೋಧನಾ ವಿದ್ಯಾರ್ಥಿ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಯಾಗಿ ಶರಣ ಪುಟ್ಟಬುದ್ದಿ, ಶರಣ ರುದ್ರಸ್ವಾಮಿ ಮತ್ತು ಶರಣ ಎಸ್.ಎಂ ಮೋಹನ್ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಶರಣ ಎಸ್. ನಾಗರಾಜು ವಹಿಸಿದ್ದರು.

# ಉದ್ಘಾಟನೆ



**ತುಮಕೂರು** : ದಿನಾಂಕ 23.01.2021 ರಂದು ತುಮಕೂರು ಜಿಲ್ಲೆಯ ಕಲ್ಪತರು ಸೌಹಾರ್ದ ಸಹಕಾರಿ ನಿ., ಕೊರಟಗೆರೆ ಇದರ ತುಮಕೂರು ಶಾಖಾ ಕಛೇರಿ ಉದ್ಘಾಟನಾ ಕಾರ್ಯಕ್ರಮವನ್ನು ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರು ನೆರವೇರಿಸಿದರು. ಕಾರ್ಯಕ್ರಮದ ದಿವ್ಯಸಾನಿದ್ಯವನ್ನು ಶ್ರೀ ಶ್ರೀ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತುಮಕೂರಿನ ಶಾಸಕರಾದ ಶ್ರೀ ಜಿ.ಬಿ. ಗಣೇಶ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯನವರು, ಮಾಜಿ ಶಾಸಕರಾದ ಶ್ರೀ ಪಿ.ಆರ್. ಸುಧಾಕರ್ ಲಾಲ್ ರವರು, ಕಲ್ಪತರು ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಕುಮಾರ್ ರವರು ಉಪಸ್ಥಿತರಿದ್ದರು. ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ರವರು ಭಾಗವಹಿಸಿದ್ದರು.



**ಕಲಬುರಗಿ** : ದಿನಾಂಕ 06.01.2021 ರಂದು ಶ್ರೀ ಧರ್ಮರಾಯ ಸೌಹಾರ್ದ ಪತ್ತಿನ ಸಹಕಾರಿ ನಿ., ಪಡಸಾವಳಿ ಇದರ ಉದ್ಘಾಟನಾ ಕಾರ್ಯಕ್ರಮದ ಉದ್ಘಾಟರಾಗಿ ಶ್ರೀ ಷ. ಬ್ರ ಡಾ. ವಿದ್ಯಾವಾರಿದಿ. ಮಲ್ಲಿಕಾರ್ಜುನ ಶಿವಾಚಾರ್ಯರು ನೇರವೆರಿಸಿದರು ಸಾನಿದ್ಯ ಶ್ರೀ ಷ. ಬ್ರ. ಶಂಬುಲಿಂಗ ಶಿವಾಚಾರ್ಯರು ವಹಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಭಾಗವಹಿಸಿದರು ಸಹಕಾರಿಯ ಅಧ್ಯಕ್ಷರಾದ ಶ್ರೀ ಅನಿಲಕುಮಾರ ಎಸ್ ದುಲಂಗೆ, ಅಧ್ಯಕ್ಷತೆ ವಹಿಸಿದರು.



**ಮಂಡ್ಯ** : ನಾಗಮಂಗಲ ತಾಲ್ಲೂಕು ಶಿಕ್ಷಣ ಇಲಾಖಾ ಪದವಿ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಸುರೇಶ್ ಗೌಡ, ಮಾನ್ಯ ಶಾಸಕರು, ನಾಗಮಂಗಲ, ಶ್ರೀ ಕೆ.ಟಿ ಶ್ರೀಕಂಠೇಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು, ಆಡಳಿತ ಮಂಡಲಿ ಸದಸ್ಯರು ಹಾಜರಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಸ್ವಾಮಿ ರವರು ವಹಿಸಿದ್ದರು.



**ಕಾರವಾರ** : ಕಾರವಾರ ತಾಲೂಕಿನ ಸದಾಶಿವಗಡದಲ್ಲಿ ನೂತನವಾಗಿ ಆರಂಭವಾದ ಶ್ರೀ ದುರ್ಗಾ ಸೌಹಾರ್ದ ಸಹಕಾರಿ ನಿಯಮಿತದ ಜನರಲ್ ಸೂಪರ್ ಮಾರ್ಕೆಟ್‌ನ್ನು ಶ್ರೀ ಭಾವೇಶಾನಂದ ಸ್ವಾಮಿಜಿ ಅವರ ನೇತೃತ್ವದಲ್ಲಿ ಉದ್ಘಾಟಿಸಿ ಅವರು ಕೆಲವು ಹಿತ ವಚನಗಳನ್ನು ಬೋಧಿಸಿದರು. ಮುಖ್ಯ ಅತಿಥಿಯಾಗಿ ಶ್ರೀಮತಿ ರೂಪಾಲಿ ನಾಯ್ಕ ರವರು ಉಪಸ್ಥತರಿದ್ದು ಗ್ರಾಮ ಅಭಿವೃದ್ದಿಯ ಕುರಿತು ಮಾತನಾಡಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ನಿರ್ದೇಶಕರಾದ ಶ್ರೀಮತಿ ಸರಸ್ವತಿ ರವರು ಅಧ್ಯಕ್ಷತೆಯ ಸ್ಥಾನವನ್ನು ಹೊಂದಿದ್ದು ಸಹಕಾರಿಯ ಬಗ್ಗೆ ಮಾತನಾಡಿದರು. ಹಾಗೂ ಈ ಕಾರ್ಯಕ್ರಮದಲ್ಲಿ ಗೌರವಾನ್ವಿತ ಅಥಿತಿಗಳು, ಸಹಕಾರಿಯ ಸದಸ್ಯರು, ಸಹಕಾರಿಯ ಅಧ್ಯಕ್ಷರಾದ ಶ್ರೀ. ಪುತ್ತು ದತ್ತಾ ಕಲ್ಗುಟಕರ ರವರು, ಸಹಕರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ. ಲಿಂಗರಾಜ ಪುತ್ತು ಕಲ್ಗುಟಕರ, ಹಾಗೂ ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಚಿಕ್ಕೋಡಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯಲ್ಲಿ ಇದರ ಪ್ರಧಾನ ಕಛೇರಿ ನೂತನ ಕಟ್ಟಡ ಹಾಗೂ ಸಭಾಭವನ ಉದ್ಘಾಟನಾ ಸಮಾರಂಭವು ದಿನಾಂಕ 16.01.2021 ರಂದು ಶ್ರೀ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಸುತ್ತೂರು ಮಠ, ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಮ.ನಿ.ಪ್ರ ಜಗದ್ಗುರು ಪಂಚಮಶಿವಲಿಂಗೇಶ್ವರ ಮಹಾಸ್ವಾಮಿಗಳು, ಸಿದ್ದಸಂಸ್ಥಾನಮಠ, ನಿಡಸೋಸಿ, ಶ್ರೀ ಮ.ನ.ಪ್ರ ಜಗದ್ಗುರು ಅಲ್ಲಮಪ್ರಭು ಮಹಾಸ್ವಾಮಿಗಳು, ಸಿದ್ಧಸಂಸ್ಥಾನ ಮಠ, ಚಿಂಚಣಿ ಶ್ರೀ ಮ.ನಿಪ್ರ. ಸಂಪಾದನ ಮಹಾಸ್ವಾಮಿಗಳು, ಶ್ರೀ ಸಂಪಾದನ ಚರಮೂರ್ತಿಮಠ, ಚಿಕ್ಕೂಡಿ, ಇವರಗಳು ದಿವ್ಯ ಸಾನಿಧ್ಯ ವಹಿಸಿದರು. ಡಾ॥ ಪ್ರಭಾಕರ ಕೋರೆ, ಕಾರ್ಯಧ್ಯಕ್ಷರು, ಕೆ.ಎಲ್.ಇ ಸಂಸ್ಥೆ, ಬೆಳಗಾವಿ. ಶ್ರೀಮತಿ ಶಶಿಕಲಾ ಅ ಜೊಲ್ಲೆ, ಮಾನ್ಯ ಸಚಿವರು, ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಶ್ರೀ ಅಣ್ಣಾಸಾಹೇಬ ಶಂ ಜೊಲ್ಲೆ, ಮಾನ್ಯ ಲೋಕಸಭಾ ಸದಸ್ಯರು, ಚಿಕ್ಕೋಡಿ, ಶ್ರೀ ಮಹಾಂತೇಶ ಮ ಕವಟಗಿಮಠ, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಪರಿಷತ್ ಬೆಂಗಳೂರು, ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಸಹಕಾರಿ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ್ ಎಮ್ ಕವಟಗಿಮಠ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಸಹಕಾರಿ ನಿರ್ದೇಶಕರ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತಿಯಲ್ಲಿ ನಡೆಯಿತು.



## ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನ ಅಧ್ಯಕ್ಷರಾಗಿ ಶ್ರೀ ವಿಶ್ವನಾಥ ಚ ಹಿರೇಮಠ ಪುನರಾಯ್ಕೆ

**ಬಳ್ಳಾರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ ಇವರು ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಮತ್ತೊಮ್ಮೆ ಪುನರಾಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.



**ದಕ್ಷಿಣ ಕನ್ನಡ :** ಶ್ರೀ ಪಂಚಶಕ್ತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ . (ನಿ).ಮೂಡಬಿದಿರೆ ಇವರಿಗೆ ದಕ್ಷಿಣ ಕನ್ನಡ ಜಿಲ್ಲಾ "ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ"ಸಹಕಾರಿಯು 2020 ನೇ ಸಾಲಿನಲ್ಲಿ ಸ್ವ – ಸಹಾಯ ತಂಡದ ಸದಸ್ಯರ ಮಕ್ಕಳಿಗೆ ಎಸ್.ಎಸ್.ಎಲ್.ಸಿ ಯಲ್ಲಿ 85% ಗಿಂತ ಜಾಸ್ತಿ ಬಂದ 4 ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಸಹಕಾರಿಯ ಸಾಮಾನ್ಯ ಸಭೆಯಲ್ಲಿ 9 ಜನ ಸದಸ್ಯರನ್ನು ಉತ್ತಮ ಗ್ರಾಹಕರೆಂದು ಸನ್ಮಾನಿಸಿತು. ಸ್ಫೂರ್ತಿ ಬಿನ್ನ ಮಕ್ಕಳ ಶಾಲೆಗೆ ಧನ ಸಹಾಯ, ಸ್ವ ಸಹಾಯ ತಂಡದ ಸದಸ್ಯರಾದ ಶ್ರೀ ಬಾಬು ಪರವ ಅಂಗ ವೈಪಲ್ಯದಿಂದ ಬಳಲುತ್ತಿರುವ ಇವರಿಗೆ ಶೌಚಾಲಯದ ಕರ್ಮಾಡ್ ನ್ನು ನೀಡಿತ್ತು. ಸಹಕಾರಿಯಿಂದ 600 ಜನ ಸದಸ್ಯರಿಗೆ ಉಚಿತ ಆಯುಷ್ಮಾನ್ ಕಾರ್ಡನ್ನು ನೀಡಿತ್ತು ಸಹಕಾರಿ ಮತ್ತು ಕೆ.ಎಂ.ಸಿ ಅತ್ತಾವರ ಇವರ ಆಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಮತ್ತು ಉಚಿತ ಕನ್ನಡಕ ವಿತರಣೆ ಮಾಡಲಾಗಿತ್ತು. ಸಹಕಾರಿಯ ಸ್ವ ಸಹಾಯ ತಂಡದ ಸದಸ್ಯರ 4 ಮನೆಗೆ ಉಚಿತವಾಗಿ ಶೌಚಾಲಯವನ್ನು ನಿರ್ಮಿಸಲಾಗಿತು. ಸಹಕಾರಿಯು ಮೂಡಬಿದಿರೆ ಕೇಂದ್ರ ಕಚೇರಿಯಲ್ಲಿ ಇ–ಸ್ಟಾಂಪಿಂಗ್ ಸೇವೆ, ಪಾನ್ ಕಾರ್ಡ್, ಆರ್.ಟಿ.ಸಿ, ಎಂ.ಆರ್ ಸೇರಿದಂತೆ ಸರಕಾರದ ಹಲವಾರು ಸೇವೆಗಳನ್ನು ನೀಡುತ್ತಿದೆ. ಸಹಕಾರಿಯ ಒಟ್ಟಾರೆ ಚಟುವಟಿಕೆಯನ್ನು ಪರಿಗಣಿಸಿ 2019–20 ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲೆಯ " ಉತ್ತಮ ಸೌಹಾರ್ದ ಸಹಕಾರಿ " ಎಂಬ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದೆ.



## ಶಾಖೆ ಉದ್ಘಾಟನೆ

**ಉಡುಪಿ :** ಕಾಂಚನ್ ಸೌಹಾರ್ದ ಕೋ ಆಪರೇಟಿವ್ ಲಿ., ಸಹಕಾರಿಯ ಪಡುಬಿದ್ರಿ ಶಾಖಾ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಇವರು ಭಾಗವಹಿಸಿದರು.







**ಬೆಂಗಳೂರು :** ಶ್ರೀ ಯಶಸ್ವಿನಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ 6ನೇ ವಾರ್ಷಿಕ ವಿಶೇಷ ಮಹಾಸಭೆಯಲ್ಲಿ ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಹಾಗೂ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಎಸ್.ಆರ್. ಪಾಟೀಲ್ ರವರು ಭಾಗವಹಿಸಿ, ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹಿಸಿದರು.



**ಮಂಡ್ಯ :** ಮಂಡ್ಯ ತಾಲ್ಲೂಕು ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಸಹಕಾರಿಯ ಉದ್ಘಾಟನೆಯನ್ನು ಶ್ರೀ ಎಂ. ಶ್ರೀನಿವಾಸ್, ಮಾನ್ಯ ಶಾಸಕರು, ಮಂಡ್ಯ ಇವರು ನೆರವೇರಿಸಿದರು. ವೇದಿಕೆ ಮೇಲೆ ಶ್ರೀ ಸಿ. ಅಶ್ವಥ್, ಮಾನ್ಯ ನಿರ್ದೇಶಕರು, ಅಪೆಕ್ಸ್ ಬ್ಯಾಂಕ್, ಬೆಂಗಳೂರು, ಶ್ರೀಮತಿ ಪುಷ್ಪಲತಾ ಆನಂದ, ಮಾನ್ಯ ಅಧ್ಯಕ್ಷರು, ರೈತರ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ನಿ., ಮಂಡ್ಯ ಇವರು ಹಾಜರಿದ್ದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎ.ಸಿ ರಮೇಶ್, ಸಹಕಾರಿ ಅಧ್ಯಕ್ಷರು ವಹಿಸಿದ್ದರು. ಇದೇ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಎಂ. ಶಂಕರೇಗೌಡ ಮತ್ತು ಆಡಳಿತ ಮಂಡಳಿ ಸದಸ್ಯರು ಸಹಕಾರಿಯ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಗೊಳಿಸಿದರು.



**ಕೊಪ್ಪಳ :** ದಿನಾಂಕ 28–01–2021 ರಂದು ಶ್ರೀ ಶ್ರೀ ಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ನೂತನ ಶಾಖೆಯನ್ನು ಕೊಪ್ಪಳ ಜಿಲ್ಲೆಯ ಅಳವಂಡಿ ಗ್ರಾಮದಲ್ಲಿ ಪ್ರಾರಂಭಿಸಲಾಯಿತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್ ರವರು ಶಾಖೆಯ ಉದ್ಘಾಟನೆಯನ್ನು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್.ಹೆಚ್, ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ, ಜಿಲ್ಲಾ ಸಂಯೋಜಕರಾದ ಶ್ರೀ ಪವನ ಉಪಸ್ಥಿತರಿದ್ದರು.ಈ ಸಂದರ್ಭದಲ್ಲಿ ಸಹಕಾರಿಯ ಪದಾಧಿಕಾರಿಗಳು, ಆಡಳಿತ ಮಂಡಳಿಯ ನಿರ್ದೇಶಕರು, ಸಹಕಾರಿಯ ಸದಸ್ಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ



ಶ್ರೀ ಗುರುಪಾದಪ್ಪ ಢಗೆ
ಅಧ್ಯಕ್ಷರು



ಶ್ರೀ ವಿಜಯನಂದ ಶೆಟ್ಟಿ
ಉಪಾಧ್ಯಕ್ಷರು

### ಯು.ಕೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಉತ್ತರ ಕನ್ನಡ



ಶ್ರೀ ಪ್ರಮೋದ್ ಹೆಗಡೆ
ಅಧ್ಯಕ್ಷರು



ಶ್ರೀ ಸುಬ್ಬಯ್ಯ ಧೋಗಳೆ
ಉಪಾಧ್ಯಕ್ಷರು

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಬೆಂಗಳೂರು** : ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿಯಲ್ಲಿ ದಿನಾಂಕ 01.01.2020 ರಂದು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಹಕಾರಿಗಳಿಗೆ ಸಹಿಯನ್ನು ವಿತರಿಸಲಾಯಿತು.




**ಬೆಂಗಳೂರು** : ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ, ಬೆಂಗಳೂರು ಕೇಂದ್ರ ಕಛೇರಿ ಬೈರತಿ ಶಾಖೆ ಮತ್ತು ವರ್ತೂರು ಶಾಖೆಯಲ್ಲಿ ದಿನಾಂಕ 01.01.2021 ರಂದು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀಯುತ. ಎಂ.ಮುನಿರೆಡ್ಡಿ ರವರು ಧ್ವಜಾರೋಹಣ ನೆರವೇರಿಸಿದರು. ಸಹಕರಿಯ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.



**ಕೊಡಗು** : ಕೊಡಗು ಸೌಹಾರ್ದ ಪತ್ತಿನ ಸಹಕಾರಿ ನಿ., ಮಡಿಕೇರಿ ಸಹಕಾರಿಯಲ್ಲಿ ದಿನಾಂಕ 01.01.2020 ರಂದು ಸೌಹಾರ್ದ ಸಹಕಾರಿಯ ದಿನಾಚರಣೆಯ ಧ್ವಜಾರೋಹಣವನ್ನು ಶ್ರೀ ಕೊಂಗಾಂಡ, ಯಸ್, ದೇವಯ್ಯ ಇವರಿಂದ ನೇರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಉಪಸ್ಥಿತರಿದ್ದರು.



**ಚಿತ್ರದುರ್ಗ** : ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ ಚಿತ್ರದುರ್ಗದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಪ್ರಯುಕ್ತ ಧ್ವಜಾರೋಹಣವನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ಎಂ.ಹೆಚ್. ಪ್ರಾಣೇಶ್ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀಯುತ ಟಿ. ಬದ್ರಿನಾಥ್ ಮತ್ತು ಶ್ರೀಮತಿ ಎಲ್.ಆರ್. ಅನಿತರಾಜ್ ರವರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಎಸ್. ಶೈಲಜ ರವರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ರಾಯಚೂರು** : ಆರ್ ಡಿ ಸೋನಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನವನ್ನು ಆಚರಿಸಲಾಯಿತು.



ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಕಛೇರಿಯಲ್ಲಿ "ಸ್ವಾಮಿ ವಿವೇಕಾನಂದರ" ಜಯಂತಿ ಅಂಗವಾಗಿ ಅಧ್ಯಕ್ಷರು, ನಿರ್ದೇಶಕರು, ಸಿಇಒ ಮತ್ತು ಪಿಗ್ಮಿ ಸಂಗ್ರಹಕಾರರು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಆಚರಿಸಲಾಯಿತು.



**ದಕ್ಷಿಣ ಕನ್ನಡ :** ಸ್ವಸ್ತಿಕ್ ಸೌಹಾರ್ದ ಸಹಕಾರಿ ನಿ. ಇದರ "ಡಿಜಿಟಲ್ ಸೇವಾ ಕೇಂದ್ರದ" ಉದ್ಘಾಟನಾ ಸಮಾರಂಭ ದಿನಾಂಕ: 15–01–2021ರ ಶುಕ್ರವಾರದಂದು ಸಂಸ್ಥೆಯ ಕಚೇರಿಯಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವಲ್ಸರಾಜ್ ಎ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀ ಡಿ.ವೇದವ್ಯಾಸ ಕಾಮತ್, ಮಂಗಳೂರು ಮೇಯರ್ ಶ್ರೀ ದಿವಾಕರ್ ಪಾಂಡೇಶ್ವರ್, ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ನಿ. ಇದರ ದಕ್ಷಿಣ ಕನ್ನಡ ಜಿಲ್ಲಾ ಸಂಯೋಜ–ಕರಾದ ಶ್ರೀ ಗುರುಪ್ರಸಾದ್ ಬಂಗೇರ, ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರು ಶ್ರೀ ವಿಜಯ ಕುಮಾರ್ ಶೆಟ್ಟಿ, ಸ್ಥಳೀಯ ಕಾರ್ಪೋರೇಟರ್ ಶ್ರೀಮತಿ ಶೋಭಾ ಪೂಜಾರಿ, ಶ್ರೀ ವಾಸುದೇವ ಕೊಟ್ಟಾರಿ ಮತ್ತು ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ನಿರ್ದೇಶಕರಾದ ಶ್ರೀ ಕೆ.ಪಿ ಬಾಲಚಂದ್ರ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಶ್ರೀ ಹೇಮಚಂದ್ರ ವಂದನಾರ್ಪಣೆ ಮಾಡಿದರು.



**ಹಾವೇರಿ :** ಶ್ರೀ ಪುಟ್ಟರಾಜ ಗವಾಯಿ–ಸಚೇತನ ವಿವಿದ್ದೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಬಂಕಾಪೂರ ಸಹಕಾರಿಯಲ್ಲಿ ದಿನಾಂಕ 16.01.2021 ರಂದು ಸಹಕಾರಿಯ ವತಿಯಿಂದ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಅಯೋಧ್ಯ ಗೆ ರೂ.11500/– ಗಳನ್ನು ಅಧ್ಯಕ್ಷರಾದ ಶ್ರೀ ಹನುಮಂತಪ್ಪ.ಯು.ವ್ಹಿ ಉಪಾಧ್ಯಕ್ಷರಾದ ಶ್ರೀ ಸುಭಾಷಗೌಡ ಆರ್.ಪಾಟೀಲ ಹಾಗೂ ನಿರ್ದೇಶಕರಾದ ಡಾ॥ ಆರ್ ಎನ್ ಬೆಂಚಿಹಳ್ಳಿ ಶ್ರೀ ಸಿದ್ದಪ್ಪ ಎಮ್ ಜಿಗಳಿ ಶ್ರೀ ಬಸಯ್ಯ ಗೋ ಈಳಿಗೇರ ಮತ್ತು ಶ್ರೀಮತಿ,ರೇಖಾ ಹ ವಡ್ಡರ, ಶ್ರೀಮತಿ ಅನಿತಾ ಎಸ್ ಗಿರಿಯಪ್ಪಗೌಡರ, ಶ್ರೀಮತಿ,ರೇಣುಕಾ ಎಸ್ ನೆಲ್ಲೂರ, ಶ್ರೀಮತಿ ನಿರ್ಮಲಾ ಬಿ ಈಳಿಗೇರ ಶ್ರೀಮತಿ ಮಹಾದೇವಿ ಜಿ ಕಿವುಡನವರ ಶ್ರೀಮತಿ ಪ್ರೇಮಾ ಎಸ್ ಪಾಪೋಜಿ ಹಾಗೂ ಸಹಕಾರಿಯ ಸರ್ವ ಸಿಬ್ಬಂದಿ ವರ್ಗ ಉಪಸ್ಥಿತಿಯಲ್ಲಿ ಆರ್.ಎಸ್.ಎಸ್.ಸಂಘಟಕರಾದ ಡಾ॥ ಶಿವಬಸವ ಅಂಗಡಿ ಹಾಗೂ ಗಣ್ಯರ ಉಪಸ್ಥಿತಿಯಲ್ಲಿ ನೀಡಲಾಯಿತು.

## ಕ್ಯಾಲೆಂಡರ್ ಬಿಡುಗಡೆ



**ತುಮಕೂರು :** ಕಲ್ಪತರು ಪರಿವರ್ತನ ಸೌಹಾರ್ದ ಸಹಕಾರಿ ನಿ., ಸಹಕಾ–ರಿಯ 2021ರ ಕ್ಯಾಲೆಂಡರ್ ಬಿಡುಗಡೆಯನ್ನು ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ನೇರವೇರಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಪಿ ಶಿವಕುಮಾರ್, ನಿರ್ದೇಶಕರುಗಳಾದ ಶ್ರೀ ಈಶ್ವರಯ್ಯ, ಶ್ರೀ ಸಿದ್ದರಾಮಯ್ಯ, ಶ್ರೀ ಶರತ್ ಹಾಗೂ ಶಿವಕುಮಾರ್ ಉಪಸ್ಥಿತರಿದ್ದರು.



**ಮಂಡ್ಯ :** ಶ್ರೀ ವೀರಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಪ್ರಥಮ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ಶ್ರೀ ಅಶೋಕ್ ರವರು, ಮಾನ್ಯ ನಿರ್ದೇಶಕರು, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಮಂಡ್ಯ ಇವರು ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಶ್ರೀ ಮರಿಲಿಂಗಪ್ಪ ರವರು, ಸಂಸ್ಥಾಪಕರು, ಸಿರಿ ಸಂಸ್ಥೆ, ಮಂಡ್ಯ, ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಮುಖ್ಯ ಪ್ರವರ್ತಕರಾದ ಶ್ರೀ ಬಿ.ಟಿ ಗುರುರಾಜ್ ವಹಿಸಿದ್ದರು. ಸಭೆಯಲ್ಲಿ ಸಹಕಾರಿಯ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ನಂತರದಲ್ಲಿ ಸಹಕಾರಿಗೆ ಆಯ್ಕೆ ಆದ ಎಲ್ಲಾ ನಿರ್ದೇಶಕರನ್ನು ಸನ್ಮಾನಿಸಲಾಯಿತು.

**ದಾವಣಗೆರೆ :** ದಿ. ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ–ಆಪರೇಟಿವ್ ಸಹಕರಿಯ 4ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 13.12.2020 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯ ದುಡಿಯುವ ಬಂಡವಾಳ ರೂ. 5,05,06,000/–, ಠೇವಣಿಗಳು ರೂ. 4,42,72,000/– ಸಾಲಗಳು ರೂ. 4,32,23,000/– ಲಾಭ ರೂ. 17,40,046/–ಗಳಿಸಿರುತ್ತದೆ. ಸಾಮಾನ್ಯ ಸಭೆಯು ಕೋವೀಡ್–19 ಸರಕಾರ ನಿಮಯವಳಿ ಪ್ರಕಾರ ಸಾಮಾಜಿಕ ಅಂತರದೊಂದಿಗೆ ನಡೆಯಿತು.



**ಬೆಂಗಳೂರು :** ದಿನಾಂಕ 19.01.2021 ರಂದು ತೆಲಂಗಾಣ ರಾಜ್ಯದಿಂದ ಆಗಮಿಸಿದ ಸಹಕಾರ ಭಾರತಿಯ ಪ್ರಮುಖರಾದ ಶ್ರೀಯುತ ಕುಮಾರಸ್ವಾಮಿ ಮತ್ತು ಶ್ರೀ ಸುಮಂತ್ ರವರು ಸೌಹಾರ್ದ ಸಹಕಾರಿಗಳ ಬೆಳವಣಿಗೆ ಮತ್ತು ಸಹಕಾರಿಗಳು ನಡೆಸುತ್ತಿರುವ ಚಿಟ್ಸ್ ಕಾರ್ಯಚಟುವಟಿಕೆಗಳ ಕುರಿತು ಅಧ್ಯಯನ ನಡೆಸಲು ಬೆಂಗಳೂರು ನಗರದ ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದರು. ನಂತರ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಕರಿಯಪ್ಪನವರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಶಾರದ ರವರು ಸಹಕಾರಿಯ ಕಾರ್ಯಚಟುವಟಿಕೆ ಮತ್ತು ಚಿಟ್ಸ್ ಬಗ್ಗೆ ಅಗತ್ಯ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ ರವರು ಉಪಸ್ಥಿತರಿದ್ದರು.

ದಿನಾಂಕ 19.01.2021 ರಂದು ತೆಲಂಗಾಣ ರಾಜ್ಯದಿಂದ ಆಗಮಿಸಿದ ಸಹಕಾರ ಭಾರತಿಯ ಪ್ರಮುಖರಾದ ಶ್ರೀಯುತ ಕುಮಾರಸ್ವಾಮಿ ಮತ್ತು ಶ್ರೀ ಸುಮಂತ್ ರವರು ಸೌಹಾರ್ದ ಸಹಕಾರಿಗಳ ಬೆಳವಣಿಗೆ ಮತ್ತು ಸಹಕಾರಿಗಳು ನಡೆಸುತ್ತಿರುವ ಚಿಟ್ಸ್ ಕಾರ್ಯಚಟುವಟಿಕೆಗಳ ಕುರಿತು ಅಧ್ಯಯನ ನಡೆಸಲು ಬೆಂಗಳೂರು ನಗರದ ಮಹಾಯೋಗಿ ವೇಮನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್ ಸಹಕಾರಿಗೆ ಭೇಟಿ ನೀಡಿದರು. ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀಯುತ ಮುನಿರೆಡ್ಡಿ ರವರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ನಾಗೇಶ್ ರವರು ಸಹಕಾರಿಯ ಕಾರ್ಯಚಟುವಟಿಕೆ ಮತ್ತು ಚಿಟ್ಸ್ ಬಗ್ಗೆ ಅಗತ್ಯ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ ರವರು ಉಪಸ್ಥಿತರಿದ್ದರು.



**ಗೌರಿಬಿದನೂರು :** ದಿನಾಂಕ 27.01.2021ರಂದು ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿ ನಿ., ಗೌರಿಬಿದನೂರು ಸಹಕಾರಿಯ ಮೊದಲ ವಾರ್ಷಿಕ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ಸಹಕಾರಿಯ ಆಡಳಿತ ಮಂಡಳಿ ಹಾಗೂ ಸದಸ್ಯರಿಗೆ ಸೌಹಾರ್ದ ಸಹಕಾರಿಯ ಕಾಯ್ದೆ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ಅಗತ್ಯ ಮಾಹಿತಿ ನೀಡಿದರು.




**ಶಿವಮೊಗ್ಗ :** ದಿನಾಂಕ 18.01.2021 ರಂದು ಸಹ್ಯಾದ್ರಿ ಸೌಹಾರ್ದ ಸಹಕಾರಿ ನಿ., ಶಿಕಾರಿಪುರ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ರವರು ಭಾಗವಹಿಸಿ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಅಗತ್ಯ ಮಾಹಿತಿ ನೀಡಿದರು.

**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ 67ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ಸಹಕಾರಿಯ ಧ್ವಜಾರೋಹಣ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ದುಂಡಪ್ಪ ನಿಂ ಆಸಂಗಿ ಇವರು ಅಧ್ಯಕ್ಷತೆಯಲ್ಲಿ ದಿನಾಂಕ 14/11/2020 ರ ಶನಿವಾರ ಬೆಳಿಗ್ಗೆ 10.30 ಘಂಟೆಗೆ ಸಹಕಾರಿಯ ಮುಂಭಾಗದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಎಸ ಎಂ ಪಾಟೀಲ ಸಾ// ಮಲ್ಲಸಮುದ್ರ ಇವರು ನೇರವೇರಿಸಿದರು ನಂತರ ಸಹಕಾರಿಯ ನಿರ್ದೇಶಕರಾದ ಶ್ರೀ ಶಾಂತಪ್ಪ ಬಿ ಕಲಕೇರಿ , ಶ್ರೀ ಅಶೋಕ ಎಸ್ ಸಂಕಣ್ಣವರ ಶ್ರೀ ಸಿದ್ದನಗೌಡ ಪಾಟೀಲ, ಶ್ರೀ ಶಿವಪ್ರಭು ನೀಲಗುಂದ, ಹಾಗೂ ಸವಿತಾ ಎಂ ಪಾಟೀಲ ಮುಂತಾದವರುಗಳು ಸಹಕಾರಿಯ ಆಂದೋಲನದ ಬಗ್ಗೆ ಸಹಕಾರಿಯ ಪ್ರಜಾಪ್ರಭುತ್ವದ ಬಗ್ಗೆ ಸಹಕಾರಿಯ ಮಾರಾಟದ ಬಗ್ಗೆ ಸಹಕಾ–ರಿಯ ಪರಿಸರ & ಉತ್ತಮ ಜೀವನದ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ದಿ ಹಾಗೂ ಸಹಕಾರಿ ಕ್ಷೇತ್ರದಲ್ಲಿ ವೃತ್ತಿಪರ ಬಗ್ಗೆ ಸಹಕಾರಿ ಸಂಘಗಳ ಮಹಿಳೆಯವ–ರಿಗೆ ಯುವಕರಿಗೆ ಅಧಿಕಾರಿಕರಣದ ಬಗ್ಗೆ ವಿವರವಾಗಿ ಮಾತನಾಡಿದರು ಅಧ್ಯಕ್ಷರ ಸಮಯೋಚಿವಾಗಿ ನಾಲ್ಕು ಮಾತುಗಳನ್ನಾಡಿದ ಬಳಿಕ ಸಹಕಾರಿಯ ಮ್ಯಾನೇಜರ ಶ್ರೀ ಸಿ ವ್ಹಿ ಪಾಟೀಲ ಇವರು ಅಭಾರ ಮನ್ನಣಿ ನಂತರ ಸಭೆಯ ಮುಕ್ತಾಯವಾಯಿತು.



**ಬೆಂಗಳೂರು :** ದಿನಾಂಕ 19.01.2021 ರಂದು ಮಹಾಯೋಗಿ ವೇಮನ ಸೌಹಾರ್ದ ಸಹಕಾರಿಯಲ್ಲಿ ಶ್ರೀ ಮಹಾಯೋಗಿ ವೇಮನ ಇದರ 609ನೇ ಜಯಂತೋತ್ಸವದ ಪ್ರಯುಕ್ತ ರೆಡ್ಡಿಜನ ಸಂಘ ಬೆಂಗಳೂರು ಮತ್ತು ರೆಡ್‌ಕ್ರಾಸ್ ಸಂಸ್ಥೆ ಬೆಂಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ರಕ್ತದಾನ ಶಿಬಿರದಲ್ಲಿ ಸಹಕಾರಿಯ ವಿಶೇಷಾಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಂ. ರವರು ಭಾಗವಹಿಸಿದ್ದರು. ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀಯುತ ಮುನಿರೆಡ್ಡಿ ರವರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ನಾಗೇಶ್ ರವರು ಉಪಸ್ಥಿತರಿದ್ದರು.




**ಮಂಚೇನಹಳ್ಳಿ :** ಮಂಚೇನಹಳ್ಳಿ ಸ್ನೇಹ ಸೌಹಾರ್ದ ಸಹಕಾರಿ ನಿ., ವತಿಯಿಂದ ಸಹಕಾರಿಯ ಮೊದಲ ವಾರ್ಷಿಕೋತ್ಸವ ಏರ್ಪಡಿಸಲಾಯಿತು. ಸಭೆಯಲ್ಲಿ ಹರ್ಷಿತ ಎಂ.ಬಿ.ಎ. ಪದವಿಯಲ್ಲಿ ಚಿನ್ನದ ಪದಕವನ್ನು ಪಡೆದಿದ್ದು ಮತ್ತು ಭಾರತಿ ಬಿ.ಎಸ್ಸಿ ಶೇಕಡ 90 ರಷ್ಟು ಅಂಕಗಳನ್ನು ಗಳಿಸಿದ್ದು ಇವರಿಗೆ ಧನಸಹಾಯವನ್ನು ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಮಲ್ಲೇಶ್ವರಯ್ಯ, ಉಪಾಧ್ಯಕ್ಷರಾದ ವಿ. ಪಿ. ಪ್ರಕಾಶ್ ಆಡಳಿತ ಮಂಡಳಿ ನಿರ್ದೇಶಕರಾದ ಚರಣ್ ಕುಮಾರ್, ಭರತ್, ನಂಜುಂಡಪ್ಪ, ನಂದೀಶ್, ಹರೀಶ್, ಗಂಗಾಧರ, ಮುಂತಾದ ಸದಸ್ಯರು ಉಪಸ್ಥಿತರಿದ್ದರು.

**ಶಿವಮೊಗ್ಗ :** ದಿನಾಂಕ 01-01-2021 ರಂದು ಶ್ರೀ ರಾಮೇಶ್ವರ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿಯಮಿತ ತೀರ್ಥಹಳ್ಳಿ ಸಹಕಾರಿ ದಿನಾಚರಣೆಯ ಅಂಗವಾಗಿ ಸಹಕಾರಿ ವತಿಯಿಂದ ತೀರ್ಥಹಳ್ಳಿ ತಾಲ್ಲೂಕಿನ ಜನತೆಗೆ ತುಂಬಾ ಉಪಯುಕ್ತವಾಗಿರುವ ಬ್ಲಡ್ ಬ್ಯಾಂಕ್‌ಗೆ ರೂ. 1,00,000-00 ಗಳನ್ನು ದೇಣಿಗೆ ನೀಡಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಜೆ. ಮಂಜುನಾಥ ಶೆಟ್ಟಿಯವರು ಮಾತನಾಡುತ್ತಾ, ನಮ್ಮ ಸಹಕಾರಿಯು ಹಿರಿಯ ಸಹಕಾರಿಗಳ ಮಾರ್ಗದರ್ಶನದಂತೆ ಮುನ್ನಡೆಯುತ್ತಿದ್ದು, 2019-20ನೇ ಸಾಲಿನಲ್ಲಿ ಸುಮಾರು 33 ಲಕ್ಷ ಲಾಭಗಳಿಸಿದ್ದು, ಸದಸ್ಯರಿಗೆ ಶೇ 15% ಡಿವಿಡೆಂಡ್ ನೀಡಿದ್ದೇವೆ. ಸಹಕಾರಿ ದಿನಾಚರಣೆಯ ದಿನವಾದ ಇಂದು ಬ್ಲಡ್ ಬ್ಯಾಂಕ್‌ಗೆ ನಮ್ಮ ಸಹಕಾರಿಯಿಂದ ರೂ.1,00,000-00 ದೇಣಿಗೆ ನೀಡುತ್ತಿರುವುದು ಸಂತೋಷದಾಯಕ ಎಂದರು. ಸಹಕಾರಿಯ ಕಾರ್ಯಾಲಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಬ್ಲಡ್ ಬ್ಯಾಂಕ್‌ನ ಸದಸ್ಯರಾದ ಡಾ॥ ನಾರಾಯಣ ಸ್ವಾಮಿ, ಡಾ॥ ನಂದಕಿಶೋರ್, ಡಾ॥ ಗಣೇಶ್ ಭಟ್, ಡಾ॥ ನಂದಕಿಶೋರ್ ಯು. ಕೆ, ಕೆ.ಪಿ.ಎಸ್. ಸ್ವಾಮಿ ಹಾಜರಿದ್ದರು. ಸಭೆಗೆ ಆಗಮಿಸಿದ್ದ ಸರ್ವರನ್ನು ಸಹಕಾರಿಯ ನಿರ್ದೇಶಕರಾದ ಮಧುಕರ ಮಯ್ಯರವರು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಮಂಡ್ಯ :** ದಿನಾಂಕ: 09.01.2021 ಶನಿವಾರ ರಂದು ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ವತಿಯಿಂದ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಅಧ್ಯಯನ ಪ್ರವಾಸ ಕೈಗೊಳ್ಳಲಾಗಿತ್ತು.

ಪ್ರಥಮವಾಗಿ ಎಸ್.ಡಿ ಮಾಸ್ತಮ್ಮ ಸೌಹಾರ್ದ ಸಹಕಾರಿ ನಿ., ಮದ್ದೂರು ಕಛೇರಿಗೆ ಭೇಟಿ ನೀಡಿ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಇಓ ರಿಂದ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು. ನಂತರದಲ್ಲಿ ಶಿಂಷಾ ಸಹಕಾರ ಬ್ಯಾಂಕ್ ನಿ., ಮದ್ದೂರು ಟೌನ್ ಕಛೇರಿಗೆ ಭೇಟಿ ನೀಡಿ ಆಡಳಿತ ಮಂಡಲಿ ಸದಸ್ಯರು ಮತ್ತು ವ್ಯವಸ್ಥಾಪಕರೊಂದಿಗೆ ಕಾರ್ಯಚಟುವಟಿಕೆಗಳು ಹಾಗೂ ಸಾರ್ವಜನಿಕರಿಗೆ ನೀಡುವ ಸೌಲಭ್ಯಗಳ ಕುರಿತು ಮಾಹಿತಿಯನ್ನು ಪಡೆಯಲಾಯಿತು. ಮಾರುತಿ ಸೌಹಾರ್ದ ಸಹಕಾರಿ ನಿ., ಬೆಳ್ಳೂರು ಕ್ರಾಸ್, ನಾಗಮಂಗಲ ತಾಲ್ಲೂಕು ಕಛೇರಿಗೆ ಭೇಟಿ ನೀಡಿ ಆಡಳಿತ ಮಂಡಲಿ ಸದಸ್ಯರು ಮತ್ತು ವ್ಯವಸ್ಥಾಪಕರೊಂದಿಗೆ ಕಾರ್ಯಚಟುವಟಿಕೆಗಳು ಹಾಗೂ ಪಿಗ್ಮಿ ಸಂಗ್ರಹದ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು. ನಂತರ ಆದಿಚುಂಚನಗಿರಿ ಮಠದ ಶ್ರೀ ಕಾಲಭೈರವೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ಹಾಜರಿದ್ದ ಸದಸ್ಯರು ಕ್ರೀಡೆಗಳನ್ನು ಆಯೋಜಿಸಿ ಬಹುಮಾನಗಳನ್ನು ವಿತರಿಸಿದರು.



**ಮಂಗಳೂರು :** ಸಿಂಚನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ನೂತನವಾಗಿ ಸಿಂಚನ ಯುನಿವರ್ಸಲ್ ಪಬ್ಲಿಶರ್ಸ್ ಎಂಬ ಪ್ರಕಾಶನ ವಿಭಾಗವನ್ನು ಆರಂಭಿಸಿ ಮೊದಲ ಸಲವೇ ಎರಡು ಉಪಯುಕ್ತ ಪಠ್ಯ ಪುಸ್ತಕಗಳನ್ನು ಪ್ರಕಟಿಸಿರುತ್ತದೆ. ಮಂಗಳೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ. ಶ್ರೀಪತಿ ಕಲ್ಲುರಾಯ ಹಾಗೂ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಜಯವಂತ ನಾಯಕ್ ಇವರು ಜಂಟಿಯಾಗಿ ಬರೆದಿರುವ MONITARY ECONOMICS (ಬಿ.ಎ ಪದವಿಯ ದ್ವಿತೀಯ ಹಾಗೂ ತೃತೀಯ ಸೆಮಿಸ್ಟರ್) ಹಾಗೂ MODERN BANK MANAGEMENT (ಬಿ.ಎ ಪದವಿಯ ದ್ವಿತೀಯ ಹಾಗೂ ತೃತೀಯ ಸೆಮಿಸ್ಟರ್). ಈ ಎರಡು ಪುಸ್ತಕಗಳನ್ನು ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ವಿದ್ಯಾರ್ಥಿಗಳಿಗಾಗಿ ಹೊರತರಲಾಗಿದೆ. ಇನ್ನು ಹೆಚ್ಚು ನೊಂದಾಯಿತ ವೈವಿಧ್ಯಮಯ ಪುಸ್ತಕವನ್ನು ಪ್ರಕಟಿಸುವ ಯೋಜನೆ ಇರುವುದಾಗಿ ತಿಳಿಸಿದರು.

# UCBs after the BR Amendment '20

**(Cooperative Banking in India can never be the same after the Banking Regulation (Amendment) Bill of 2020.)**

**- B.S. Chandrasekhar**



Since Banking Regulation Act was made applicable, in a modified way, to Cooperatives in 1966 Cooperative Banks in the country came under the direct control of RBI but nevertheless the problem of dual regulation continued to haunt. Regulatory norms did not appear to be tight on Cooperative Banks and added to this several banks did not have the requisite professionals on their board. Many may remember the fate of Madhavapura Mercantile Cooperative Bank, a Gujarat-based multi-state cooperative Bank which was unable to pay back to its depositors. RBI cancelled its license in 2012 under Section 22 of BR Act, 1949. Recently, RBI imposed penalties on many UCBs for deficiencies in regulatory compliance; penalty on Vyavasayik Sahakari Bank ltd. and Maharashtra Nagari Sahakari Bank ltd. for non-compliace with the directions on opening of on-site ATM and KYC; on Jowai Co-operative Urban Bank Limited for contravention of the directions issued by RBI on exposure norms, to quote a few. In Dec 2020, RBI appointed an Administrator to look into the affairs of Karnataka Cooperative Bank whose 40,000 depositors were affected by the financial irregularities of the Bank. While moving the Banking Regulation (Amendment) Bill, 2020 in the Lok Sabha, no wonder the finance minister said that the Government was compelled to come out with an ordinance during the lock down period as the condition of the Cooperative Banks was 'grave'.

Cooperative Banks play a significant role in credit delivery in unbanked segments and financial inclusion. However, their role has rather spurned with the expansion of commercial banks and adoption of modern technology. Moreover, Urban Banks are facing severe competition from NBFCs, payment banks and small finance banks apart from Commercial banks. Though there is a role in agriculture for cooperative societies in the rural sector, there is a severe need for change in the urban scenario, particularly in view of ever increasing scams.

In particular, the following major problems appear to be bothering the Urban Cooperative banking sector:

- Alarming financial irregularities
- General aversion to adherence to regulatory norms
- Lack or failure of internal control systems
- Unreported or under reported exposures
- Raising Non Performing Assets

Statistics reveal that the Gross NPAs of urban cooperative banks in the country have rose to 10.8% in 2019-20. (For the previous year the figure was 7.3%). RBI, in its report 'Trends & Progress of Banking in India', has also reported that the number of such financial institutions bracketed in "D Category" (the lowest) has also increased during the last financial year. This speaks for the soundness of cooperative banks. The post Covid-19 situation cannot be expected to be better, though the actual level of NPAs may be hidden thanks to the long moratoriums granted on repayment of loan installments.

As a natural consequence the above developments the confidence level of depositors in cooperative banks is dwindling. DICGC has taken the right step by enhancing its insurance cover for bank deposits to Rs.5 lacs as against earlier Rs.1 lac per depositor. This move is expected to enhance the deposits of Cooperative Banks. Another important measure initiated by RBI is stoppage of dividend payouts from Banks including Cooperative banks. This step of course has been adopted all over the world in view of Covid-19 situation. Bank of England has now permitted banks in UK to start paying share holders dividends. RBI

however, is not likely to permit dividend pay offs as Banks in India are still to show enough fire power to absorb losses on account of bad loans. Even if it permits, most banks including cooperatives, may decide not to pay any dividend for the year 2019-20.

The Banking Regulation (Amendment) Bill, 2020 has sought to bring cooperative banks under the supervision of the Reserve Bank of India with primarily two objectives: i. to improve their governance of cooperative banks and ii. protect the interest of depositors. The second objective is expected to be achieved by empowering RBI to prepare a plan to restructure or amalgamation scheme for a cooperative bank in trouble without placing the bank under a moratorium.

Though this move is likely to be seen as undermining the powers of the Registrar of Cooperative Societies, it has been clarified that the amendments made do not affect the existing powers of the State Registrars of Cooperative Societies and that the objective is protection of depositors' money which is primary for BR Act.

The Ordinance seeking amendments to the Banking Regulation Act of 1949, regulating the functioning of banks in the country, was promulgated on 26 June 20. The amendment Bill was passed in the Lok Sabha on 16 Sep 20 and in the Rajya Sabha on 22 Sep 20. The key features of the amendment are as follows:

i. Cooperative banks were exempted from some of the provisions of BR Act, 1949. By the present amendment, some of these provisions are made applicable to Cooperative Banks also so that the regulation of Cooperative Banks would be similar to that of Commercial Banks.

ii. With this amendment, the Reserve Bank can prescribe qualifications/conditions for employing the Chairmen of Coop Banks; may remove a chairman not found 'fit and proper' and appoint a suitable person for the post. RBI may reconstitute the Board of Directors to ensure adequate number of qualified members.

iii. RBI Act now allows Reserve Bank to work on reconstruction or amalgamation of a bank without imposing a moratorium.

iv. RBI will now have the power to supersede the Board of directors of a cooperative bank in consultation with the concerned state government.

v. There was no provision for Cooperative banks to raise equity or unsecured debt capital from the public. Now, they may do so with prior approval of RBI.

Cooperative Banks were providing banking facilities to individuals and businesses of small means. and the regulatory norms for them were not on par with commercial banks. This factor also resulted in poor performance of Cooperative banks. The present amendment Bill has extended RBI regulation of Cooperative banks in various areas such as Management, Capital, Audit, etc.

'Incorporation, regulation and winding up of Cooperatives' come under 'State list' of the 7th Schedule of the constitution. As 'Banking' comes under the 'Union list', whether the regulation of activity of banking requires regulation of management, capital, audit and winding up may be a pertinent question. Two Coop banks viz. Big Kanchipuram Coop Town Bank ltd. & Velur Coop Urban Bank ltd. had sought stay on operations of the provisions of ordinance which empowers RBI to deal with incorporation, regulation and winding up of coop banks too. The Madras High Court bench said "...unless there is an imminent tangible cause or evidence indicating actual invasion of the rights of the petitioner banks in running the affairs of the Society, it would not be appropriate to consider the issue of interim relief at this stage." It is known that new legislations and amendments are always subject to disputes which get settled over a period of time.

So, it is time for Cooperative Banks to tighten their belts as the new regulation is sure to impact their style of functioning. Cooperative Banks running on sound lines with well established systems and practices may find it

easy to cope with the situation. But others will surely feel the heat of the new regulation.

Urban Cooperative Banks have some clear advantages compared to Commercial banks:

- UCBs are close to their customers. There is a personal touch in their service.
- The rates of interest offered to the depositors are higher.
- UCBs are more responsive to customers' complaints/ grievances.
- Their credit assessment mechanism is friendly and quick.
- The operations are simple compared to that of Commercial banks.
- Use of regional language for communication helps them in customer retention.
- UCBs are quickly adapting to technology, improving customer service.
- Better rapport with and control on staff.

However, some inherent weaknesses need particular attention:

- Limited resources
- Professionalism has to be imbibed in UCBs
- Training needs are generally not taken care of UCBs
- Credit appraisal and monitoring skills lacking
- NPAs may raise once the moratorium period is over
- Audit including concurrent audit has to be tightened

The new legislation allows access to share capital / long term capital fund from public subject to several conditions and Cooperative Banks have to struggle to become eligible. Professionalism is not assured by just Professional directors on board. It should be an integral part of the management. Training has never been a priority in most Banks including Commercial Banks. However, in 2020, there was practically no training because of Covid-19 situation. Training establishments were almost closed or used as quarantine centres for transit staff for a few months in 2020! Things will certainly change for Commercial Banks in the coming years. But Cooperative Banks hardly have any training infrastructure. Cooperative Federations should take the initiative and strengthen the training system. Online training also needs to be implemented quickly.

Priority Sector advances target for Cooperative Banks has been fixed at 75% of total advances (as against 40% hitherto) and this calls for specially equipping the staff. Appraisal skills should be stepped up at various levels. Priority Sector lending is more activity based than security based where as many big advances of UCBs are security based. Cooperatives are sure to find it tough to achieve the high target.

Audit should be viewed more seriously and serious irregularities pointed out during audits should be sorted out quickly. It is known that serious irregularities pointed out in audits several years back, left uncared, resulted in collapse of Cooperative banks. As Cooperative banks come under RBI inspection, the matter assumes further importance now. It is also to be seen as to how RBI will be able to handle the huge task of audit of the large no. of Cooperative Banks.

The challenges indicated above are not totally unknown. But perhaps the time to face them has come now. All this and perhaps much more has to be done not only for retention of depositors' confidence in the survival of Cooperative banks, but also for the sheer survival of Cooperative banks.

Of course, Cooperative Banking in India can never be the same after this Banking Regulation (Amendment). Let's us hope it will be better!



# ಕ್ಯಾನ್‌ಬೆನ್ ಎನ್ನುವ ಕೆಲಸ ಸುಲಭವಾಗಿಸುವ ತಂತ್ರ

– ಧೀರೇಂದ್ರ ನಾಗರಹಳ್ಳಿ

ಕ್ಯಾನ್‌ಬೆನ್ ಅಂದರೆ ಜಪಾನ್ ಭಾಷೆಯಲ್ಲಿ ಸಂಜ್ಞೆಗಳ ಫಲಕ ನೇರವಾಗಿ ವಿಷಯಕ್ಕಿಳಿಯುತ್ತೇವೆ. ಈ ಅಂಕಣದಲ್ಲಿ ಮೊದಲಿಗೆ ಯಾವುದೇ ಪ್ರಶ್ನೆಗಳನ್ನು ಕೇಳುವುದಿಲ್ಲ. ಆದರೆ ನಾನು ಉತ್ತರವನ್ನು ಕೊಡುತ್ತೇನೆ ಅದಕ್ಕೆ ಅಂಕಣವನ್ನು ಓದಿದ ಮೇಲೆ ನೀವೇ ಪ್ರಶ್ನೆ ಕೇಳಿಕೊಳ್ಳಿ. ಬಹುಶಃ ನಮಗೆಲ್ಲರಿಗೂ ಈ ತೆರೆನಾದ ದಿನ ನಿತ್ಯದ ಕೆಲಸಗಳಿವೆ ಎಂದು ಕೊಳ್ಳೋಣ.

**ಭಾಗ – 1**

- ಬೆಳಗಿನ ವಾಯು ವಿಹಾರ ಮತ್ತು ಯೋಗ
- ನಂತರದಲ್ಲಿ ಬೆಳಗಿನ ಉಪಹಾರದ ನಂತರ ಕಛೇರಿಗೆ ಹೋಗುವುದಕ್ಕೆ ಸಿದ್ಧರಾಗುವುದು
- ಕಛೇರಿಯಲ್ಲಿ ದಿನ ನಿತ್ಯದ ಸಾಮಾನ್ಯ ಕೆಲಸಗಳು
- ನಂತರ ಮನೆಗೆ ವಾಪಸ್ಸಾಗುವುದು
- ಮಕ್ಕಳಿಗೆ ಶಾಲೆಯಲ್ಲಿ ಕೊಟ್ಟ ಮನೆಗೆಲಸವನ್ನು ಮಾಡುವುದಕ್ಕೆ ಸಹಾಯ ಮಾಡುವುದು

ಇದಿಷ್ಟು ದಿನಚರಿ ಎಂದಿಟ್ಟು ಕೊಂಡರೆ. ಇದಕ್ಕೆ ಹೊರತಾಗಿಯೂ ನಮಗೆ ಕೆಲವು ಕೆಲಸಗಳು ಬಂದರೆಗುತ್ತವೆ ಅಂದುಕೊಳ್ಳೋಣ. ಉದಾಹರಣೆಗೆ :

**ಭಾಗ – 2**

- ನಾಲ್ಕೈದು ದಿನಗಳಲ್ಲಿ ಮಕ್ಕಳ ಶಾಲಾ ಶುಲ್ಕ ಭರ್ತಿ ಮಾಡಲಿಕ್ಕಿದೆ
- ಮನೆಯಲ್ಲಿ ಯಾರಿಗಾದರು ಆಸ್ಪತ್ರೆಗೆ ಕರೆದು ಕೊಂಡು ಹೋಗುವುದಿದೆ
- ಮನೆಯಲ್ಲಿ ಕೆಟ್ಟು ಹೋಗಿರುವ ಮಿಕ್ಸಿಯನ್ನು ರೆಪೇರಿಗೆ ಕೊಡಬೇಕಾಗಿದೆ

ಈಗ ನೋಡಿ ಭಾಗ–1 ರಲ್ಲಿ ಯಾವುದೂ ಬದಲಾಗುವುದಿಲ್ಲ. ಕಾರಣ ಅದು ನಮ್ಮ ದಿನಚರಿ. ಭಾಗ – 2 ಅದು ನಮಗೆ ಬಂದೆರಗಿದ ಹೆಚ್ಚಿನ ಅಥವಾ ಆಕಸ್ಮಿಕವೂ ಎನ್ನ ಬಹುದಾದ ಕೆಲಸಗಳು. ಭಾಗ–2 ರ ಕೆಲಸಗಳನ್ನು ಎಲ್ಲವೂ ಒಂದೆ ದಿನ ಅಥವಾ ಒಂದೇ ಸಮಯಕ್ಕೆ ಮಾಡಲಾಗುವುದಿಲ್ಲ. ಹಾಗಾಗಿ ಇಲ್ಲಿ ಕೆಳಗೆ ಕೊಟ್ಟಿರುವ ಕೋಷ್ಟಕವನ್ನು ಗಮನಿಸಿ. ಈ ಕೋಷ್ಟಕದಿಂದ ನಮಗೆ ಈಗ ಮಾಡಬೇಕಾಗಿರುವ(ತುರ್ತು) ಕೆಲಸಗಳ ಒಂದು ಸಂಕ್ಷಿಪ್ತ ನೋಟ ಸಿಗುವುದು. ಈ ಎಲ್ಲಾ ಕೆಲಸಗಳನ್ನು ಒಟ್ಟಿಗೆ ಮಾಡಲಾಗುವುದಿಲ್ಲ. ಕಾರಣ ನಮಗಿರುವ ಇತಿಮಿತಿಗಳು. ಆದರೆ ಇಲ್ಲಿ ಒಂದನ್ನು ಗಮನಿಸಬೇಕು. ಆದ್ಯತೆಯು ಪ್ರಮುಖವಾಗಿ ಪಾತ್ರ ವಹಿಸುತ್ತದೆ. ಇಲ್ಲಿ ನೋಡಿ ಕ್ರಮ ಸಂಖ್ಯೆ 2 ಅತೀ ಪ್ರಾಮುಖ್ಯವಾದ ಕೆಲಸ. ಹಾಗಾಗಿ ಅದನ್ನು ಮೊದಲು ಕೈಗೆತ್ತಿಕೊಳ್ಳೋಣ. ಅಂದರೆ ನಮ್ಮ ಮನೆಯ ಸದಸ್ಯರಲ್ಲಿ ಒಬ್ಬರಿಗೆ (ಯಾರಿಗು ಏನೂ ಆಗದಿರಲಿ. ಸುಮ್ಮನೆ ಉದಾಹರಣೆಗೆ).ಆಸ್ಪತ್ರೆಗೆ ಹೋಗಿದ್ದೇವೆ.

| ಕ್ರಮ ಸಂಖ್ಯೆ | ಮಾಡಬೇಕಾಗಿರುವ ಕೆಲಸ | ಪ್ರಗತಿ | ಪೂರ್ಣಗೊಂಡಿದೆ |
|---|---|---|---|
| 1 | ಇವತ್ತಿನ ದಿನದಲ್ಲಿ ಮಕ್ಕಳ ಶಾಲಾ ಶುಲ್ಕ ಭರ್ತಿ ಮಾಡಲಿಕ್ಕಿದೆ. | | |
| 2 | ಮನೆಯಲ್ಲಿ ಯಾರಿಗಾದರು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಿದೆ | | |
| 3 | ಮನೆಯಲ್ಲಿ ಕೆಟ್ಟು ಹೋಗಿರುವ ಮಿಕ್ಸಿಯನ್ನು ರಿಪೇರಿಗೆ ಕೊಡಬೇಕಾಗಿದೆ | | |

ಇಲ್ಲಿ ಆಸ್ಪತ್ರೆಗೆ ಹೋದ ನಂತರ ವೈದ್ಯರ ಸಂದರ್ಶನದ ನಂತರ ವೈದ್ಯರು ಕೆಲವು ಮಾತ್ರೆಗಳನ್ನು ಕೊಟ್ಟು ಕಳುಹಿಸಿದ್ದಾರೆ ಎಂದು ಕೊಂಡರೆ ಕೆಲಸ ಮುಗಿದಂತೆ. ಒಂದು ವೇಳೆ ಹೆಚ್ಚಿನ ವಿವರಕ್ಕಾಗಿ ರಕ್ತ /ಮೂತ್ರದ ಮಾದರಿಗಳನ್ನು ಪರೀಕ್ಷಿಸಲು ಹೇಳಿದ್ದಾರೆ ಎಂದುಕೊಳ್ಳೋಣ. ಹಾಗಾದಾಗ ಆ ಕೆಲಸವು ಮಾಡಬೇಕಾಗಿರುವ ಕೆಲಸದಿಂದ ಪ್ರಗತಿಯ ಹಂತಕ್ಕೆ ಬಂದಿದೆ.

| ಕ್ರಮ ಸಂಖ್ಯೆ | ಮಾಡಬೇಕಾಗಿರುವ ಕೆಲಸ | ಪ್ರಗತಿ | ಪೂರ್ಣಗೊಂಡಿದೆ |
|---|---|---|---|
| 1 | ಇವತ್ತಿನ ದಿನದಲ್ಲಿ ಮಕ್ಕಳ ಶಾಲಾ ಶುಲ್ಕ ಭರ್ತಿ ಮಾಡಲಿಕ್ಕಿದೆ | | |

| | | | |
|---|---|---|---|
| 2 | | ಮನೆಯಲ್ಲಿ ಯಾರಿಗಾದರು ಆಸ್ಪತ್ರೆಗೆ ಕರೆದು ಕೊಂಡು ಹೋಗುವುದಿದೆ(ಮುಂದಿನ ರಕ್ತ/ ಮೂತ್ರ ಪರೀಕ್ಷೆ) | |
| 3 | ಮನೆಯಲ್ಲಿ ಕೆಟ್ಟು ಹೋಗಿರುವ ಮಿಕ್ಸಿಯನ್ನು ರಿಪೇರಿಗೆ ಕೊಡಬೇಕಾಗಿದೆ | | |

ಒಂದನ್ನು ಗಮನಿಸಿ. ನಾವು ಮತ್ತೆ ಎಡದಿಂದ ಬಲಕ್ಕೆ ಹೋಗುವುದಿಲ್ಲ. ಆದರೆ ಬಲದಿಂದ ಎಡಕ್ಕೆ ಬರುತ್ತೇವೆ. ಅಲ್ಲದೆ ಇಲ್ಲಿ ನಾವು ಕೆಲಸವನ್ನು ಮೈಮೇಲೆ ಎಳೆದುಕೊಳ್ಳುವುದಿಲ್ಲ. ಬದಲಾಗಿ ಕೆಲಸವನ್ನು ತಳ್ಳಿ (ಮಾಡಬೇಕಾಗಿರುವ ಹಂತದಿಂದ ಪ್ರಗತಿ ಮತ್ತು ನಂತರ ಮುಕ್ತಾಯ ಹಂತಕ್ಕೆ). ಈಗ ಎಡದಿಂದ ಬಲಕ್ಕೆ ಬಂದರೆ  ಮೊದಲು ನಮಗೆ ದೊರೆಯುವುದು  ರಕ್ತ ಮತ್ತು ಮೂತ್ರ ಮಾದರಿಯ ವರದಿಯನ್ನು ಲ್ಯಾಬೋರೇಟರಿಯಿಂದ ತಂದು ವೈದ್ಯರಲ್ಲಿಗೆ ಹೋಗುವುದು. ಒಂದು ವೇಳೆ ವೈದ್ಯರಲ್ಲಿಗೆ ಹೋಗಿ ಆ ಕೆಲಸವು ಮುಗಿದು ಹೋಗಿದೆ ಎಂದು ಕೊಳ್ಳಿ. ಆಗ ನಮಗುಳಿದಿರುವುದು  ಕೆಳಗಿನ ಕೆಲಸಗಳು. ಅದರಲ್ಲೂ ಆದ್ಯತೆಯ ಕೆಲಸವೆಂದರೆ ಶಾಲಾ ಶುಲ್ಕ ಭರ್ತಿ ಮಾಡುವುದು. ಆ ಕೆಲಸವನ್ನು ಕೈಗೆತ್ತಿಕೊಂಡು ಅದಕ್ಕೆ ಸಂಬಂಧ ಪಟ್ಟ ಕೆಲವು ಬ್ಯಾಂಕ್ ಕೆಲಸಗಳನ್ನು ಪೂರ್ತಿಯಾಗಿದೆ ಎಂದಿಟ್ಟು ಕೊಳ್ಳೋಣ. ಹಾಗಾಗಿ ಆ ಕೆಲಸವು ಮಾಡಬೇಕಾಗಿರುವ ಹಂತದಿಂದ ಪ್ರಗತಿಯ ಹಂತಕ್ಕೆ ಬಂದಿದೆ. ಮತ್ತೆ ನಾವು ಎಡದಿಂದ ಬಲಕ್ಕೆ ಬಂದರೆ ನಮಗೆ ಸಿಗುವುದು ಮತ್ತೆ ಶಾಲಾ ಶುಲ್ಕವನ್ನು ಭರ್ತಿ ಮಾಡುವುದು. ಅಂದರೆ ಅದೇ ಕೆಲಸವನ್ನು ಮೊದಲಿಗೆ ಕೈಗೆತ್ತಿಕೊಳ್ಳಬೇಕು.

| ಕ್ರಮ ಸಂಖ್ಯೆ | ಮಾಡಬೇಕಾಗಿರುವ ಕೆಲಸ | ಪ್ರಗತಿ | ಪೂರ್ಣಗೊಂಡಿದೆ |
|---|---|---|---|
| 1 | | ಇವತ್ತಿನ ದಿನದಲ್ಲಿ ಮಕ್ಕಳ ಶಾಲಾ ಶುಲ್ಕ ಭರ್ತಿ ಮಾಡಲಿಕ್ಕಿದೆ | |
| 2 | | | ಮನೆಯಲ್ಲಿ ಯಾರಿಗಾದರು ಆಸ್ಪತ್ರೆಗೆ ಕರೆದು ಕೊಂಡು ಹೋಗುವುದಿದೆ(ಮುಂದಿನ ರಕ್ತ/ ಮೂತ್ರ ಪರೀಕ್ಷೆ) |
| 3 | ಮನೆಯಲ್ಲಿ ಕೆಟ್ಟು ಹೋಗಿರುವ ಮಿಕ್ಸಿಯನ್ನು ರಿಪೇರಿಗೆ ಕೊಡಬೇಕಾಗಿದೆ | | |

ಮೇಲಿನ ಕೆಲವು ಕೆಲಸಗಳು ಕೇವಲ ಉದಾಹರಣೆ ಅಷ್ಟೆ. ನಮಗೆ ಸಾಕಷ್ಟು ಕೆಲಸಗಳು ದಿನ ನಿತ್ಯ ಬಂದೆರಗುತ್ತವೆ. ಮತ್ತು ಅದಕ್ಕನುಗುಣವಾಗಿ ಒಂದು ಪಟ್ಟಿ ಮಾಡಿಟ್ಟುಕೊಂಡು ಕೆಲಸಗಳನ್ನು ತುಂಬಾ ಸುಲಭವಾಗಿ ಮುಕ್ತಾಯದ ಹಂತಕ್ಕೆ ತೆಗೆದುಕೊಂಡು ಹೋಗ ಬಹುದು.

- ಕೆಲಸಗಳನ್ನು ಮಾಡಬೇಕಾಗಿರುವ ಹಂತದಿಂದ ಶುರು ಮಾಡದೆ ಪ್ರಗತಿ ಹಂತದಿಂದ ಶುರು ಮಾಡುತ್ತೇವೆ.ಕಾರಣ ಪ್ರಗತಿ ಹಂತದಲ್ಲಿರುವ ಕೆಲಸಗಳು ಅತೀ ಆದ್ಯತೆಯ ಕೆಲಸಗಳು.
- ಅಲ್ಲದೆ ನಾವು ಕೆಲಸಗಳನ್ನು ಮೈಮೇಲೆ ಎಳೆದು ಕೊಳ್ಳದೆ ಕೆಲಸಗಳನ್ನು ತಳ್ಳುವ ವಿಧಾನದಿಂದ ಮಾಡುವದಿಂದ ನಮಗೆ ನಾವು ಮಾಡುವ ಕೆಲಸಗಳ ಮೇಲೆ ಒಂದು ನಿಯಂತ್ರಣವಿರುತ್ತದೆ.
- ಎಲ್ಲಕ್ಕಿಂತ ಮಿಗಿಲಾಗಿ ನಾವು ಮಾಡುವ ಕೆಲಸಗಳ ಪ್ರಗತಿಯ ಒಂದು ಸ್ಪಷ್ಟವಾದ ಚಿತ್ರಣ ಸಿಗುತ್ತದೆ. ಇಲ್ಲಿ ಇನ್ನೊಂದು ವಿಚಾರವನ್ನು ಹೇಳಲೇ ಬೇಕು. ಕೆಲಸಗಳನ್ನು ನಿಭಾಯಿಸಲು ಜಪಾನಿಯರು ಕಂಡುಕೊಂಡ ಒಂದು ತಂತ್ರ. ಜಪಾನಿಯರು ಕೆಲಸಗಳನ್ನು ಮಾಡುವಾಗ ಸಂಜ್ಞೆಗಳ ಫಲಕದ ಮೇಲೆ ಒಂದು ಬಣ್ಣ ಬಣ್ಣದ ಚೀಟಿ ಅಂಟಿಸಿ ಆ ಒಂದೊಂದು ಬಣ್ಣಕ್ಕೂ ಒಂದು ವಿವರಣೆಯನ್ನು ಕೊಟ್ಟಿರುತ್ತಾರೆ. ಹೀಗಾದಾಗ ನಾವು ಫಲಕದ ಹತ್ತಿರಕ್ಕೆ ಹೋಗಿ ನೋಡುವುದು ಬೇಕಾಗಿಲ್ಲ. ದೂರದಿಂದಲೆ ನೋಡಿದರೆ ಕೆಲಸಗಳ ಬಗ್ಗೆ ಒಂದು ಅಂದಾಜು ಸಿಗುತ್ತದೆ.

ಇದಿಷ್ಟು ಕ್ಯಾನ್ ಬಾನ್ ಬಗ್ಗೆ. ನಾವು ಕ್ಯಾನ್ ಬಾನ್ ಅನ್ನು ದಿನ ನಿತ್ಯದ ಕೆಲಸಕ್ಕೂ ಅನ್ವಯಿಸಿಕೊಳ್ಳಬಹುದು. ಒಂದು ವೇಳೆ ನಮ್ಮ ದಿನ ಚರಿ ತುಂಬಾ ಬಿಗಿಯಿಂದ (ಅಂದರೆ ಸಮಯದ ಅಭಾವ) ಮತ್ತು ದಿನಚರಿಯನ್ನು ಬಿಟ್ಟು ಮಾಡಬೇಕಾಗಿರುವ ಕೆಲಸಗಳು ಇನ್ನೂ ಹೆಚ್ಚಾಗಿದ್ದರೆ ಆ ಸಂದರ್ಭದಲ್ಲಿ ಕ್ಯಾನ್ ಬಾನ್ ತಂತ್ರಗಾರಿಕೆ ತುಂಬಾ ಫಲಕಾರಿಯಾಗಿರುತ್ತದೆ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–10)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-10)



– ಶ್ರೀ ಯಶವಂತ ಡೋಂಗ್ರೆ

### ಎಸ್‌ಡಿಜಿ 10 : ದೇಶಗಳ ಒಳಗೆ ಮತ್ತು ದೇಶಗಳ ನಡುವೆ ಇರುವ ಅಸಮಾನತೆಯನ್ನು ಕಡಿಮೆ ಮಾಡುವುದು

### (Reduce inequality within and among countries)

ಎಲ್ಲ ದೇಶಗಳ ಮತ್ತು ಅವುಗಳಲ್ಲಿನ ಎಲ್ಲ ಪ್ರದೇಶಗಳ ಜನ, ಎಲ್ಲ ನೆಲೆಯಲ್ಲಿ ಸಮಾನತೆ ಸಾಧಿಸಬೇಕೆನ್ನುವುದು ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಗಳಲ್ಲೊಂದು. ಆದುದರಿಂದ ಈ ಗುರಿಯಲ್ಲಿ ಅಸಮಾನತೆಯನ್ನು ತೊಡೆದುಹಾಕುವ ಬಗೆಗೆ ಒತ್ತು ನೀಡಲಾಗಿದೆ. ಜಗತ್ತಿನಲ್ಲಿ ಶ್ರೀಮಂತ ಹಾಗೂ ಬಡ ದೇಶಗಳ ನಡುವೆ ಅಪಾರ ಅಸಮಾನತೆ ಇದೆ. ಹಾಗೆಯೇ ಬಡ ಮತ್ತು ಶ್ರೀಮಂತ ದೇಶಗಳೆರಡರಲ್ಲೂ ಆರ್ಥಿಕ, ಸಾಮಾಜಿಕ ಮತ್ತು ಲಿಂಗಾಧಾರದಲ್ಲಿ ಬಹಳಷ್ಟು ಅಸಮಾನತೆಗಳಿವೆ. ಇವೆಲ್ಲವನ್ನೂ ಹಂತ ಹಂತವಾಗಿ ಕಡಿಮೆ ಮಾಡುತ್ತಾ ಹೋಗುವುದು ಈ ಗುರಿಯ ಆಶಯ. ಈ ನಿಟ್ಟಿನಲ್ಲಿ, 2030ರ ಹೊತ್ತಿಗೆ ಪ್ರತಿ ದೇಶವೂ ತನ್ನ ಜನಸಂಖ್ಯೆಯ ತಳಮಟ್ಟದ ಶೇಕಡ 40ರಷ್ಟು ಜನರ ಆದಾಯವು ರಾಷ್ಟ್ರೀಯ ಸರಾಸರಿ ತಲಾದಾಯದ ಬೆಳವಣಿಗೆಯ ಪ್ರಮಾಣದಲ್ಲಿ ಬೆಳೆಯುವಂತೆ ನೋಡಿಕೊಳ್ಳಬೇಕೆಂದೂ ಮತ್ತು ಇದೇ ಅವಧಿಯಲ್ಲಿ ಎಲ್ಲೆಡೆ ವಯಸ್ಸು, ಲಿಂಗ, ಅಂಗವೈಕಲ್ಯ, ಜನಾಂಗೀಯತೆ, ಧರ್ಮ ಮುಂತಾದುವುಗಳನ್ನು ಲೆಕ್ಕಿಸದೆ ಎಲ್ಲರನ್ನೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ತರಗಳಲ್ಲಿ ಸೇರ್ಪಡೆಗೊಳಿಸಲು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕೆಂದೂ ಈ ಗುರಿಯಲ್ಲಿ ನಿರ್ದೇಶಿಸಲಾಗಿದೆ. ಈ ಗುರಿಯ ಸಾಧನೆಯನ್ನು ಸುಗಮಗೊಳಿಸಲು ಅನುವಾಗುವಂತೆ ಚಾಲ್ತಿಯಲ್ಲಿರುವ ಶಾಸನಗಳು ಮತ್ತು ನೀತಿಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವಂತೆಯೂ ಮತ್ತು ವಿಶೇಷವಾಗಿ ವೇತನ ಹಾಗೂ ಸಾಮಾಜಿಕ ಸಂರಕ್ಷಣೆಯು ಎಲ್ಲರಿಗೂ ಸಮಾನವಾಗಿ ದೊರೆಯುವಂತೆ ಮಾಡಬೇಕೆಂದೂ ಈ ಗುರಿಯು ವಿಧಿಸುತ್ತದೆ. ಜಾಗತಿಕ ಹಣಕಾಸು ಮಾರುಕಟ್ಟೆಯ ಸುಧಾರಣೆ, ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ತರುವುದು ಮತ್ತು ಇವುಗಳಲ್ಲಿ ಬಡ ದೇಶಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವುದು, ಜನರು ಒಂದು ಪ್ರದೇಶದಿಂದ ಇನ್ನೊಂದಕ್ಕೆ ಮತ್ತು ಒಂದು ದೇಶದಿಂದ ಇನ್ನೊಂದಕ್ಕೆ ಕೆಲಸದ ನಿಮಿತ್ತ ಹೋಗುವ ಮತ್ತು ವಲಸೆ ಹೋಗುವ ಪ್ರಕ್ರಿಯೆಯನ್ನು ಸರಳ ಮತ್ತು ಕ್ರಮಬದ್ಧಗೊಳಿಸಿ ಜನರ ಚಲನಶೀಲತೆಯನ್ನು ಹೆಚ್ಚಿಸುವುದು, ವಿಶ್ವ ವ್ಯಾಪಾರ ಸಂಸ್ಥೆಯ (World Trade Organization) ಒಪ್ಪಂದಗಳಿಗನುಸಾರವಾಗಿ ಬಡ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಭೇದಾತ್ಮಕ ನಿಯಮಗಳನ್ನು ಕ್ಲುಪ್ತವಾಗಿ ಜಾರಿಗೆ ತರುವುದು, ಎಲ್ಲ ದೇಶಗಳಿಗೆ ಮತ್ತು ವಿಶೇಷವಾಗಿ ಅತಿ ಹಿಂದುಳಿದ ದೇಶಗಳು, ಆಫ್ರಿಕನ್ ದೇಶಗಳು, ಮತ್ತು ಸಣ್ಣ ಹಾಗು ದ್ವೀಪ ರಾಷ್ಟ್ರಗಳಿಗೆ ಅವರವರ ಅಭಿವೃದ್ಧಿ ಯೋಜನೆಗಳಿಗನುಸಾರವಾಗಿ ಅಧಿಕೃತ ಅಭಿವೃದ್ಧಿ ನೆರವು ಮತ್ತು ವಿದೇಶೀ ನೇರ ಹೂಡಿಕೆಯೂ ಸೇರಿದಂತೆ ಎಲ್ಲ ರೀತಿಯ ಹಣಕಾಸಿನ ಹರಿವು ಸುಗಮವಾಗಿ ನಡೆಯುವಂತೆ ಮಾಡುವುದು ಮತ್ತು ವಲಸೆಗಾರ ಉದ್ಯೋಗಿಗಳು ತಮ್ಮ ದೇಶಕ್ಕೆ ಕಳುಹಿಸುವ ಹಣದ ವರ್ಗಾವಣೆ ವೆಚ್ಚವು ಶೇಕಡ 3ಕ್ಕಿಂತ ಕಡಿಮೆಯಾಗುವಂತೆ ಮಾಡುವುದರ ಮೂಲಕ ಅಸಮಾನತೆಯನ್ನು ಕಡಿಮೆ ಮಾಡುವುದು ಅಗತ್ಯವೆಂದೂ ಈ ಗುರಿಯಲ್ಲಿ ತಿಳಿಸಲಾಗಿದೆ.

ಜಗತ್ತಿನಲ್ಲಿ ವಿವಿಧ ಬಗೆಯ ಅಸಮಾನತೆಗಳಿವೆಯಾದರೂ ಬಹುಷ: ಅತಿಮುಖ್ಯವಾದುದೆಂದರೆ ಆರ್ಥಿಕ ಅಸಮಾನತೆ. ಅಂತಾರಾಷ್ಟ್ರೀಯ ಅಂಕಿ–ಅಂಶಗಳ ಪ್ರಕಾರ ಜಗತ್ತಿನ ಅತ್ಯಂತ ಮೇಲ್ಸ್ತರದ (ಶ್ರೀಮಂತ) ಶೇಕಡ 10ರಷ್ಟು ಜನರು ಜಗತ್ತಿನ ಆದಾಯದ ಶೇಕಡ 40ರಷ್ಟನ್ನು ಗಳಿಸುತ್ತಿದ್ದರೆ, ಅತ್ಯಂತ ಕೆಳಸ್ತರದ (ಬಡ) ಶೇಕಡ 10ರಷ್ಟು ಜನರು ಜಗತ್ತಿನ ಆದಾಯದ ಶೇಕಡ 2ರಿಂದ 5ರಷ್ಟನ್ನು ಗಳಿಸುತ್ತಿದ್ದಾರೆ. ಈ ಅಂತರವು ಎಲ್ಲ ದೇಶಗಳಲ್ಲೂ ಏರಿಕೆಯಾಗುತ್ತಿರುವುದು ಅತ್ಯಂತ ಕಳವಳದ ಸಂಗತಿ. ಮುಖ್ಯವಾಗಿ ಅರ್ಥವ್ಯವಸ್ಥೆಯಲ್ಲಿ ಜನರ ನೇರ ಭಾಗವಹಿಸುವಿಕೆಯು ಕಡಿಮೆಯಾಗಿರುವುದೇ ಈ ಅಸಮಾನತೆಗೆ ಕಾರಣವಾಗುತ್ತಿದೆ. ಆದುದರಿಂದ ಜನರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಸಂಸ್ಥೆಗಳು ಅಸಮಾನತೆಯನ್ನು ತೊಡೆಯುವಲ್ಲಿ ಪ್ರಮುಖ ಪಾತ್ರ ವಹಿಸಬಲ್ಲವೆಂದು ಬಹುತೇಕ ಅರ್ಥಶಾಸ್ತ್ರಜ್ಞರು ನಂಬುತ್ತಾರೆ. ಸಹಕಾರಿ ಸಂಘಟನೆಗಳು ಸಾಮಾನ್ಯ ಜನರೂ ಭಾಗವಹಿಸುವ ಮತ್ತು ನಿರ್ವಹಿಸುವ ಆರ್ಥಿಕ ಸಂಘಟನೆಗಳಾದುದರಿಂದ ಸಹಜವಾಗಿಯೇ ಎಸ್‌ಡಿಜಿ 10ರ ಗುರಿಸಾಧನೆಯಲ್ಲಿ ಅವುಗಳ ಪಾತ್ರ ಮುಖ್ಯವಾಗುತ್ತದೆ.

### ಸಹಕಾರಿ ಸಂಸ್ಥೆಗಳ ಪಾತ್ರ :

ಬಡ ಮತ್ತು ಶ್ರೀಮಂತ ದೇಶಗಳು, ನಗರ ಮತ್ತು ಗ್ರಾಮೀಣ ಪ್ರದೇಶಗಳು, ಕೃಷಿ ಮತ್ತು ಕೈಗಾರಿಕೆಗಳು, ಶಿಕ್ಷಿತರು ಮತ್ತು ಅನಕ್ಷರಸ್ಥರು, ನಾಗರೀಕ ಸಮಾಜ ಮತ್ತು ಬುಡಕಟ್ಟು ಸಮುದಾಯಗಳು, ಪುರುಷ ಮತ್ತು ಸ್ತ್ರೀಯರು ಈ ಎಲ್ಲ ಪ್ರಭೇದಗಳ ಸಹಕಾರಿ ಸಂಘಟನೆಗಳು ಪ್ರಪಂಚದಾದ್ಯಂತ ಇರವುದನ್ನು ಕಾಣುತ್ತೇವೆ. ಬಹುಷ: ಇಷ್ಟು ವಿಸ್ತೃತವಾದ ನೆಲೆಗಟ್ಟಿರುವ ಮತ್ತು ಜನರ ನೇರ ಭಾಗವಹಿಸುವಿಕೆಯನ್ನು ಸಾಧ್ಯವಾಗಿಸಿದ ಬೇರೆ ಸಾಂಸ್ಥಿಕ ಉದಾಹರಣೆಗಳು ದೊರೆಯಲಾರದು. ಸಹಜವಾಗಿಯೇ ಅಸಮಾನತೆಯನ್ನು ತೊಡೆಯುವಲ್ಲಿ ತಮ್ಮ ವಿಶಿಷ್ಟ ಕೊಡುಗೆ ನೀಡುತ್ತಿರುವ ಸಹಕಾರಿ ಸಂಘಗಳ ಹಲವು ಉದಾಹರಣೆಗಳು ನಮಗೆ ದೊರೆಯುತ್ತವೆ.

ಮೆಕ್ಸಿಕೋದ ಇಸ್ತಮಸ್ ಪ್ರಾಂತ್ಯದಲ್ಲಿರುವ ಬುಡಕಟ್ಟು ಸಮುದಾಯಗಳ ಸಹಕಾರಿ ಸಂಘಟನೆಯು 53 ವಿವಿಧ ಬುಡಕಟ್ಟುಗಳನ್ನು ಒಂದು ಸಂಸ್ಥೆಯ ಆಶ್ರಯದಲ್ಲಿ ತಂದು ಅವರ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಒಂದು ವಿಶೇಷ ನಿಧಿಯನ್ನು ಸ್ಥಾಪಿಸಿ ಅದರ ಮೂಲಕ ಆರ್ಥಿಕ ಮತ್ತು ಸಾಮಾಜಿಕ

ನೆಲೆಯಲ್ಲಿ ಬುಡಕಟ್ಟು ಸಮುದಾಯಗಳನ್ನು ಮುಂದುವರೆದ ಜನಾಂಗಗಳಿಗೆ ಸಮನಾಗಿ ಬೆಳೆಸಲು ಸಹಕಾರಿಯಾಗಿದೆ. 90ರ ದಶಕದಲ್ಲಿ ಮೊರಕ್ಕೋ ದೇಶದ ಅರ್ಗನ್ ಎಣ್ಣೆಗೆ (argan oil) ಎಲ್ಲೆಡೆ ಬೇಡಿಕೆ ಏರಲಾರಂಭಿಸಿತು. ಮೂಲಭೂತವಾಗಿ ಬುಡಕಟ್ಟು ಜನಾಂಗದವರು ತಯಾರಿಸುತ್ತಿದ್ದ ಈ ಎಣ್ಣೆಯ ತಯಾರಿಕೆ ಮತ್ತು ವಿತರಣೆಯನ್ನು ದೊಡ್ಡ ದೊಡ್ಡ ಖಾಸಗಿ ಸಂಸ್ಥೆಗಳು ಆಕ್ರಮಿಸಿಕೊಂಡವು. ಈ ಸಮಯದಲ್ಲಿ ಬೆರ್ಬರ್ ಪ್ರಾಂತ್ಯದ ಗ್ರಾಮೀಣ ಮಹಿಳೆಯರು ಸೇರಿ ಸಹಕಾರಿ ಸಂಸ್ಥೆಯೊಂದನ್ನು ಆರಂಭಿಸಿದರು. ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಆದುನಿಕ ತಂತ್ರಜ್ಞಾನವನ್ನೂ ಬಳಸುತ್ತಾ ಜೊತೆಗೆ ಪಾರಂಪರಿಕವಾಗಿ ಬಂದ ವಿಧಾನವನ್ನೂ ಉಪಯೋಗಿಸುತ್ತಾ ಬಂದ ಈ ಸಹಕಾರಿಯು ತನ್ನ ವ್ಯವಸ್ಥಾಪನೆಯಲ್ಲಿ ಬುಡಕಟ್ಟು ಸಮುದಾಯಗಳಲ್ಲಿದ್ದ ಸಮಾನತೆಯ ಅಂಶಗಳನ್ನೆಲ್ಲ ಅಳವಡಿಸಿಕೊಂಡು ಬೆಳೆಯಿತು. ಇದರ ಪರಿಣಾಮಗಾಗಿ ಈ ಸಹಕಾರಿಯು ಮೊರೊಕ್ಕೋದಲ್ಲಿ ಅರ್ಗನ್ ಎಣ್ಣೆ ತಯಾರಿಕೆಯ ಅತ್ಯಂತ ದೊಡ್ಡ ಮತ್ತು ಉತ್ತಮ ಸಂಘಟನೆಯಾಗಿ ಬೆಳೆದು ಬುಡಕಟ್ಟು ಸಮುದಾಯದ ಜನರ ಅದರಲ್ಲೂ ವಿಶೇಷವಾಗಿ ಮಹಿಳೆಯರ ಆದಾಯವು ಹತ್ತು ಪಟ್ಟು ಹೆಚ್ಚಾಗುವಂತೆ ಮಾಡಿ ಅವರಿಗೆ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆ ದೊರೆಯುವಂತೆ ಮಾಡಿದೆ.

ಇಥಿಯೋಪಿಯಾದ ಅದಿಸ್ ಅಬಾಬದಲ್ಲಿ 1998ರಲ್ಲಿ ಆರಂಭವಾದ 'ಯೆನೆಗ್ಯು ಸ್ಯು ಸ್ಯಾನಿಟರಿ ಸರ್ವಿಸ್ ಕೋಆಪರೇಟಿವ್' ವಿಕಲಾಂಗರಿಗಾಗಿಯೇ ಆರಂಭವಾದ ಸಹಕಾರಿ ಸಂಘ. ಇದು ದೈಹಿಕ ಅಸಾಮರ್ಥ್ಯಹೊಂದಿದ ಮತ್ತು ಅನಕ್ಷರಸ್ಥರಾದವರಿಗೆ ಮನೆ ಮತ್ತು ಕಛೇರಿಗಳ ಬಚ್ಚಲು ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವ ತರಬೇತಿ ನೀಡಿ ನೂರಾರು ಜನ ಕೆಲಸ ಪಡೆದು ಉತ್ತಮ ಆರ್ಥಿಕ ಶಕ್ತಿ ಹೊಂದಲು ಕಾರಣವಾಗಿದೆ. ಮುಖ್ಯವಾಗಿ ಪರಾವಲಂಬಿಗಳಾಗಿರದೆ ತಾವೆ ಗಳಿಸಿ ಜೀವನ ನಡೆಸಲು ಅನುವುಮಾಡಿಕೊಡುವುದರ ಮೂಲಕ ಇವರು ಸಾಮಾಜಿಕ ಗೌರವ ಮತ್ತು ಸಂರಕ್ಷಣೆ ಪಡೆಯಲು ಸಹಕರಿಸುತ್ತಿದೆ. ಸಿಂಗಪುರದ ಅತಿದೊಡ್ಡ ಸಹಕಾರಿ ಸಮೂಹದ ಭಾಗವಾದ ಎನ್‌ಟಿಯುಸಿ ವಿಮಾ ಸಂಸ್ಥೆಯು ಸ್ವಯಂಪ್ರೇರಣೆಯಿಂದ ನರದೌರ್ಬಲ್ಯವಿರುವ ಮಕ್ಕಳಿಗಾಗಿಯೇ ವಿಮಾಯೋಜನೆಯನ್ನು ಆರಂಭಿಸಿ ಸಾವಿರಾರು ಮಕ್ಕಳ ಶುಶ್ರೂಷೆಯು ಸಾಧ್ಯವಾಗುವಂತೆ ಮಾಡಿದೆ. ಅಮೆರಿಕದ ರಾಷ್ಟ್ರೀಯ ಪತ್ತಿನ ಸಹಕಾರಿಗಳ ಮಹಾಮಂಡಳವು ವಿಕಲಾಂಗರ ಕಲ್ಯಾಣಕ್ಕಾಗಿ ಇರುವ ರಾಷ್ಟ್ರೀಯ ಸಂಸ್ಥೆಯ ಸಹಯೋಗದಲ್ಲಿ ವಿಕಲಾಂಗರಿಗಾಗಿಯೇ ವಿಶೇಷ ಪತ್ತಿನ ಯೋಜನೆಗಳನ್ನು ರೂಪಿಸಿದೆ. ಇಟಲಿ ದೇಶವು ಸಾಮಾಜಿಕ ಸಹಕಾರಿ ಸಂಘಗಳಿಗಾಗಿಯೇ (ಸೋಶಿಯಲ್ ಕೋಆಪರೇಟಿವ್) ಪ್ರತ್ಯೇಕ ಕಾಯಿದೆಯನ್ನು ಜಾರಿಗೆ ತಂದಿದ್ದು ಈ ಕಾಯಿದೆಯಡಿಯಲ್ಲಿ 16,000ಕ್ಕಿಂತ ಹೆಚ್ಚು ಸಹಕಾರಿ ಸಂಘಗಳು ಸ್ಥಾಪಿತವಾಗಿವೆ. ಸಾಮಾಜಿಕ ಸಹಕಾರಿ ಸಂಘಗಳು ಸಮಾಜದ ಬಡ ಮತ್ತು ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಸೇವೆಗಳನ್ನು ಒದಗಿಸುತ್ತವೆ. ಹಾಗೆಯೇ ಈ ಸಂಘಗಳಲ್ಲಿ ಶೇಕಡ 30ಕ್ಕಿಂತ ಹೆಚ್ಚು ವಿಕಲಾಂಗ ಸಿಬ್ಬಂದಿ ಇದ್ದಲ್ಲಿ ಸರಕಾರದಿಂದ ವಿಶೇಷ ಸಹಾಯವೂ ದೊರೆಯುತ್ತದೆ. ಈಕ್ವೆಡಾರ್‌ನಲ್ಲಿ 1998ರಲ್ಲಿ ಆರಂಭವಾದ 'ಬೆಲ್ಲ ರಿಕ ಮೈನಿಂಗ್ ಸಹಕಾರಿ ಸಂಘವು' ವಲಸೆಗಾರ ಕಾರ್ಮಿಕರ ರಕ್ಷಣೆ, ಅವರ ವಲಸೆಯನ್ನು ಕ್ರಮಬದ್ಧಗೊಳಿಸುವುದು ಮತ್ತು ಅವರಿಗೆ ಮಧ್ಯಮ ಗಾತ್ರದ ಗಣಿ ಕೈಗಾರಿಕೆಗಳಲ್ಲಿ ಕೆಲಸ ಕೊಡಿಸುವ ಚಟುವಟಿಕೆಯಲ್ಲಿ ತೊಡಗಿದೆ.

ಅಸಮಾನತೆಯ ಸಮಸ್ಯೆಯನ್ನು ಎದುರಿಸುತ್ತಿರುವವರಿಗೆ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನ ಒದಗಿಸುತ್ತಿರುವ ಹಲವು ಸಹಕಾರಿ ಸಂಸ್ಥೆಗಳು ಭಾರತದಲ್ಲಿಯೂ ಕಾಣಸಿಗುತ್ತವೆ. ದೆಹಲಿಯಲ್ಲಿ 1998ರಲ್ಲಿ ಆರಂಭವಾದ ನಿರ್ಮಲ ನಿಕೇತನ್ ಸಹಕಾರಿಯು, ನಗರಕ್ಕೆ ವಲಸೆಬಂದ ಬುಡಕಟ್ಟು ಸಮುದಾಯದ ಮಹಿಳೆಯರಿಗೆ ಮನೆಕೆಲಸದಲ್ಲಿ ತರಬೇತಿ ನೀಡಿ ಅವರುಗಳು ನಗರ ಪ್ರದೇಶದಲ್ಲಿ ಮನೆಗೆಲಸದ ಸೇವೆ ಒದಗಿಸುವ ಅವಕಾಶ ಕಲ್ಪಿಸಿದೆ. ಅಲ್ಲದೆ ಇತರೆ ಸಂಸ್ಥೆಗಳ ಜೊತೆ ಕೈಜೋಡಿಸಿ ವಲಸಿಗರಾಗಿ ಬರುವ ಬುಡಕಟ್ಟು ಕುಟುಂಬಗಳಿಗೆ ಅಗತ್ಯ ರಕ್ಷಣೆ ದೊರೆಯುವಂತಾಗಲು ಕರಡು ನೀತಿಯೊಂದನ್ನು ರಚಿಸಿ ಸರಕಾರಕ್ಕೆ ಸಲ್ಲಿಸಿದೆ. ಹೀಗೆಯೇ ಗಿರಿಜನ ಸಹಕಾರಿ ಸಂಘಗಳು, ಮಹಿಳಾ ಸಹಕಾರಿ ಸಂಘಗಳು, ಕೂಲಿ ಕಾರ್ಮಿಕರ ಸಹಕಾರಿ ಸಂಘಗಳು ಮುಂತಾದುವುಗಳು ಆಯಾ ವರ್ಗಗಳ ಏಳಿಗೆಗಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನೂ ನೋಡಬಹುದು. ವಿವಿಧ ಬಗೆಯ ಅಸಮಾನತೆಗಳನ್ನು ಕಡಿಮೆಮಾಡುವ ಕುರಿತಂತೆ ಸಹಕಾರಿ ಸಂಘಟನೆಗಳು ಈ ಕೆಳಗಿನ ಕೆಲವು ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಬಹದಾಗಿದೆ.

1. ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳಿಗೆ ಅನುಕೂಲವಾಗುವಂತೆ ಇಟಲಿ ಮತ್ತು ಇತರೆ ಐರೋಪ್ಯ ದೇಶಗಳ ಮಾದರಿಯಲ್ಲಿ ಸಾಮಾಜಿಕ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಸರಕಾರ ಮತ್ತು ಸಹಕಾರ ಮಹಾಮಂಡಳಗಳು ಕಾನೂನು ರಚನೆಗೆ ಕ್ರಮವಹಿಸಬಹುದು
2. ಈಗಾಗಲೇ ಇರುವ ಬುಡಕಟ್ಟು ಸಮುದಾಯಗಳು ಮತ್ತು ಇತರೆ ಅಂಚಿನಲ್ಲಿರುವ ಸಮುದಾಯಗಳ ಸಹಕಾರಿ ಸಂಘಗಳನ್ನು ಬಲಪಡಿಸಲು ಕ್ರಮ ಕೈಗೊಳ್ಳಬಹುದು
3. ಸಹಕಾರಿ ಸಂಘಗಳು ವಿವಿಧ ಹಿಂದುಳಿದ ಮತ್ತು ಅಸಮಾನತೆಯ ಸಮಸ್ಯೆಯಲ್ಲಿರುವವರಿಗೆ ವಿಶೇಷ ಪತ್ತಿನ ಯೋಜನೆಗಳನ್ನು ರೂಪಿಸಬಹುದು
4. ಗ್ರಾಮೀಣ ಪ್ರದೇಶದಲ್ಲಿರುವ ಸಹಕಾರಿ ಸಂಘಗಳು ಆರ್ಥಿಕ ಮತ್ತು ಸಾಮಾಜಿಕವಾಗಿ ಅಂಚಿನಲ್ಲಿರುವ ಜನರನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತರಲು ಅಗತ್ಯವಾದ ಸೇವೆಗಳನ್ನು ಒದಗಿಸಬಹುದು
5. ಸಹಕಾರಿ ಸಂಸ್ಥೆಗಳು ಸರಕಾರದ ವಿವಿಧ ವಿಭಾಗಗಳು ಮತ್ತು ಸ್ವಯಂಸೇವಾ ಸಂಘಟನೆಗಳ ಸಹಯೋಗದಲ್ಲಿ ಹಿಂದುಳಿದ ಸಮುದಾಯಗಳಿಗೆ ಶಿಕ್ಷಣ, ತರಬೇತಿ, ಅವರುಗಳು ಉತ್ಪಾದನಾ ಕ್ಷೇತ್ರದಲ್ಲಿ ತೊಡಗುವಂತೆ ಮಾಡುವುದು, ಅವರುಗಳು ಪಾರಂಪರಿಕವಾಗಿ ಉತ್ಪಾದಿಸುವ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವುದು ಮುಂತಾದ ಚಟುವಟಿಕೆಗಳನ್ನು ಆರಂಭಿಸಬಹುದು.

ಅಸಮಾನತೆಯನ್ನು ಕಡಿಮೆ ಮಾಡುವ ಪ್ರಕ್ರಿಯೆಯಲ್ಲಿ ಎಲ್ಲರೂ ಭಾಗಿಗಳಾಗಬೇಕಾದುದು ಅನಿವಾರ್ಯ. ಪರಸ್ಪರ ಸಹಕಾರದಿಂದ ಮಾತ್ರವೇ ಈ ಸಮಸ್ಯೆಯನ್ನು ಎದುರಿಸುವುದು ಸಾಧ್ಯ. ಮುಖ್ಯವಾಗಿ ಉತ್ಪಾದನೆ ಮತ್ತು ವಿತರಣಾ ಚಟುವಟಿಕೆಗಳಲ್ಲಿ ಹೆಚ್ಚಿನ ಜನರು ಭಾಗವಹಿಸುವಂತೆ ಮಾಡಿದಾಗ ಮಾತ್ರ ಅಸಮಾನತೆಯ ಪ್ರಮಾಣವನ್ನು ಕಡಿಮೆಮಾಡಬಹುದು. ಆದುದರಿಂದ ಜನರು ತಮ್ಮ ಅಗತ್ಯಗಳಿಗಾಗಿ ತಾವೇ ರಚಿಸಿಕೊಂಡು, ತಾವೇ ನಡೆಸಿಕೊಂಡು ಹೋಗಬಹುದಾದ ಸಹಕಾರಿ ಸಂಘಟನೆಗಳು ಸಂಖ್ಯೆಯಲ್ಲಿ ಮತ್ತು ಶಕ್ತಿಯಲ್ಲಿ ಹೆಚ್ಚಾಗುತ್ತಾ ಸಾಗಿದಲ್ಲಿ ಅಸಮಾನತೆಯು ತಾನೇ ತಾನಾಗಿ ಕಡಿಮೆಯಾಗುತ್ತಾ ಹೋಗಬಹುದು.

# ಸ್ವಸಹಾಯ ಗುಂಪುಗಳು, ಪರಿಕಲ್ಪನೆ ಏಕೆ ಮತ್ತು ಹೇಗೆ?

– ಶ್ರೀ ಶಂಕರ ಹೆಗಡೆ

**"ಯಾವ ಹಳ್ಳಿಯ ಜನರು ಸ್ವಾವಲಂಬಿಗಳಾಗಲು ಪ್ರಯತ್ನಿಸುವುದಿಲ್ಲವೋ ಆಹಳ್ಳಿಯ ಅಭಿವೃದ್ಧಿಗಾಗಿ ಲಕ್ಷಗಟ್ಟಲೆ ಹಣ ಖರ್ಚು ಮಾಡಿದರು ಪ್ರಯೋಜನವಿಲ್ಲ"**

**– ಸ್ವಾಮಿ ವಿವೇಕಾನಂದರು**

**ಪೀಠಿಕೆ : ಸ್ವಸಹಾಯ ಗುಂಪುಗಳು ಎಂದರೇನು ?**

ಸಮಾಜದ ಬಡ ಕುಟುಂಬಗಳ ಸಮಾನ ಮನಸ್ಕರ ಸಾಮಾಜಿಕ ಅಥವಾ ಆರ್ಥಿಕ ಹಿನ್ನಲೆಯಳ್ಳ ಪರಸ್ಪರ ವಿಶ್ವಾಸದಿಂದ ರಚಿಸಿಕೊಳ್ಳುವ ಒಂದು ಅನೌಪಚಾರಿಕ ಗುಂಪುಗಳಿಗೆ ಸ್ವಸಹಾಯ ಗುಂಪುಗಳು ಎಂದು ಕರೆಯಬಹುದು.

ಸ್ವಸಹಾಯ ಗುಂಪುಗಳು ಪರಿಕಲ್ಪನೆಯನ್ನು ವಿಶ್ವಕ್ಕೆ ನೀಡಿದ ಕೀರ್ತಿ ಬಾಂಗ್ಲಾದೇಶದ ಪ್ರೊ॥ ಮೊಹಮದ್ ಯೂನಿಸ್ ಅವರಿಗೆ ಕಿರುಸಾಲ ಯೋಜನೆಯಲ್ಲಿ ನೋಬಲ್ ಪಾರಿತೋಷಕ ಬಂದಿರುವುದು ಗಮನಾರ್ಹ. ಸ್ವಸಹಾಯ ಗುಂಪುಗಳು ಮಹಿಳೆಯರ ಸಬಲೀಕರಣ ಮತ್ತು ಸ್ವಾವಲಂಬನೆಯ ತಮ್ಮ ಹಾದಿಯಲ್ಲಿ ಪ್ರಮುಖ ಹಾಗೂ ಪ್ರಬಲ ಅಸ್ತ್ರವಾಗಿದೆ. ವಿಶೇಷತವಾಗಿ ಗ್ರಾಮೀಣ ಪ್ರದೇಶಗಳ ಮಹಿಳೆಯರು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಯನ್ನು ಸುಧಾರಿಸಿಕೊಳ್ಳಲು ಮತ್ತು ಬಡತನ ನಿರ್ಮೂಲನೆಗೆ ಸಹಾಯಕಾರಿಯಾದ ಸ್ವಸಹಾಯ ಗುಂಪುಗಳ ಪ್ರಯೋಗಗಳು ಜಗತ್ತಿನ ಬಾಂಗ್ಲಾದೇಶ ಫಿಲಿಫೈನ್ಸ್ ಮತ್ತು ಇತರೆ ದೇಶಗಳಲ್ಲಿ ಯಶ್ವಸಿಯಶಗಿ ಕೈಗೊಳ್ಳಲಾಗಿದೆ.

**ಸ್ವಸಹಾಯ ಗುಂಪುಗಳ ರಚನೆ ಹಿನ್ನಲೆ ಈ ಕೆಳಗಿನಂತಿದೆ.**

**ನಮ್ಮ ದೇಶದ ಮುಖ್ಯ ಸಮಸ್ಯೆಗಳೇನು ?**

* ಬಡತನ * ನಿರುದ್ಯೋಗ * ಜನಸಂಖ್ಯೆಯಲ್ಲಿ ತೀವ್ರ ಹೆಚ್ಚಳ * ಸಂಪನ್ಮೂಲಗಳ ಮಿತಿಮೀರಿದ ಬಳಕೆ * ಅನಕ್ಷರತೆ * ಭ್ರಷ್ಟಾಚಾರ

**ಬಡವರ ಸಮಸ್ಯೆಗಳೇನು?**

* ಅನಕ್ಷರತೆ * ದೊಡ್ಡ ಕುಟುಂಬ * ನಿರುದ್ಯೋಗ
* ಆಸ್ತಿ ಇಲ್ಲ * ಅನಾರೋಗ್ಯ * ಅಸಹಾಯಕತೆ
* ದುಶ್ಚಟಗಳು * ಸಾಲದ ಹೊರೆ

**ಬಡವರ ಸಮಸ್ಯೆಗಳನ್ನು ಯಾರು ಪರಿಹರಿಸಬೇಕು ?**

* ಸರಕಾರ * ಸ್ವಯಂ ಸೇವಾ ಸಂಸ್ಥೆಗಳು * ಬ್ಯಾಂಕುಗಳು * ದೇವರು * ಅವರೇ

**ಬಡವರ ಸಮಸೆಗಳನ್ನು ಅವರೇ ಹೇಗೆ ಪರಿಹರಿಸಿಕೊಳ್ಳಬಹುದು ?**

* ಒಗ್ಗಟ್ಟಿನಿಂದ * ಉಳಿತಾಯ ಮಾಡುವುದರಿಂದ * ಪರಸ್ಪರ ಪ್ರೀತಿ ಮತ್ತು ವಿಶ್ವಾಸದಿಂದ * ಅಕ್ಷರ ಕಲಿಕೆಯಿಂದ
* ತಮ್ಮ ಸಾಲದ ಅವಶ್ಯಕತೆಗಳನ್ನು ತಾವೇ ಪೂರೈಸಿಕೊಂಡು * ಸ್ವಸಹಾಯ ಸಂಘಗಳ ರಚನೆಯ ಮೂಲಕ * ಬ್ಯಾಂಕಿನಿಂದ /ಸಹಕಾರ ಸಂಘಗಳಿಂದ ಸಾಲ ಪಡೆದು ಆರ್ಥಿಕ ಏಳಗಯಿಂದ

**ಸ್ವಸಹಾಯ ಎಂದರೇನು?**

* ದಿನಾಲು ಒಂದು ಮೀನು ಕೊಡುವ ಬದಲು ಹಿಡಿಯುದನ್ನು ಕಲಿಸಿ.
* ಬೇಡುವ ಪ್ರವೃತ್ತಿಯಿಂದ ನೀಡುವ ಪ್ರವೃತ್ತಿಗೆ ಒಯ್ಯುವುದು
* ಜಗತ್ತನ್ನು ದ್ವೇಷಿಸುವ ಬದಲು ತನ್ನನ್ನು ಪ್ರೀತಿಸಲು ಕಲಿಯುದು
* ಎಲ್ಲರ ಜೊತೆಗೆ ಬದುಕಲು ಕಲಿಸುವುದು
* ಜೀವನದಲ್ಲಿ ನಂಬಿಕೆ ಮೂಡಲು ಅವಕಾಶ ಕಲ್ಪಿಸುವುದು
* ದುಶ್ಚಟಗಳಿಂದ ಹೊರಬರಲು ಸಹಕರಿಸುವುದು

**ನಮ್ಮ ದೇಶದಲ್ಲಿ ಮೈರಾಡ ಸಂಸ್ಥೆ ಸ್ವಸಹಾಯ ಗುಂಪಿನ ಪರಿಕಲ್ಪನೆಯನ್ನು ಅಳವಡಿಸಿಕೊಂಡು ಗ್ರಾಮೀಣಾಭಿವೃದ್ಧಿ ಸಾಧಿಸಿದೆ.**

1992 ರಲ್ಲಿ ನಬಾರ್ಡ ಇಂತಹ ಗುಂಪುಗಳು ಮತ್ತು ಬ್ಯಾಂಕುಗಳ ಜೊತೆಗೆ ಸಂಪರ್ಕ ಕಲ್ಪಿಸುವ ಮಾದರಿ ಯೋಜನೆಯನ್ನು ಜಾರಿಯಲ್ಲಿ ತಂದಿತು. ತುಮಕೂರು ಜಿಲ್ಲೆಯಲ್ಲಿ ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು 2001 ರಲ್ಲಿಯೇ ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ.ಎನ್.ರಾಜಣ್ಣನವರು ಮಾರ್ಗದರ್ಶನದಲ್ಲಿ ಸ್ವಸಹಾಯ ಗುಂಪುಗಳ ರಚನೆ ಮತ್ತು ಜೋಡಣೆ ಕಾರ್ಯವನ್ನು ಪ್ರಾರಂಭಿಸಿ ಪ್ರಗತಿ ಸಾಧಿಸೂತ್ತಾ ಬಂದಿದೆ.

**ಸ್ವಸಹಾಯ ಗುಂಪು ಅಂದರ ಏನು ?**

* 10 ರಿಂದ 20 ಒಂದೇ ಮನೋಭಾವನೆಯುಳ್ಳ ಬಡ ಜನರು
* ಪ್ರೀತಿ, ವಿಶ್ವಾಸ, ಒಗ್ಗಟ್ಟು, ಒಮ್ಮತದಿಂದ ಇರುವಂತವರು
* ನಿರಂತರ ಉಳಿತಾಯ ಮತ್ತು ಸಾಲದ ಮೂಲಕ ತಮ್ಮ ಹಳ್ಳಿಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಪರಿಸರದ ಪ್ರಗತಿಯನ್ನು ಸಾಧಿಸುವರು.

**ಸ್ವಸಹಾಯ ಗುಂಪುಗಳು ಗುಣ ವಿಶೇಷಗಳು**

* ಎಲ್ಲರು ಬಡವರು
* ಒಂದು ಕುಟುಂಬದಿಂದ ಒಬ್ಬ ಸದಸ್ಯ
* ಒಂದೇ ಪ್ರದೇಶದಲ್ಲಿ ವಾಸಿಸುವರು
* 18 ರಿಂದ 60 ವರ್ಷ ವಯೋಮಿತಿ
* ಸಮಾನ ಮನಸ್ಕರು (ಉದ್ಯೋಗ,ಜಾತಿ,––)
* ಪ್ರತಿ ವಾರ ಉಳಿತಾಯ ಮಾಡುತ್ತಾರೆ
* ಪ್ರತಿನಿಧಿ ಒಂದು ಮತ್ತು ಪ್ರತಿನಿಧಿ ಎರಡು ಗುಂಪಿಗೆ ಮುಂದಾಳತ್ವ ನೀಡುತ್ತಾರೆ.
* ಪ್ರತಿ ನಿಧಿ ಒಂದು ಪ್ರತಿನಿಧಿ ಎರಡು ವರ್ಷಕ್ಕೊಮ್ಮೆ ಒಮ್ಮತದಿಂದ ಬದಲಾಗುತ್ತಾರೆ.
* ವಾರಕ್ಕೊಮ್ಮೆ ತಮ್ಮ ಉಳಿತಾಯವನ್ನು ಬ್ಯಾಂಕಿನಲ್ಲಿ ಜಮಾ ಮಾಡುತ್ತಾರೆ.
* ಮೂರು ತಿಂಗಳವರೆಗಿನ ಸಭೆಗಳಲ್ಲಿ ಉಳಿತಾಯಕ್ಕೆ ಮಹತ್ವ ಕೊಡುತ್ತಾರೆ.

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 40
Licensed to post without Prepayment License No. PMG BG/WPP-384/2020-2022.



* ಲೆಕ್ಕ ಪತ್ರ ಚೆನ್ನಾಗಿ ಇಡುತ್ತಾರೆ.
* 3 ರಿಂದ 6 ತಿಂಗಳವರೆಗೆ ಆಂತರಿಕ ಸಾಲದ ವ್ಯವಹಾರ ಮಾಡುತ್ತಾರೆ. (ಆರೋಗ್ಯ, ವಿದ್ಯಾಭ್ಯಾಸ, ಆಹಾರ, ಒಂದು ಕುರಿ/ಆಡು,ಕೋಳಿ,ಕಾಯಿಪಲ್ಲೆ ವ್ಯಾಪಾರ)
* 6 ತಿಂಗಳಿಂದ 36 ತಿಂಗಳವರೆಗೆ ಬ್ಯಾಂಕಿನ ಜೊತೆ ಸಂಪರ್ಕ ಕಲ್ಪಿಸಿ ಆರ್ಥಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ.
* ಗುಂಪು ಆರ್ಥಿಕ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ.
* ಸಾಲೇತರ ಚಟುವಟಿಕೆಗಳಲ್ಲಿ (ಸಾಮಾಜಿಕ) ತೊಡಗುತ್ತಾರೆ.
* ಗುಚ್ಛಗಳನ್ನು ರಚಿಸಿಕೊಂಡು ಗುಂಪುಗಳ ನಿರ್ವಹಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ.
* ತಮ್ಮ ಹಳ್ಳಿಯ ಸಮಗ್ರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಾರೆ.
* ತಮ್ಮ ಗುಂಪಿನ ಸದಸ್ಯರ ಕುಟುಂಬ ಜೀವನ ಸುಧಾರಣೆಗಾಗಿ ದೀರ್ಘಕಾಲಿನ ಉಳಿತಾಯ ಯೋಜನೆಗಳನ್ನು ಸದಸ್ಯರಿಗಾಗಿ ಯೋಜಿಸುತ್ತಾರೆ.

**ಸ್ವಸಹಾಯ ಗುಂಪುಗಳನ್ನು ರಚಿಸುವ ಬಗ್ಗೆ**

* ಕನಿಷ್ಠ 10 ಮಂದಿಯನ್ನು ಗುಂಪು ರಚನೆಗೆ ಒಂದು ನಿಗದಿತ ಅವಧಿಯ ಒಳಗೆ ಒಂದುಗೂಡಿಸಲು ತಿಳಿಸಿ ಮುಂದಿನ ಸಭೆಯ ದಿನಾಂಕವನ್ನು ನಿರ್ಧರಿಸಿ ಕ್ರಮ ತೆಗೆದುಕೊಳ್ಳುವುದು.

1) ಗುಂಪಿನ ಹೆಸರು
2) ಯಾವ ವಾರ ಸಭೆ ಮಾಡುತ್ತಾರೆ? ಎಷ್ಟು ಗಂಟೆಗೆ ? ಎಲ್ಲಿ?
3) ಪ್ರತಿ ವಾರ ಸಭೆ ಸದಸ್ಯರ ಉಳಿತಾಯ (ಸದಸ್ಯರ ಪೈಕಿ ಅತಿ ಬಡವೆಗೆ ಕೂಡಾ ಸಾಧ್ಯವಾಗಿರಬೇಕು.)
4) ಪ್ರತಿ ನಿಧಿ 1 ಮತ್ತು ಪ್ರತಿನಧಿ 2 ಆಯ್ಕೆ, ಚರ್ಚಾ ಪುಸ್ತಕ ಬರೆಯುವ ಬಗ್ಗೆ.
5) 6 ತಿಂಗಳ ನಂತರ ಗ್ರೇಡಿಂಗ್ ಮಾಡಿ ಗ್ರೇಡಿಂಗ್ ಪ್ರಕಾರ ಗುಂಪು ಸಾಲಕ್ಕೆ ಅರ್ಹ ಇದ್ದಲ್ಲಿ ಮತ್ತು ಉಂಪು ಇಚ್ಛಿಸಿದಲ್ಲಿ ಸಾಲದ ಸದ್ಬಳಕೆ ಬಗ್ಗೆ ತರಬೇತಿ ಮಾಡಿ ಅಗತ್ಯವಿರುವ ಸಾಲದ ವ್ಯವಸ್ಥೆ ಮಾಡಿಕೊಳ್ಳುವುದು.

**ಗುಂಪಿನ ಪ್ರಾರಂಭಿಕ ಉಪ ನಿಯಮಗಳು :**

ಪ್ರತಿಯೊಂದು ಸ್ವಸಹಾಯ ಗುಂಪು ತನ್ನ ಪ್ರಥಮ ಸಭೆಯಲ್ಲಿ ಎಲ್ಲ ಸದಸ್ಯರುಗಳ ಸಮಕ್ಷಮ ಪ್ರಾರಂಭಿಕ ಉಪನಿಯಮಗಳನ್ನು ನಬಾರ್ಡ ಸಂಸ್ಥೆಯ ನಿರ್ದೇಶನಕ್ಕೆ ಒಳಪಟ್ಟು ಅಂಗೀಕರಿಸಬೇಕು ಮತ್ತು ಉಪನಿಯಮಗಳ ಅನ್ವಯ ಸಂಘದ ಎಲ್ಲ ವ್ಯವಹಾರಗಳನ್ನು ನಡೆಸತಕ್ಕದು.

ಯಾವುದೇ ಸದಸ್ಯರನ್ನು ಉಚ್ಛಾಟಿಸುವ ಮತ್ತು ಹೊಸ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳುವ ಅಧಿಕಾರ ಗುಂಪಿನ ಸಭೆಗಿರುತ್ತದೆ, ಸದಸ್ಯರಿಂದ ಸಾಲ ವಸೂಲಿ ಮಾಡುವ ಮತ್ತು ಉಳಿತಾಯ ಹಣವನ್ನು ಸಂಗ್ರಹಿಸುವ ಜವಾಬ್ದಾರಿ ಗುಂಪಿನ ಪ್ರತಿ ಸದಸ್ಯರ ಮೇಲಿರುತ್ತದೆ.

ಉಚ್ಛಾಟಿತ ಅಥವಾ ಗುಂಪನ್ನು ತೊರೆಯುವ ಸದಸ್ಯರಿಗೆ ಅವರ ಉಳಿತಾಯ ಒಟ್ಟು ಮೊತ್ತದಲ್ಲಿ ಶೇಕಡಾ 25 ರಷ್ಟು ಕಡಿತಗೊಳಿಸಿ ಉಳಿದ ಶೇಕಡ 75 ರಷ್ಟು ಹಣವನ್ನು ಹಿಂತಿರುಗಿಸಲಾಗುವುದು. ಆ ಸಮಯದಲ್ಲಿ ಸಾಲಬಿದ್ದರೆ, ಆ ಹಣವನ್ನು ಸರಿಹೊಂದಿಸಿಕೊಳ್ಳಲಾಗುವುದು. ಆದಾಗ್ಯೂ ಸಾಲ ಉಳಿದರೆ ಅದನ್ನು ಪೂರ್ತಿ ವಸೂಲಿ ಮಾಡಿದ ನಂತರ ಬಿಡುಗಡೆ ಮಾಡುವುದು. ಗುಂಪನ್ನು ತ್ಯಜಿಸುವ ಸದಸ್ಯರ ರಾಜೀನಾಮೆ ಗುಂಪಿನಲ್ಲಿ ಅಂಗೀಕಾರವಾಗಿರಬೇಕು.

ಹೊಸ ಸದಸ್ಯರನ್ನು ಮಧ್ಯದ ಅವಧಿಯಲ್ಲಿ ಸೇರ್ಪಡಿಸಿಕೊಳ್ಳುವ ನಿರ್ಣಯವನ್ನು ಕೈಗೊಂಡಲ್ಲಿ ಪ್ರವೇಶವಾಗುವ ಹೊಸ ಸದಸ್ಯರ ಇತರೆ ಹಾಲಿ ಸದಸ್ಯರ ಒಟ್ಟು ಉಳಿತಾಯದ ಮೊತ್ತಕ್ಕೆ ಸರಿಸಮನಾಗಿ ಉಳಿತಾಯ ಹಣ ಸಂದಾಯ ಮಾಡಿ ಸೇರಬೇಕು. ಅಣಥವರಿಗೆ ಮಧ್ಯ ಪ್ರವೇಶದ ದಿನದಿಂದ ಕನಿಷ್ಠ ಮೂರು ತಿಂಗಳವರೆಗೆ ಯಾವುದೇ ಸಾಲ ಸೌಲಭ್ಯ ವಿಸ್ತರಿಸಲಾಗಿದು.

ಪ್ರತಿ ಮಾರ್ಚ ತಿಂಗಳ ವರ್ಷಾಂತ್ಯಕ್ಕೆ ಗುಂಪಿನ ಲಾಭ-ನಷ್ಟ ಬ್ಯಾಂಕಿನವರ ನೆರವಿನಿಂದ ಲೆಕ್ಕ ಹಾಕಿ ಲೆಕ್ಕ ಪರಿಶೋಧಕರಿಂದ ಪರಿಶೋಧನೆ ಮಾಡಿಕೊಳ್ಳುವುದು ಒಳಿತು.

**ಉಪ ಸಂಹಾರ :**

ಒಟ್ಟಿನಲ್ಲಿ ಸ್ವಸಹಾಯ ಗುಂಪುಗಳು ಗ್ರಾಮೀಣ ಪ್ರದೇಶದ ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದು ದೇಶದ ಆರ್ಥಿಕ ಉನ್ನತಿಗೆ ಸಹಕಾರಿಯಾಗಿರುವ ಪ್ರಬಲ ಸಾಧನವಾಗಿರುತ್ತದೆ. ತುಮಕೂರು ಜಿಲ್ಲೆಯಲ್ಲಿ ತುಮಕೂರು ಡಿ.ಸಿ.ಸಿ ಬ್ಯಾಂಕಿನ ತನ್ನ ಎಲ್ಲಾ ಶಾಖೆಗಳ ಮುಖಾಂತರ ಮತ್ತು 236 ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ಸ್ವಸಹಾಯ ಗುಂಪುಗಳ ರಚನೆ ಮತ್ತು ಜೋಡಣೆಯಲ್ಲಿ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ.

ಅಲ್ಲದೆ ಸರ್ಕಾರದ ಕಾಯಕ ಯೋಜನೆ SGSY ಯೋಜನೆಗಳ ಮುಖಾಂತರ ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವು ತರಬೇತಿಯನ್ನು ನಡೆಸುತ್ತಾ ಬಂದಿರುತ್ತದೆ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಫೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010